


KARNATAKA FOLKLORE UNIVERSITY

ಬುರ್ರಕಥಾ ಜಯಮ್ಮ

ಡಾ. ಕೆ. ಪ್ರೇಮಕುಮಾರ

ಬುರ್ರಕಥೆ ಜಯಮ್ಮ

ಡಾ. ಕೆ. ಪ್ರೇಮಕುಮಾರ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – ೫೮೧ ೨೦೫

BURRAKATHE JAYAMMA

By
Dr. K. Preamakumar
Senior Research Officer
Director, Centre for Folklore Translation
Karnataka Janapada Univerisity, Gotagodi
Mob : 94481 65132

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 205
Shiggavi Taluk, Haveri Dist, Karnataka
Phone: 0836 - 2255180

Pages: ________ **Price: ________**

www.janapadauni.in

First Impression : 2013

ISBN 978-93-83149-05-6

ಬೆಲೆ : ಪಿಪಿಪಿಪಿಪಿಪಿಪಿ

ಮುಖಪುಟ: **ಮಂಜುನಾಥ**

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೨೦೫,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,
ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು – ೫೬೦ ೦೪೦

ಮುದ್ರಣ
ಸ್ವ್ಯಾನ್ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾ ಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿ ಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿ ಕೊಂಡು ಬದುಕು ತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲ ವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರ ಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವ ದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣ ಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿ ಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿ ಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂ ಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರ ವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮು ಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟ ವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲ ಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲ ಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜ ಕವಾಗಿಯೂ, ದೃಢವಾಗಿಯೂ ರೂಢಿಸ ಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ,

ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಕಲೆ ಮತ್ತು ಕಲಾವಿದರ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಜನಪದ ಕಲಾವಿದರ ಬದುಕಿನ ಭಾಗವೇ ಆಗಿರುವ ಕಲೆಗಳು ಅವರಿಗೆ ಉಸಿರಿನಷ್ಟೇ ಸಹಜ. ತಮ್ಮ ಜೀವನದುದ್ದಕ್ಕೂ ಕಲೆಯನ್ನೇ ಉಂಡುಟ್ಟು ಉಸಿರಾಡಿದ ಕಲಾವಿದರು ಕಲೆಗಳ ಕಡೆಗೆ ವಿಮುಖರಾಗುತ್ತಿರುವ ಈ ದಿನಮಾನಗಳಲ್ಲಿ ಕಲೆಗಳು ಕಳೆದುಹೋಗುತ್ತಿರುವ ಭೀತಿ ಎದುರಾಗಿದೆ. ಈ ಬಗೆಯ ಅಪಾಯಗಳನ್ನು ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ವಿರಳ ಸಾಧನೆ ಮಾಡಿರುವ ಕಲಾವಿದರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಅವರೊಂದಿಗೆ ಮುಕ್ತ ಸಂವಾದ/ಚರ್ಚೆ ನಡೆಸುವ ವಿಶಿಷ್ಟ, ವಿನೂತನ "ಪಟ್ಟಾಂಗ" ಎಂಬ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸುತ್ತಿದೆ. ಇದರ ಜೊತೆಗೆ ಕಲಾವಿದರ ಬದುಕು–ಬವಣೆ, ಕಷ್ಟ–ಸಂಕಷ್ಟ, ಕಲಾಸಾಧನೆ ಹೀಗೆ ಒಟ್ಟು ಕಲಾಜೀವನದ ಯಶೋಗಾಥೆಯನ್ನು ಬಿಂಬಿಸುವ ಕಿರುಪುಸ್ತಿಕೆಯನ್ನು ಪ್ರಕಟಿಸುವ ವಿಶಿಷ್ಟ ಯೋಜನೆಯನ್ನೂ ರೂಪಿಸಲಾಗಿದೆ.

ಜಾಗತೀಕರಣ, ಆಧುನೀಕರಣದ ಪ್ರಭಾವದಿಂದಾಗಿ ದೇಸೀ ಕಲೆಗಳು ಅವಸಾನದ ಅಂಚಿಗೆ ಬಂದಿವೆ. ಈ ನಡುವೆಯೂ ಕೆಲವೊಂದು ಪ್ರದೇಶದಲ್ಲಿ ಕಲಾವಿದರು ತಮ್ಮ ಕಲೆಗಳನ್ನು ಜೀವಂತವಾಗಿಟ್ಟುಕೊಂಡು ಬರುತ್ತಿರುವುದು ಆಶಾದಾಯಕ ಬೆಳವಣಿಗೆ. ಕಲೆ ಮತ್ತು ಕಲಾವಿದರ ಬದುಕಿನ ಮಗ್ಗಲುಗಳನ್ನು ಅರ್ಥ ಮಾಡಿಕೊಳ್ಳುವ ಜರೂರು ಇರುವ ಈ ಸಂದರ್ಭದಲ್ಲಿ ಮಂಡ್ಯದ ಬುರ್ರಕಥಾ ಜಯಮ್ಮ ಅವರ ಬದುಕಿನ ಏಳು–ಬೀಳುಗಳು, ಬುರ್ರಕಥೆ ಕಲೆಯ ಸ್ವರೂಪ, ಸೋಲಿಗರ ಕುಲಮೂಲ ಕಥನಗಳನ್ನು ಸಂಕ್ಷಿಪ್ತವಾಗಿ, ಸಾಂದ್ರವಾಗಿ ಕಟ್ಟಿಕೊಡುವ ಪ್ರಯತ್ನ ಇಲ್ಲಿ ಯಶ ಕಂಡಿದೆ. ಮೌಖಿಕ ಕಥನ ಕಲೆಗಳು ವಾಚಿಕ ನೆಲೆಗೆ ಒದಗಿ ಕಲಾವಿದರ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುವ ಮೂಲಕ ಜನಪದ ಕಾವ್ಯಗಳ ಹಾಡುಗಾರಿಕೆಯ ತೌಲನಿಕ ಅಧ್ಯಯನದ ಸಾಧ್ಯತೆಗಳ ಕಡೆಗೆ ಬೆರಳು ಮಾಡುವ ಪ್ರಕೃತ ಕಿರು ಹೊತ್ತಿಗೆಯು ಓದಿಸಿಕೊಂಡು ಹೋಗುವ ಗುಣಪಡೆದುಕೊಂಡಿದೆ. ಭಾಷೆ ಸರಳವೂ ಸುಂದರವೂ ಆಗಿದ್ದು, ಈ ಪ್ರಮಾಣದ ಕೃತಿಯನ್ನು ರಚಿಸಿಕೊಟ್ಟ ಡಾ. ಕೆ. ಪ್ರೇಮಕುಮಾರ ಅವರಿಗೆ ಕೃತಜ್ಞತೆಗಳು ಸಲ್ಲಬೇಕು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ್ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ – ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಮೌಖಿಕ ಕಲಾವಿದರ ಸಂಖ್ಯೆ ಕರ್ನಾಟಕದಲ್ಲಿ ಇಂದು ಇಳಿಮುಖವಾಗುತ್ತಿದೆ. ಚರಿತ್ರೆಯ ಮೂಲ ಆಕರಗಳು ದೊರಕುವುದು ನೆಲಮೂಲ ಕಥನಗಳಿಂದ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಕಲಾವಿದರ ಜೀವನದ ಸ್ಥಿತಿ–ಗತಿ ಬದಲಾದಂತೆ ಅವರು ಹೇಳುವ ಕತೆಗಳು ಸ್ವರೂಪಭಿನ್ನತೆ ಹೊಂದಿ ಅಸ್ತಿತ್ವದಲ್ಲಿರಲು ಹೆಣಗುತ್ತವೆ. ಈ ಹಿನ್ನೆಲೆಯಲ್ಲಿ ಮಂಡ್ಯದ ಬುರ್ರಕಥಾ ಜಯಮ್ಮಳ ಕಲಾಬದುಕು ಸ್ಥಿತ್ಯಂತರಕ್ಕೆ ಒಳಪಟ್ಟ ಕಾರಣ ಜಯಮ್ಮಳ ಕತೆಗಳೂ ಮೂಲರೂಪವನ್ನು ಸ್ವಲ್ಪಮಟ್ಟಿಗೆ ಉಳಿಸಿಕೊಂಡು ಆಧುನಿಕ ಕಾಲದ ಜೊತೆ ಸಮೀಕರಣಗೊಂಡಿರುವುದು ಇದಕ್ಕೆ ನಿದರ್ಶನ. ಜಯಮ್ಮನ ಕುಲಮೂಲ ಕಥನ, ಬುರ್ರಕಥೆ ಹಿನ್ನೆಲೆ, ಸೋಲಿಗ ಜನಾಂಗದ ಚರಿತ್ರೆ, ಕಥಾವಸ್ತುಗಳಲ್ಲಾದ ಪಲ್ಲಟ ಮುಂತಾದ ಸಂಗತಿಗಳ ಅನಾವರಣ ಮಾಡಿದ ಈ ಕಿರುಪುಸ್ತಿಕೆಗೆ ಚಾರಿತ್ರಿಕವಾಗಿ ಮಹತ್ವದ ಸ್ಥಾನವಿದೆ. ಸಂಶೋಧನೆಯ ಸೆಳಕುಗಳನ್ನು ಮೂಡಿಸುವಂತಹ ಇಲ್ಲಿನ ಬರವಣಿಗೆ ಹೃದಯಸ್ಪರ್ಶಿಯಾಗಿದೆ. ಓದುಗನ ಅಂತಃಕರಣವನ್ನು ಮಿಡಿಯುವಂತಿದೆ. ಇಂತಹ ಅಮೂಲ್ಯವಾದ ಕಿರುಕೃತಿಯನ್ನು ರಚಿಸಿದ ಡಾ. ಕೆ. ಪ್ರೇಮಕುಮಾರ ಅವರು ಅಭಿನಂದನಾರ್ಹರು.

ಪ್ರೊ. ಸ.ಚಿ. ರಮೇಶ

ನಿರ್ದೇಶಕರು, ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಸಹೃದಯ ಓದುಗರಿಗೆ

ಆಡಳಿತದ ಕೆಲಸಗಳ ನಡುವೆ ಬರವಣಿಗೆ ತುಂಬಾ ಕಷ್ಟ. ಆದರೂ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಸಚಿವನಾಗಿ ಸೇವೆಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಸಮಾಜಕಾರ್ಯ ವಿಶ್ವಕೋಶ, ಚರಿತ್ರೆಕೋಶ, ಮುಂತಾದ ಗ್ರಂಥಗಳಲ್ಲಿ ಬಿಡಿ ಲೇಖನಗಳನ್ನು ಬರೆಯುವ ಅವಕಾಶ ದೊರೆತಿತ್ತು. ಆದಾಗ್ಯೂ ಯಾವುದೇ ಲೇಖನ, ಅನುವಾದವನ್ನು ಪ್ರಕಟಿಸಬೇಕೆಂದಾಗ ಸೂಕ್ತವಾದ ಭಾಷೆಯನ್ನು ಬಳಸಿದ್ದೇನೆಯೋ ಇಲ್ಲವೋ, ಇದು ಪ್ರಕಟಣೆಗೆ ಯೋಗ್ಯವೋ ಅಲ್ಲವೊ ಎಂಬ ಅಂಜಿಕೆ ಇದ್ದೇ ಇರುತ್ತಿತ್ತು.

ಕಲಾವಿದರ ನೋವು ಸಂಕಷ್ಟಗಳನ್ನು ನಾನು ಹತ್ತಿರದಿಂದ ಬಲ್ಲೆ. ಜಯಮ್ಮನ ಭಾಷೆ, ಆಕೆ ನಡೆದುಬಂದ ಹಾದಿ, ಸಂಸಾರ ನಡೆಸಲು ಕಲೆಯನ್ನು ಆಶ್ರಯಿಸಿದ ಪರಿ ನನ್ನ ಮನಮುಟ್ಟಿತು. ಆಕೆಯ ಬಗ್ಗೆ ಕಿರು ಹೊತ್ತಿಗೆ ಬರೆಯಬೇಕೆಂಬ ನಿರ್ದೇಶನ ಬಂದಾಗ ಸಂತೋಷದಿಂದ ಒಪ್ಪಿಕೊಂಡೆ. ಕೆಲಸ ಒಪ್ಪಿಕೊಂಡ ಮೇಲೆ ಜಯಮ್ಮನ ಮಾತುಗಳು ದಾಖಲಾಗಿದ್ದ ರೆಕಾರ್ಡ್‌ರನ್ನು ಪಡೆದು ಆಕೆಯ ಮಾತುಗಳನ್ನು ಅಕ್ಷರ ರೂಪಕ್ಕೆ ತರಲು ಪ್ರಯತ್ನಿಸಿದೆ. ಇಡೀ ಪಟ್ಟಾಂಗ ಕಾರ್ಯಕ್ರಮದ ಒಟ್ಟು ಸಂವಾದ ಕೆಲವೇ ಪುಟಗಳ ಮಾಹಿತಿ ಮಾತ್ರ ಆಗಿತ್ತು. ಅದನ್ನು ಒಂದು ಪುಸ್ತಕ ರೂಪಕ್ಕೆ ತರುವ ಪೂರ್ವದಲ್ಲಿ ಆಕೆಯ ಮಾತುಗಳನ್ನು ನಿಧಾನವಾಗಿ ಗಮನಿಸುತ್ತಾ ಹೋದೆ. ಆಕೆ ನಾವು ಸೋಲಿಗರು ಸ್ವಾಮಿ ಎಂಬ ಮಾತು ನನ್ನನ್ನು ಮತ್ತಷ್ಟು ವಿಚಾರ ಮಾಡುವಂತೆ ಮಾಡಿತು. ಅನೇಕ ವಿದ್ವಾಂಸರೊಂದೊಗೆ, ಸೋಲಿಗರನ್ನು ಕುರಿತಾದ ಕೃತಿಗಳೊಂದಿಗೆ ಸಂವಾದಕ್ಕಿಳಿದೆ. ಕ್ರಮೇಣ ಪಟ್ಟಾಂಗದ ಸಂವಾದವನ್ನು ಒಂದು ಕೃತಿಯ ರೂಪಕ್ಕೆ ತರಲು ಸಾಧ್ಯ ಎಂಬ ವಿಶ್ವಾಸ ಮೂಡಿತು. ಅನೇಕ ಕಡೆ ಆಕೆಯ ಮಾತುಗಳನ್ನು ಮೂಲ ದಾಟಿಯಲ್ಲೇ ದಾಖಲಿಸಿದ್ದೇನೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರು ಹಾಗೂ ಮಾನ್ಯ ಕುಲಸಚಿವರುಗಳ ಪ್ರೋತ್ಸಾಹದಿಂದ ಈ ಸ್ವತಂತ್ರ ಕೃತಿ ಸಿದ್ಧವಾಗಲು ಸಾಧ್ಯವಾಯಿತು. ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ನನ್ನ ಕುಟುಂಬದವರ ಸಹನೆ, ವಿಶ್ವವಿದ್ಯಾಲಯದ ಸಿಬ್ಬಂದಿಗಳ ಸಹಕಾರವನ್ನು ನಾನು ತುಂಬು ಹೃದಯದಿಂದ ಸ್ಮರಿಸಲೇಬೇಕು. ನನ್ನ ಈ ಕಿರು ಪ್ರಯತ್ನವನ್ನು ಸಹೃದಯ ಓದುಗರು ಸ್ವೀಕರಿಸಿದರೆ ಅದೇ ನನ್ನ ಮುಂದಿನ ಹೆಜ್ಜೆಗೆ ಸ್ಫೂರ್ತಿ ಎಂದು ಭಾವಿಸುತ್ತೇನೆ.

ಡಾ. ಕಿ. ಪ್ರೇಮಕುಮಾರ
ಹಿರಿಯ ಸಂಶೋಧನಾಧಿಕಾರಿ
ನಿರ್ದೇಶಕ, ಜಾನಪದ ಭಾಷಾಂತರ ಕೇಂದ್ರ

ಪರಿವಿಡಿ

ಪೀಠಿಕೆ

ಪ್ರಧಾನವಾಹಿನಿಗೆ ಬರಲಾಗದ ಅದೆಷ್ಟೋ ಪಾರಂಪರಿಕ ಕಲಾವಿದರೂ ತಾವು ಇದ್ದಲ್ಲಿಯೇ ತಮಗೆ ತೋಚಿದಷ್ಟು ಕಲಾ ಸೇವೆ ಮಾಡಿ ಅದರಿಂದಲೇ ತಮ್ಮ ಬದುಕನ್ನು ಸಾಗಿಸುತ್ತಾ ಜೀವ ಕಳೆದಿದ್ದಾರೆ. ಅಂತಹ ಸಾಧಕರ ಬದುಕು ಬವಣೆಯನ್ನು ಕೇಳುವವರ್‍ಯಾರೂ ಇಲ್ಲ. ಅಂತಹ ಯಾವ ನಿರೀಕ್ಷೆಯೂ ಅವರಲ್ಲಿಲ್ಲ. ಕಲೆಗಾಗಿ ಬದುಕಿದ ಜೀವಗಳು ಅವು.

ಇಂತಹ ಸಾಧಕರನ್ನು ಗುರುತಿಸಿ ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಅವರೊಂದಿಗೆ ಕೆಲವೇ ಅತಿಥಿಗಳು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಸಂವೇದನಾತ್ಮಕ ಸಂವಾದ ನಡೆಸಿ ಅವರಿಂದ ಮನದಾಳದ ಮಾತುಗಳನ್ನು ಹೊರ ತೆಗೆದು ದಾಖಲಿಸುವ ಉದ್ದೇಶದಿಂದ 'Incamera Programme' ಆಗಿ ಪಟ್ಟಾಂಗವನ್ನು ಆಯೋಜಿಸಲಾಗುತ್ತಿದೆ. ಈ ಪಟ್ಟಾಂಗ ಕಾರ್ಯಕ್ರಮವನ್ನು ಪರಿಕಲ್ಪಿಸಿ ಕಲಾವಿದರೊಂದಿಗೆ, ವಿದ್ವಾಂಸರು ಒಡನಾಡಬೇಕೆಂದು ಹಂಬಲಿಸಿದವರು ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಇದರಿಂದ ಸಂಶೋಧಕರಿಗೆ ಕಲಾವಿದರ ಬಗೆಗಿನ ಮಾಹಿತಿಗಳು ಹೇರಳವಾಗಿ ದೊರೆಯುತ್ತವೆ. ಈ ಪಟ್ಟಾಂಗ ಕಾರ್ಯಕ್ರಮದಡಿ ಈವರೆಗೆ ನಾಲ್ಕು ಜನ ಕಲಾವಿದರೊಂದಿಗೆ ಸಂವಾದ ನಡೆಸಲಾಗಿದೆ. ಅವರ ಬದುಕು ಬವಣೆ, ಕಲೆ ಅವರಿಗೆ ಕೊಟ್ಟದ್ದೇನು, ಕಲೆಗಾಗಿ ಅವರು ಪಟ್ಟ ಕಷ್ಟನಷ್ಟಗಳೇನು, ಕಲೆಯ ಸಂಪರ್ಕದಿಂದ ಅವರು ಅನನ್ಯತೆಯನ್ನು ಹೇಗೆ ಸ್ಥಾಪಿಸಿಕೊಂಡರು ಎಂಬ ಎಲ್ಲ ವಿವರಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲಾಗುತ್ತದೆ. ಹೀಗೆ ಸೆರೆಹಿಡಿಯಲಾದ ಮಾಹಿತಿಯನ್ನು ಒಂದು ಕಿರುಪುಸ್ತಿಕೆಯ ರೂಪದಲ್ಲಿ ಪ್ರಕಟಿಸಬೇಕೆಂಬುದು ವಿಶ್ವವಿದ್ಯಾಲಯದ ಮಹದುದ್ದೇಶ.

ಈ ಉದ್ದೇಶದ ಭಾಗವಾಗಿ ಈ ಕಿರುಹೊತ್ತಿಗೆ ನಿಮ್ಮ ಕೈ ಸೇರುತ್ತಿದೆ. ಕಲಾವಿದರೊಬ್ಬರನ್ನು ಈ ನಾಡಿಗೆ ಪರಿಚಯಿಸುವ ಸೌಭಾಗ್ಯ ನನಗೆ ದೊರೆತದ್ದು ಪುಣ್ಯವೇ ಸರಿ. ಇದನ್ನು ಆಗುಮಾಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಜಯಮ್ಮನ ಕಲೆಯ ಹಿಂದಿನ ಕುಲ

ಯಾವುದೇ ಕಲೆ ಕರಗತವಾಗಬೇಕಾದರೆ ಅದು ಪಾರಂಪರಿಕವಾಗಿರಬೇಕು ಅಥವಾ ನಿರಂತರ ಪರಿಶ್ರಮದಿಂದ ಅದನ್ನು ಸಿದ್ಧಿಸಿಕೊಳ್ಳಲು ಸಾಧ್ಯ. ಪರಂಪರಾಗತವಾಗಿ ತಾತ ಮುತ್ತಾತರಿಂದ ಕಲಿತ ವಿದ್ಯೆಯನ್ನು ಮುಂದೆ ಕೊಂಡೊಯ್ಯಬೇಕಾದ ಸಂಕಲ್ಪವೂ ಕಲಾವಿದರಿಗೆ ಇರಲೇಬೇಕು.

ಜಯಮ್ಮನವರೇ ತಮ್ಮ ಮಾತುಗಳಲ್ಲಿ ಹೇಳುವಂತೆ ಇವರು ಸೋಲಿಗರು. ಬುರ್‍ರಕಥಾ ಈರಮ್ಮ ಬುಡ್ಗ ಜಂಗಮರು. ಅವರು ಆಂಧ್ರಮೂಲದಿಂದ ನೇರವಾಗಿ ಕರ್ನಾಟಕಕ್ಕೆ ಬಂದವರು. ತಿರುಪತಿಯ ಆಸುಪಾಸಿನಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಜಯಮ್ಮ ಬಂದು, ಅಲ್ಲಿಂದ ಮಲೆಮಹದೇಶ್ವರನ ಸಾನ್ನಿಧ್ಯದಿಂದ ಕರ್ನಾಟಕಕ್ಕೆ ಪ್ರವೇಶ ಪಡೆದವರಿರಬಹುದು.

ಸೋಲಿಗರು ಮೈಸೂರು ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದ ಮೂಲನಿವಾಸಿಗಳು. ಇವರು ಆದಿವಾಸಿ ಬುಡಕಟ್ಟಿಗೆ ಸೇರಿದವರು. ಸೋಲಿಗ ಎಂಬ ಶಬ್ದವನ್ನು ***ಶೋಲಗ, ಶೋಲಿಗ, ಶೋಲಿಗರ್*** ಮುಂತಾದ ರೀತಿಯಲ್ಲಿ ಕರೆಯುತ್ತಾರೆ. ಈ ಪದದ ವ್ಯುತ್ಪತ್ತಿಯ ಬಗ್ಗೆಯೂ ಒಂದೇ ಅಭಿಪ್ರಾಯವಿಲ್ಲ. ಡಾ. ಲೂಯಿಸ್ ಅವರ ಪ್ರಕಾರ ಇದು ತಮಿಳಿನ 'ಶೋಲೈ' ಅಂದರೆ ದಟ್ಟವಾದ ಕಾಡಿನಲ್ಲಿ ವಾಸಮಾಡುವವರು ಎಂದರ್ಥ. ಈ ಪದದ ಅಪಭ್ರಂಶವೇ ಸೋಲಿಗ.

ಮಹದೇಶ್ವರಸ್ವಾಮಿಗೆ ಸಂಬಂಧಿಸಿದವ 'ಸ್ವಾಮಿ'ಗೆ ಆಗುತ್ತಾನೆ. 'ಸ್ವಾಮಿ' ಎನ್ನುವುದು ತದ್ಭವದಲ್ಲಿ 'ಸೋಯಿ' ಆಗುತ್ತದೆ. ಅದೇ ರೀತಿ 'ಸ್ವಾಮಿಗ' ಎನ್ನುವುದು 'ಸೋಯಿಗ' ಆಗಿ ಕಾಲಕ್ರಮೇಣ 'ಸೋಲಿಗ' ಆಗಿರಬಹುದು ಎಂಬ ಅಭಿಪ್ರಾಯವಿದೆ.

ಈ ಸಮುದಾಯಕ್ಕೆ ಅಂಟಿಕೊಂಡ ಅನೇಕ ಪೌರಾಣಿಕ ದಂತಕಥೆಗಳು ಚಾಲ್ತಿಯಲ್ಲಿವೆ. ಸಾವಣನೆಂಬ ರಾಕ್ಷಸನಿಗೆ ಸೆರೆಸಿಕ್ಕ ಕಾರಯ್ಯ ಮತ್ತು ಮಾದೇಶ್ವರನೆಂಬ ಇಬ್ಬರು ಅಣ್ಣತಮ್ಮಂದಿರು 'ಸಾವಣ'ನ ಒಂದು ಜೊತೆ ಜೋಡು ಹೊಲಿದುಕೊಡು ಎಂದು ಮಹದೇಶ್ವರನನ್ನು ಕೇಳಿದ್ದಕ್ಕೆ ಸಾವಣನ ಸಂಹಾರಕ್ಕೆ ಇದು ಸು–ಸಂದರ್ಭ ಎಂದು ತಿಳಿದು ಕೃಷ್ಣದೇವರ ಸಹಾಯ ಪಡೆದು ಅರಗಿನಿಂದ ಸಿದ್ಧಪಡಿಸಿದ

ಚಪ್ಪಲಿಯನ್ನು ನೀಡಿ ಸಾವಣನನ್ನು ಕಾದ ಕಲ್ಲಿನ ಮೇಲೆ ನಡೆಯುವಂತೆ ಮಾಡಿ ಆತನು ಶಾಖದ ಬೇಗೆಯಿಂದ ಸಾಯುವಂತೆ ಮಾದೇಶ್ವರ ಮಾಡುತ್ತಾನೆ. ಇದರಿಂದ ಕುಪಿತನಾದ ಅಣ್ಣ ಕಾರಯ್ಯ ಈ ಮೋಸಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ತಮ್ಮನನ್ನು ಸಂಹರಿಸಲು ಮುಂದಾಗುತ್ತಾನೆ. ರಕ್ಷಣೆಗಾಗಿ ಗುಹೆಯನ್ನು ಹೊಕ್ಕ ಮಾದೇಶ್ವರ ಕ್ಷಮಿಸುವಂತೆ ಅಣ್ಣನನ್ನು ಬೇಡಿಕೊಳ್ಳುತ್ತಾನೆ. ಕಾರಯ್ಯನ ಪ್ರತಿಮೆ ಮಾಡಿ ಅಲ್ಲಿ ಪೂಜೆ ಮಾಡುವುದಾಗಿ ಆಣೆ ಇಡುತ್ತಾನೆ. ಆಗ ಕಾರಯ್ಯ ತಮ್ಮ ಮಾದೇಶ್ವರನನ್ನು ಕ್ಷಮಿಸುತ್ತಾನೆ. ಮಾದೇಶ್ವರನ ಬೆಟ್ಟ ಹತ್ತುವ ಮಾರ್ಗದಲ್ಲಿ ಕಾರಯ್ಯನ ಮೂರ್ತಿ ಇರುವುದನ್ನು ಈಗಲೂ ಗಮನಿಸಬಹುದಾಗಿದೆ. ಬೆಟ್ಟಕ್ಕೆ ಹೋಗುವ ಯಾತ್ರಿಕರು ಮೊದಲು ಕಾರಯ್ಯನಿಗೆ ಪೂಜೆ ಸಲ್ಲಿಸುವರು. ಈ ಕಾರಯ್ಯನ ಮಕ್ಕಳೇ ಸೋಲಿಗರು ಎಂಬ ಅಭಿಪ್ರಾಯವಿದೆ.

ಮತ್ತೊಂದು ಕಥೆಯ ಪ್ರಕಾರ ಸೋಲಿಗರ ಮೂಲಪುರುಷ ದೇವಸೋಲಿಗ ನೀಲಯ್ಯ. ಇವನ ಪತ್ನಿ ಸಂಕಮ್ಮ. ಇವರು ವಾಸಿಸಿದ್ದಾನೆ ಸ್ಥಳ ಶಂಕರಮಲೈ. ಇವರ ಮಕ್ಕಳೇ ಕಾರಯ್ಯ ಹಾಗೂ ಬಿಲ್ಲಯ್ಯ. ಕಾರಯ್ಯನ ಮಕ್ಕಳು ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲಸಿದರೆ, ಬಿಲ್ಲಯ್ಯನ ಮಕ್ಕಳು ತಂದೆಯ ಮನೆಯ ಸಮೀಪದ ಕಾಡುಗಳಲ್ಲೇ ನೆಲಸಿ ಮಹದೇಶ್ವರನ ಬೆಟ್ಟದ ಸೋಲಿಗರಾದರು. ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಮಾಡು– ಪೋಡುಗಳನ್ನು ಕಟ್ಟಿಕೊಂಡು ವಾಸಮಾಡುವ ಇವರ ಪ್ರಮುಖ ವೃತ್ತಿ ಬೇಸಾಯ. ಇದಲ್ಲದೆ ಇವರು ಕಾಡಿನಲ್ಲಿ ದೊರೆಯುವ ಅಳಲೆಕಾಯಿ, ನೆಲ್ಲಿಕಾಯಿ, ಅಂಟವಾಳದಕಾಯಿ, ಜೇನು ಮುಂತಾದವುಗಳನ್ನು ಮಾರಿ ಜೀವನ ಸಾಗಿಸುತ್ತಾರೆ. ಬಿಲ್ಲು ಬಾಣ ಉಪಯೋಗಿಸುವುದರಲ್ಲಿ ನಿಸ್ಸೀಮರಾದ ಅವರು ಕಾಡಿನಲ್ಲಿ ಕಡವೆ, ಸಾರಂಗ, ಹಂದಿ, ಕಾಡೆಮ್ಮೆ, ನರಿ ಮುಂತಾದವುಗಳನ್ನು ಸುಲಭವಾಗಿ ಭೇಟಿಯಾಡುತ್ತಾರೆ. ಮತ್ತೊಂದು ವಿಶೇಷವಾದ ಇವರ ಗುಣ ಅನುಕರಣೀಯವಾದದ್ದು. ಹುಲಿ–ಆನೆ–ಚಿರತೆಗಳ ಬಗ್ಗೆ ಇವರಿಗೆ ಅಪಾರವಾದ ಭಕ್ತಿ. ಈ ಪ್ರಾಣಿಗಳನ್ನು ಇವರು ಕೊಲ್ಲುವುದಿಲ್ಲ. ಇವೆಲ್ಲ ದೇವರಿಗೆ ಸೇರಿದ ಪ್ರಾಣಿಗಳು ಎಂದು ಅವುಗಳ ಹೆಜ್ಜೆ ಗುರುತುಗಳನ್ನು ಕೂಡ ನಮಸ್ಕರಿಸುತ್ತಾರೆ. ಇತ್ತೀಚೆಗೆ ಅವರು ಕಾಡುಗಳನ್ನು ಬಿಟ್ಟು ಊರುಗಳ ಆಸುಪಾಸಿನಲ್ಲಿ ವಾಸ ಮಾಡಲು ಆರಂಭಿಸಿದ್ದಾರೆ. ಇವರ ಭಾಷೆ ವಿಜಾತೀಯ ಕನ್ನಡ. ಕನ್ನಡವನ್ನು ತಮಿಳು ಮಿಶ್ರಿತವಾಗಿ ಮಾತನಾಡುತ್ತಾರೆ. ಉರಾಳಿ, ಸೋಲಿಗ, ಮರೆಸೋಲಿಗ, ಕಾಡು ಸೋಲಿಗ, ಊದುಬತ್ತಿ ಸೋಲಿಗ, ಬುರುಡೆ ಸೋಲಿಗ ಮುಂತಾದ ಪಂಗಡಗಳಾಗಿ ಇವರನ್ನು ಗುರುತಿಸಲಾಗಿದೆ. ಅಲರಕುಲ, ಚಳುಕರ ಕುಲ, ಚಳ್ರು ಕುಲ, ಶೂರದ ಕುಲ, ತೆನೇರ ಕುಲ ಎಂಬ ಐದು ಕುಲಗಳು ಇವರಲ್ಲಿವೆ.

ಜಯಮ್ಮ ನಾನು ಸೋಲಿಗ ಕುಲಕ್ಕೆ ಸೇರಿದವಳು ಎಂದು ಹೇಳಿದ್ದಕ್ಕೆ ಇಷ್ಟೊಂದು ಪೀಠಿಕೆಯನ್ನು ನೀಡಬೇಕಾದ ಅನಿವಾರ್ಯತೆ ಒದಗಿಬಂತು. ಇದಿಷ್ಟು ಜಯಮ್ಮ ನಾವು ಸೋಲಿಗರು ಸ್ವಾಮಿ, ನಮ್ಮ ಕುಲದವರು ತಮಿಳು ನಾಡಿನಲ್ಲೂ ಇದ್ದಾರೆ ಎಂಬ ಮಾತಿನ ಹಿನ್ನೆಲೆಯಲ್ಲಿ ಹುಡುಕಲು ಪ್ರಯತ್ನಿಸಿದಾಗ ಕಂಡುಬಂದ ಸಂಗತಿಗಳು. ಬುರ್ರಕಥೆಯಲ್ಲೇ ಹೆಸರು ಮಾಡಿದ ಈರಮ್ಮ ಕೂಡ ಆಂಧ್ರ ಮೂಲದವರು. ಸದ್ಯ ಬಳ್ಳಾರಿಯ ಹೊಸಪೇಟೆ ಸಮೀಪದ ದರೋಜಿಯಲ್ಲಿ ವಾಸಮಾಡುತ್ತಿರುವ ಈರಮ್ಮ ಬುಡ್ಗ ಜಂಗಮ ಸಮುದಾಯಕ್ಕೆ ಸೇರಿದವರು. ಆಂಧ್ರದ ಮೂಲಕ ಕನ್ನಡದಲ್ಲಿ ಕಾಣಿಸಿಕೊಂಡಿರುವ ಈ ಬುಡ್ಗ ಜಂಗಾಲ ಸಮುದಾಯವು ತನ್ನ ಬದುಕಿಗಾಗಿ ಬಹುರೂಪದ ಕಲೆಗಳನ್ನು ಕಲಿತುಕೊಂಡಿದೆ. ಜನರು ಇವರನ್ನು ವೇಷಗಾರರು, ಕಥೀ ಹೇಳೋರು, ಗಂಗಮ್ಮನವರು, ಬಾಲ ಸಂತರು, ವೇಷಗಾರ ಪಟ್ಟಿ, ವಾದ್ಯ ನುಡಿಸೋರು, ವ್ಯಾಪಾರ ಮಾಡುವವರು ಎಂದು ಮುಂತಾಗಿ ಗುರುತಿಸುತ್ತಾರೆ. ಆಂಧ್ರದ ವೀರಪ್ರಧಾನವಾದ ಸಾಹಿತ್ಯದ ಕಾಲದಲ್ಲಿ ಇವರು ಈ ಕಥೆಗಳನ್ನು ಹಾಡುತ್ತಾ ಬಂದಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಕಥೆಗಳ ಹಾಡುಗಳಿಗೆ ಬಳಸುವ ಗುಮ್ಮಟೆಗಳನ್ನು ಆಂಧ್ರದ ವಿವಿಧ ಸ್ಥಳಗಳಲ್ಲಿ ಬುಡಿಗೆಲು, ಬುರ್ರಲು, ದಕ್ಕೀಲು, ಡಿಕ್ಕಿಲು ಎಂದು ಕರೆಯುತ್ತಾರೆ.

ಜಯಮ್ಮನನ್ನು ಕನ್ನಡಿಗರು ಗುರುತಿಸಿರುವುದು ಬುರ್ರಕಥಾ ಜಯಮ್ಮ ಎಂದೇ ಆಗಿದೆ. ಇವರು ತಮ್ಮನ್ನು ಸೋಲಿಗರು ಎಂದು ಕರೆದುಕೊಳ್ಳುತ್ತಾರೆ. ಆದರೆ ಇವರು ಹಾಡುವ ಬಬ್ಬೂಲಿ ನಾಗಿರೆಡ್ಡಿಕಾವ್ಯ, ಅದೋನಿ ಲಕ್ಷ್ಮಮ್ಮನ ಕಾವ್ಯ, ಸ್ಯಾಸಿ ಚಿನ್ನಮ್ಮನ ಕಾವ್ಯ, ಬಾಲನಾಗಮ್ಮನ ಕಾವ್ಯ, ಜೈಸಿಂಗರಾಜನ ಕಾವ್ಯ ಇವು ಆಂಧ್ರದ ವೀರಪ್ರಧಾನವಾದ ಕಾವ್ಯಗಳು ಅಥವಾ ಆಂಧ್ರದ ಪರಿಸರದಲ್ಲಿ ಹುಟ್ಟಿಕೊಂಡ ಕಾವ್ಯಗಳು. ಈರಮ್ಮನಿಗೂ ಜಯಮ್ಮನಿಗೂ ಮೂಲದಲ್ಲಿ ಇರಬಹುದಾದ ಸಾಮ್ಯವನ್ನು ಶೋಧಿಸಲು ಹೊರಟಾಗ ಎರಡೂ ಮೇಲ್ನೋಟಕ್ಕೆ ಬೇರೆ ಬೇರೆ ಎಂದು ಕಂಡುಬಂದರೂ ಕಥನ ಸ್ವರೂಪ ಹಾಗೂ ಅವರುಗಳ ಮಾತೃಭಾಷೆ ತೆಲುಗೇ ಆಗಿರುವುದರಿಂದ ಇವರಿಬ್ಬರ ಮೂಲ ಆಂಧ್ರವೇ ಎಂಬುದು ಕಂಡುಬರುತ್ತದೆ. ಸೋಲಿಗರು ಬಿಳಿಗಿರಿರಂಗನ ಬೆಟ್ಟದ ಆಸುಪಾಸಿನಲ್ಲಿರುವವರು. ಈ ಕಲೆ ಇವರಿಗೆ ಹೇಗೆ ಸಿದ್ಧಿಸಿತು ಎಂಬ ಕುತೂಹಲ ಸಹಜವಾಗಿ ಉಂಟಾಯಿತು. ಬಿಳಿಗಿರಿರಂಗನ, ಮಾದೇಶನ ಭಕ್ತರು ಆಂಧ್ರದ ತಿರುಪತಿಯಿಂದಲೂ ಕಾಲ್ನಡಿಗೆಯಲ್ಲಿ

ಇಲ್ಲಿಗೆ ಬರುತ್ತಿದ್ದುದಕ್ಕೆ ಅನೇಕ ಪುರಾವೆಗಳು ದೊರೆಯುತ್ತವೆ. ಹಾಗಾಗಿ ಇವರು ತಿರುಪತಿಯಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಅಲ್ಲಿಂದ ಮಹದೇಶ್ವರನ ಬೆಟ್ಟಕ್ಕೆ ಬಂದ ಚೆನ್ನದಾಸರೇ, ದೊಂಬಿದಾಸರೇ ಸೋಲಿಗರೆಂದು ಗುರುತಿಸಿಕೊಳ್ಳುತ್ತಿರಬಹುದೆಂಬ ಸಂದೇಹ ಹುಟ್ಟುತ್ತದೆ.

ಜಯಮ್ಮ ಕೂಡ ಹಾಗೆಯೇ ಬಂದು ಕಾಲಕ್ರಮೇಣ ಮೈಸೂರಿನ ಮೂಲಕ ಮಂಡ್ಯದಲ್ಲಿ ನೆಲಸಿರಬಹುದು ಎಂಬುದು ಒಂದು ಊಹೆ. ಜಯಮ್ಮ ತೆಲಗು ಭಾಷೆಯ ಮೇಲೆ ಹೊಂದಿರುವ ಪ್ರಭುತ್ವವೇ ಇದಕ್ಕೆ ನಿದರ್ಶನ. ಅದೇನೆ ಇರಲಿ, ಈಕೆ ತಾತ ತಂದೆಯವರಿಂದ ಪರಂಪರಾಗತವಾಗಿ ಕಲಿತ ವಿದ್ಯೆಯೇ 'ಬುರ್ರಕಥೆ'. ಸದ್ಯ ಜಯಮ್ಮನ ಹಾಡುಗಾರಿಕೆಯಲ್ಲಿ ಮೂಲ ಸೊಗಡು ಮಾಯವಾಗಿ ಆಧುನಿಕ ಕೇಳುಗರ ಅಗತ್ಯಕ್ಕೆ ಅನುಗುಣವಾಗಿ ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಸಂದರ್ಭ ಸನ್ನಿವೇಶಗಳನ್ನು ಅರಿತು ತನ್ನ ಬದುಕಿನ ನೋವನ್ನು ಬೆರೆಸಿ ಮೂಲ ಕಥೆಯನ್ನು ಪ್ರಸ್ತುತಪಡಿಸುವ ಅವರ ಶೈಲಿ ಬೆರಗನ್ನು ಉಂಟುಮಾಡುತ್ತದೆ. ತಾತ ತಂದೆಯವರಿಂದ ಕಲಿತ ಕಥೆಗಳನ್ನು ತೆಲುಗಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿಕೊಂಡು ಹಾಡುವ ಪರಿ ಸೋಜಿಗವನ್ನು ಉಂಟುಮಾಡುತ್ತದೆ. ಔಪಚಾರಿಕ ಶಿಕ್ಷಣವನ್ನು ಪಡೆದು ಅನುವಾದದಲ್ಲಿ ತರಬೇತಿಯನ್ನು ಹೊಂದಿದ ಯಾವುದೇ ವಿದ್ವಾಂಸರಿಗಿಂತಲೂ ಕಡಿಮೆಯಿಲ್ಲದ ಹಾಗೇ ಸಮರ್ಥವಾಗಿ ತರ್ಜುಮೆ ಮಾಡಿ ಕನ್ನಡದ್ದೇ ಕಥೆ ಎನ್ನುವಷ್ಟರ ಮಟ್ಟಿಗೆ ಪ್ರಸ್ತುತ ಪಡಿಸುವ ಕಲೆ ಇವರಿಗೆ ಕರಗತವಾಗಿದೆ.

ಬುರ್ರಕಥೆಯ ಹಿನ್ನೆಲೆ

ತೆಲುಗಿನಲ್ಲಿ ಬಹು ಜನಪ್ರಿಯವಾದ ಕಲಾ ಪ್ರಕಾರವೇ ಬುರ್ರಕಥೆ. ಕರ್ನಾಟಕದ ಬಯಲಾಟ, ಯಕ್ಷಗಾನಗಳ ರೀತಿಯಲ್ಲಿ ಇದು ಆಂಧ್ರದಲ್ಲಿ ಹೆಚ್ಚು ಜನಜನಿತವಾದ ಕಲೆ. ಆಧುನಿಕ ಜನಪ್ರಿಯ ಮನೋರಂಜನಾ ಮಾಧ್ಯಮಗಳು ಪ್ರಚುರಕ್ಕೆ ಬರುವ ಪೂರ್ವದಲ್ಲಿ ಗ್ರಾಮೀಣ ಪರಿಸರದ ಮನೋರಂಜನಾ ಮಾಧ್ಯಮವಾಗಿದ್ದ ಕಲೆ ಇದು. ತಾವು ಬೆಳೆದ ದವಸ ಧಾನ್ಯಗಳನ್ನು ನೀಡಿ ಹಬ್ಬ ಹರಿದಿನಗಳಲ್ಲಿ, ಸಾವು ನೋವಿನ ಸಂದರ್ಭಗಳಲ್ಲಿ ಆ ಸಂದರ್ಭಕ್ಕೆ ಅನುಗುಣವಾಗಿ ಸೂಕ್ತ ಕಥೆಗಳನ್ನು ಇವರಿಂದ ಹಾಡಿಸಿ ಸಂತಸಪಟ್ಟು ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಿದ್ದರು. ಆಂಧ್ರದ ಪ್ರಭಾವ ಹೆಚ್ಚಾಗಿರುವ ಕರ್ನಾಟಕದ ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಈ ಬುರ್ರಕಥಾ ಹಾಡುವ ಜನರು ಹೆಚ್ಚು ಕಾಣಸಿಗುತ್ತಾರೆ. ಇವರು ತೆಲುಗು, ಕನ್ನಡ ಹಾಗೂ ಹಿಂದಿಯಲ್ಲಿ ಅಥವಾ ಕನ್ನಡ ತೆಲುಗು ಮಿಶ್ರಿತವಾದ ಅವರ ಜನಾಂಗದ ಭಾಷೆಯಲ್ಲೇ ಹಾಡುತ್ತಾರೆ.

ಈ ಕಲೆಯೂ ಅನ್ಯ ಪ್ರಕಾರಗಳಂತೆ ಧರ್ಮಪ್ರಚಾರಕ್ಕೂ ಬಳಕೆಯಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕ್ರೈಸ್ತಮತ ಪ್ರಚಾರಕ್ಕಾಗಿ ಪಾದ್ರಿಗಳು ತೆಲಂಗಾಣಕ್ಕೆ ಬಂದಾಗ ಇದರ ಜನಪ್ರಿಯತೆಯನ್ನು ಕಂಡು ತಮ್ಮ ಧರ್ಮ ಪ್ರಚಾರಕ್ಕಾಗಿ ಬಳಸಿಕೊಂಡಿರುವುದು ಶ್ರೀ ಗೋರಾ ಪ್ರೇಮಯ್ಯ ಅವರ 'ಸಾಧು ಸುಂದರ ಸಿಂಗ್', ಯೋಹಾನು ಶಿರಚ್ಛೇದನಮು' ಕಥೆಗಳ ಹುಟ್ಟಿನಿಂದ ಕಂಡುಬರುತ್ತದೆ. (ನೋಡಿ, ಬುರ್ರಕಥಾ ಈರಮ್ಮ ಅಲೆಮಾರಿಯ ಆತ್ಮಕಥನ – ಡಾ. ನಿಂಗಪ್ಪ ಮುದೇನೂರು ೨೦೦೫)

ಸಾಮಾನ್ಯವಾಗಿ ಬುರ್ರಕಥೆಯಲ್ಲಿ ಮೂರು ಜನರು ಭಾಗವಹಿಸುತ್ತಾರೆ. ಅವರು ಹೆಣ್ಣು ಗಂಡು ಯಾರೇ ಆಗಿರಬಹುದು. ಇಬ್ಬರು ಹಿನ್ನೆಲೆ ಹಾಡುಗಾರರು ಹಾಡಿಗೆ ತಕ್ಕಂತೆ ಹಿನ್ನೆಲೆ ವಾದ್ಯಗಳಾದ ಗುಮಟೆ, ಗಗ್ಗರಿ ಅಥವಾ ಡುಮಕಿ ನುಡಿಸುತ್ತಾರೆ. ಅವರ ಮುನ್ನೆಲೆಯಾಗಿ ಹಾಡುವವರು ಪ್ರಧಾನ ಹಾಡುಗಾರರಾಗಿದ್ದು ಬೆರಳಿನಲ್ಲಿ ಗಗ್ಗರಿಯನ್ನು ಸಿಕ್ಕಿಸಿಕೊಂಡು ಏಕಕಾಲಕ್ಕೆ ಲಯಬದ್ಧವಾಗಿ ಹಾಡುತ್ತಾ ತಂಬೂರಿಯನ್ನೂ ನುಡಿಸುತ್ತಾರೆ. ಬುರ್ರಕಥೆಯ ವೈಶಿಷ್ಟ್ಯವೆಂದರೆ ಗದ್ಯವನ್ನು ಹೇಳುತ್ತಾ ಮಧ್ಯೆ ಮಧ್ಯೆ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹೇಳುವುದು. ಕೆಲವೊಮ್ಮೆ ಹಾಡಿಗೆ ಕುಣಿಯುವ ಕ್ರಮವೂ ಉಂಟು. ಗಂಡಸರು ಪಂಚೆ, ಅಂಗಿ ಹಾಗೂ ವಿಶಿಷ್ಟವಾದ ಪೇಟ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತ ಗಗ್ಗರಿ ತಂಬೂರಿಗಳನ್ನು ಲಯಬದ್ಧವಾಗಿ ನುಡಿಸುತ್ತಾ ಹಾಡುತ್ತಿದ್ದರೆ ಕೇಳಲು ರೋಮಾಂಚನವಾಗುತ್ತದೆ. ಹಿನ್ನೆಲೆ ಗಾಯಕರು ಕೂಡ ಸಾಧಾರಣ ಬಟ್ಟೆ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತ ಪ್ರಧಾನ ಕಥೆಗಾರನಿಗೆ ಸಾಥ್ ನೀಡುತ್ತಾರೆ. ಇವರು 'ತಂದಾನ ತಾನಾ' ಎಂಬ ಪಲ್ಲವಿಗಳೊಂದಿಗೆ ಹೆಜ್ಜೆ ಹಾಕುತ್ತಿರುತ್ತಾರೆ. ಹೆಂಗಸರೂ ಕೂಡ ತಲೆಯ ಮುಡಿ ಕಟ್ಟಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಿನ್ನೆಲೆಯವರೊಂದಿಗೆ ನರ್ತಿಸುತ್ತಾ ಲಯಬದ್ಧವಾಗಿ ಹಾಡುತ್ತಾರೆ. ಪ್ರತಿಯೊಂದು ಬುರ್ರಕಥೆಯ ಆರಂಭದಲ್ಲಿ ಕಥೆಗಾರರು ಸಾಲಾಗಿ ನಿಂತು ತಮ್ಮ ಕುಲದೇವತೆಯನ್ನು, ಅವರಿರುವ ಪರಿಸರದ ಗ್ರಾಮ ದೈವಗಳನ್ನು, ಕಥೆಯಲ್ಲಿ ಬರುವ ಮುಖ್ಯ ನಾಯಕ, ದೇವತೆಯನ್ನು ಅದರಲ್ಲೂ ಮುಖ್ಯವಾಗಿ ಭೂಮಿತಾಯಿಯನ್ನು ಸ್ಮರಿಸಿ ಮುಂದಿನ ಕಥೆಗೆ ಪ್ರವೇಶ ಮಾಡುತ್ತಾರೆ. ಇಲ್ಲಿ ಪ್ರಮುಖವಾಗಿ

ಗಮನಿಸಬೇಕಾದದ್ದು ಈ ಪ್ರಾರ್ಥನೆ ತಮಗೆ ಕಥೆಯ ಆಶಯ, ಊರಿನ ಮಳೆ ಬೆಳೆ, ಜನರ ಯೋಗಕ್ಷೇಮಕ್ಕೆ ಸಲ್ಲಿಸುವ ಪ್ರಾರ್ಥನೆಯೇ ಆಗಿರುವಂತಹದ್ದು.

ಬುರ್ರಕಥೆಯನ್ನು ಇವರು ಹರಿಕಥೆ ಎಂತಲೂ ಕರೆಯುವುದುಂಟು. ಆದರೆ ಹರಿಕಥೆಯಲ್ಲಿ ಬರುವಂತೆ ಪುರಾಣದ ಕ್ಲಿಷ್ಟ ಸನ್ನಿವೇಶಗಳು, ನಾಟಕೀಯ ಪ್ರಸಂಗಗಳು, ರಾಗಪ್ರಧಾನವಾದ ಹಾಡುಗಾರಿಕೆ ಇಲ್ಲಿ ಕಂಡುಬರುವುದಿಲ್ಲ. ಜನಸಾಮಾನ್ಯರಂತೆಯೇ ಇಲ್ಲಿನ ಪಾತ್ರಗಳು ಕಷ್ಟ ಸುಖಗಳಿಗೆ ತೆರೆದುಕೊಳ್ಳುತ್ತವೆ. ಕಥೆಯಲ್ಲಿ ನಡೆಯುವ ಪ್ರಸಂಗಗಳನ್ನು ನಮ್ಮ ನಡುವೆ ನಡೆಯುವ ಘಟನೆಗಳೊಂದಿಗೆ ಸಮೀಕರಿಸಿ ಹೆಚ್ಚು ಆಪ್ತವಾಗುವಂತೆ ನಮ್ಮದೇ ಕಥೆ ಎಂಬಂತೆ, ನಮ್ಮ ಸುತ್ತಮುತ್ತ ನಡೆದ ಘಟನೆ ಎಂಬಂತೆ ಕಟ್ಟಿಕೊಡುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಈ ಕಲೆಯನ್ನು ಆರಾಧಿಸುವವರು ಬಹುಪಾಲು ತಳಸಮುದಾಯದವರು. ಮನರಂಜನೆಗೆ ಅನ್ಯ ಮಾರ್ಗಗಳಿಗಿಂತ ಪೌರಾಣಿಕ ಹಾಗೂ ರಾಜ ಮಹಾರಾಜರ ಕಥೆಗಳನ್ನೇ ಇಂತಹ ಕಥೆಗಾರರಿಂದ ಕೇಳುವುದಕ್ಕೆ ಇಷ್ಟಪಡುತ್ತಾರೆ. ಕಥೆ ಹೇಳುವುದಕ್ಕೆಂದೇ ಅವರನ್ನು ವೀಳ್ಯ ಕೊಟ್ಟು ಆಹ್ವಾನಿಸುತ್ತಾರೆ. ಇವರು ಹೆಚ್ಚಿನ ಪ್ರಮಾಣದಲ್ಲಿ 'ವೀರಗಾಥೆ' ಗಳನ್ನೇ ಹೆಚ್ಚು ಹಾಡುತ್ತಾರೆ. ಈ 'ವೀರಗಾಥೆ' ಪರಂಪರೆ ಆಂಧ್ರದಲ್ಲಿ ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ಸಾಂಸ್ಕೃತಿಕವಾಗಿ ಪಲ್ಲಟಗೊಂಡ ಈ ಅಲೆಮಾರಿ ಸಮುದಾಯಗಳು ಕರ್ನಾಟಕಕ್ಕೆ ಆಂಧ್ರದಿಂದಲೇ ವಲಸೆ ಬಂದಿರುವುದು ಜಯಮ್ಮನ ಮಾತುಗಳಿಂದ ಕಂಡುಬರುತ್ತದೆ. ಶೈವ ಮತದ ಪ್ರಭಾವದಿಂದ ರಚನೆಗೊಂಡಿರುವ 'ವೀರಗಾಥೆ'ಗಳ ಒಂದು ದೊಡ್ಡ ಶಾಖೆಯೇ ಇದೆ. ಈ ಕಥನ ಗೀತೆಗಳು ದ್ವಿಪದಿಗಳಲ್ಲಿಯೇ ಕಾಣಿಸಿಕೊಂಡಿವೆ. ಜನಪದ ವೀರಗಾಥೆಗಳಿಗೂ ದ್ವಿಪದಿಯೇ ಸೂಕ್ತ ಛಂದಸ್ಸೆಂದು ಇವರು ಭಾವಿಸಿದ್ದಾರೆ. ಎಲ್ಲ ಕಡೆ ಸಂಭವಿಸಿದಂತೆ ಕೃಷ್ಣಾ ಗೋದಾವರಿಗಳ ಮಧ್ಯ ಪ್ರದೇಶದಲ್ಲಿ ಕೂಡ ಶೈವ ವೈಷ್ಣವ ಪಂಥದ ಅನುಯಾಯಿಗಳ ಸಂಘರ್ಷ ಪಲ್ನಾಡು ಯುದ್ಧಕ್ಕೆ ಕಾರಣವಾಯಿತು. (ಪುಟ-೯ ಪೂರ್ವೋಕ್ತ) ಈ ಪಲ್ನಾಡನ್ನು ಕೇಂದ್ರವಾಗಿಟ್ಟುಕೊಂಡು ಜನತೆ ಮತಸಂಬಂಧಿಯಾದ ಪಲ್ನಾಡು ವೀರಚರಿತ್ರೆ ಎನ್ನುವ ಜನಪದ ಕಾವ್ಯವನ್ನು ಕಟ್ಟಿಕೊಳ್ಳಲು ಕಾರಣವಾಯಿತು. ಚಾರಿತ್ರಿಕ ಘಟನೆಗಳನ್ನು ಆಧರಿಸಿ ಜನಪದರು ತಮ್ಮದೇ ಧಾಟಿಯಲ್ಲಿ ಕಥೆಗಳನ್ನು ಕಟ್ಟಿಕೊಂಡು ಚಾರಿತ್ರಿಕ ಕ್ಲಿಷ್ಟತೆಯನ್ನು ಹೊಡೆದುಹಾಕಿ ಸರಳವಾಗಿ ಹಾಡಿ ಜನಮಾನಸವನ್ನು ಗೆದ್ದಿದ್ದಾರೆ. ಈ ಬಗೆಯ ವೀರಗಾಥೆಯ ಪರಂಪರೆಯೂ ಆಂಧ್ರದಲ್ಲಿ ಅಕ್ಷರ ಮಾಧ್ಯಮದಲ್ಲಿ ಹೆಚ್ಚು ಕಾಣಿಸಿಕೊಂಡರೂ ಮೌಖಿಕವಾಗಿಯೂ ಪರಂಪರಾಗತವಾಗಿ ಇಂತಹ ಕಲಾವಿದರ ಮೂಲಕ ಹರಿದು ಬಂದಿವೆ. ಇವು ಚರಿತ್ರೆ ಹಾಗೂ ಪುರಾಣಗಳ ಪ್ರಭಾವದಿಂದ ರೂಪುಗೊಂಡಿವೆ. ಇಂತಹ ಕಥೆಗಳನ್ನು ಹಾಡುವ ಗಾಯಕರು ಒಂದು ಕಾಲದಲ್ಲಿ ರಾಜರುಗಳ ಗೌರವಕ್ಕೂ ಪಾತ್ರರಾಗಿರಬೇಕು.

ಈ ಬಗೆಯ ಲೋಕ ಸಂಚಾರಿ ಗಾಯಕರನ್ನು ಆಂಧ್ರಪ್ರದೇಶದಲ್ಲಿ ಸಂಚಾರಿ ಗಾಯಕರೆಂದೂ, ಭಿಕ್ಷುಕ (ಗೌರವ ಸೂಚಕವಾಗಿ)ವರ್ಗವೆಂದೂ ಕರೆಯುತ್ತಾರೆ. ಇವರು ಆಹ್ವಾನದ ಮೇಲೆ ಯಾವುದೇ ಗ್ರಾಮವನ್ನು ಪ್ರವೇಶಿಸಿದರೂ ಅಂದು ರಾತ್ರಿ ಬುರ್ರಕಥೆ ಇದೆ ಎಂಬ ಸಂಗತಿಯನ್ನು 'ದಬಡಿ' ಬಡಿದು ಊರಲ್ಲಿ ಸಾರಲಾಗುತ್ತದೆ. ವಕ್ತೃ ಕಥೆ ಮಾಡಲಿದ್ದಾರೆ ಎಂದು ಗೊತ್ತಾದ ತಕ್ಷಣ ಜನ ಚಾಪೆ, ಜಮಖಾನ, ತುಂಬಿದ ನೀರಿನ ಚೆರಿಗೆ, ಗಂಧದ ಕಡ್ಡಿ, ಹೂವು ಕಾಯಿ ಎಲ್ಲವನ್ನು ಸಿದ್ಧಮಾಡಿಕೊಳ್ಳುತ್ತಾರೆ. ಕಥೆ ಆರಂಭವಾಗುವುದಕ್ಕೆ ಮುಂಚೆ ತುಂಬಿದ ಚರಿಗೆಯ ಮೇಲೆ ತೆಂಗಿನಕಾಯಿ ಇಟ್ಟು ತಟ್ಟೆಯೊಂದರಲ್ಲಿ ಅಕ್ಕಿ ಕಾಳು ಹಾಕಿ ಅದರ ಮಧ್ಯೆ ಪ್ರತಿಷ್ಠಾಪಿಸುತ್ತಾರೆ. ಈ ಕಳಸರೂಪಕ್ಕೆ ಅರಿಸಿನ ಕುಂಕುಮ ಹಚ್ಚಿ ಹೂಮುಡಿಸಿ ಪೂಜಿಸುತ್ತಾರೆ. ಇದು ಅಂದಿನ ಕಥೆಯ ದೇವರು, ವೀರ ಎಂದು ಭಾವಿಸಲಾಗುತ್ತದೆ. ಇವರು ಪ್ರಮುಖವಾಗಿ ಹಾಡುವ ಕಥೆಗಳೆಂದರೆ – ಕಾಟಮರಾಜನ ಕಥೆಗಳು, ಬೊಬ್ಬಿಲಿ ನಾಗಿರೆಡ್ಡಿಕಥೆ, ದೇಸಿಂಗರಾಜನ ಕಥೆ, ಬಾಲ ನಾಗಮ್ಮನ ಕಥೆ, ಆದೋನಿ ಲಕ್ಷ್ಮೀದೇವಿ ಕಥೆ, ಮುಂತಾದ ರಾಜ ಮಹಾರಾಜರ ಕಥೆಗಳನ್ನು ಹೇಳುವುದರ ಮೂಲಕ ಜನರು ತಮ್ಮ ನೋವನ್ನು ಮರೆಯುವಂತೆ ಮಾಡುತ್ತಾರೆ. ಈ ಕಥೆಗಳಲ್ಲಿ ಹೆಚ್ಚಿನವು ನಾನಾ ಕಾರಣಗಳಿಂದ ಕಥಾ ನಾಯಕ ಅಥವಾ ನಾಯಕಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ್ದೇ ಆಗಿರುತ್ತದೆ. ಈ ಕಥೆ ಕೇಳಿದ ಜನರು ಇಂಥ ಮಹಾತ್ಮರೇ ಕಷ್ಟಪಟ್ಟ ಮೇಲೆ ಸಾಮಾನ್ಯರಾದ ತಮ್ಮ ಕಷ್ಟ ದೊಡ್ಡದಲ್ಲ ಎಂದು ಭಾವಿಸುತ್ತಾರೆ.

ಊಳಿಗಮಾನ್ಯ ರಾಜ್ಯ ವ್ಯವಸ್ಥೆಯಲ್ಲಿ ರಾಜನ ಶೌರ್ಯ, ಸಾಹಸ, ಪರಾಕ್ರಮ, ಪ್ರತಿಷ್ಠೆಗಳನ್ನು ಸ್ತುತಿಸಲು 'ವಂಧಿಮಾಗಧರು' ಹೊಗಳುಭಟ್ಟರು, ಕವಿಪಂಡಿತರು ಇದ್ದಂತೆ, ಇವರು ರಚಿಸಿಕೊಟ್ಟ ರಾಜಸ್ತುತಿಗಳನ್ನು ಹಾಡುವ ಒಂದು ಗಾಯಕವರ್ಗವೇ ನಿರ್ಮಾಣವಾಗಿತ್ತೆಂದು ಕಾಣುತ್ತದೆ. ಈ ವರ್ಗ ರಾಜನ ಕುರಿತಾದ ಲಿಖಿತ ಸ್ತುತಿಗಳನ್ನು ಕಲಿತು ಅವನ್ನು ಮೌಖೀಕರಿಸಿಕೊಂಡು ಸಾಮ್ರಾಜ್ಯಗಳುದ್ದಕ್ಕೂ ಹಾಡುತ್ತ ವಿಸ್ತರಿಸುವ ಆದೇಶ ಪಡೆದಿರಬೇಕು, ಇಲ್ಲವೆ ಆಸ್ಥಾನಗಳಲ್ಲಿ ಆಶ್ರಯ ಪಡೆದವರೇ ಇವನ್ನು ಇನ್ನೊಂದು

ಬಗೆಯಲ್ಲಿ ಬೆಳಸಿರಬೇಕು. ಇಂತಹ ವೀರ ಚರಿತ್ರೆಗಳೇ ನಮ್ಮ ಜನಪದರ ಬಾಯಲ್ಲಿ ಕ್ರಮೇಣ ವೀರಗಾಥೆಗಳ ಪರಂಪರೆಯಾಗಿ ಮುಂದುವರಿದಿರಬಹುದು. ಭಾರತದಲ್ಲಿ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆ ಜಾರಿಗೆ ಬಂದ ಮೇಲೆ ಈ ಕಥೆಗಾರರು ರಾಜರ ಆಸ್ಥಾನಗಳನ್ನು ಬಿಟ್ಟು ಪರಂಪರೆಯ ಮುಂದುವರಿಕೆಯಾಗಿ ಪೂರ್ವದ ವೀರರ ಚರಿತ್ರೆಗಳನ್ನು ಹಾಡಲು ಶುರುಮಾಡಿರಬೇಕು. ಪ್ರಸ್ತುತ ವರ್ಣ ವ್ಯವಸ್ಥೆಯ ಪ್ರತಿಯೊಂದು ಜನಾಂಗಕ್ಕೂ ಅದರ ಕುಲ ಮೂಲದ ದೈವಗಳಿಗೂ ಒಂದೊಂದು ಆರಾಧನಾ ಕುಲದೈವ ಪಂಥಗಳಿವೆ. ಅವುಗಳಲ್ಲಿ ಕುಲದೈವಭಕ್ತ, ಸೇವಕರಾದ ನಿಷ್ಠಾವಂತ ವರ್ಗವೊಂದು ಗುರುಭಕ್ತಿ ಅಥವಾ 'ಗುರುಪರಂಪರೆ' ಎಂಬಂತೆ ಬೆಳೆದು ಬಂದಿದೆ. ಉದಾಹರಣೆಗೆ ಮೈಲಾರನ ಗ್ವಾರಪ್ಪ-ಗ್ವಾರಮ್ಮ, ಜುಂಜಪ್ಪನ ಗೆಣೆಗಾರರು, ಮಾದೇಶ್ವರನ ಕಂಸಾಳೆಯವರು, ಮಂಟೇಸ್ವಾಮಿಯ ನೀಲಗಾರ ಗುಡ್ಡರು, ಸಿರಿಯ ಭೂತೇರು-ಬೂತಯ್ಯಗಳು ಹೀಗೆ ಒಂದು ಬಲಿಷ್ಠ ಜನಪದ ಗುರುವರ್ಗವೇ ಈ ನಾಡಿನ ತುಂಬೆಲ್ಲ ಹರಡಿ ಕೊಂಡಿದೆ. ಇದು ರಾಜ ಮಹಾರಾಜರಿಗಿಂತ ಆಯಾ ಕುಲ ನಾಯಕ ದೈವಗಳ ಪರಂಪರೆ, ಸಂಸ್ಕೃತಿಯ ಹಿನ್ನೆಲೆ ಮುನ್ನೆಲೆಗಳನ್ನು ತಿಳಿಸಿಕೊಡುತ್ತದೆ.

ಬುರ್ರಕಥೆ ಹಾಡುವವರು ಬಹುಪಾಲು ತಮ್ಮ ಹೊಟ್ಟೆ ತುಂಬಿಸುವುದಕ್ಕೆ ವೃತ್ತಿಗಾಯಕರಾದವರು. ಪರಂಪರೆಯಿಂದ ಕೆಲವು ನಿರ್ದಿಷ್ಟ ವೀರಗಾಥೆಗಳನ್ನು ಮಾತ್ರ ಕಂಠಸ್ಥ ಮಾಡಿಕೊಂಡು ಅದನ್ನು ಕನ್ನಡೀಕರಿಸಿ ಪ್ರಾದೇಶಿಕ ಎಲ್ಲೆಯನ್ನು ದಾಟಿ ಭಾಷಾ ಬಾಂಧ್ಯವ್ಯಕ್ಕೆ ಇವರು ಸೇತುವೆಯಾಗಿದ್ದಾರೆ. ಇವರಿಗೆ ಭಾಷಾಭಿಮಾನಕ್ಕಿಂತ ಬದುಕು ದೊಡ್ಡದಾಗಿದೆ. ವಿದ್ಯಾವಂತರೆಂದು ಕರೆಸಿಕೊಳ್ಳುವ ನಮಗೆ ಮಾತ್ರ ಭಾಷೆಯ ಪ್ರಾಚೀನತೆ, ಶ್ರೇಷ್ಠತೆಯ ಪ್ರಶ್ನೆ ಕಾಡುತ್ತದೆ.

ಜಯಮ್ಮನ ಬಾಲ್ಯ

ಜಯಮ್ಮ ತನ್ನ ಮಾತನ್ನು ಆರಂಭಿಸುವುದೇ ಒಂದು ವಿಶೇಷ 'ನೆರೆದಿರುವಂತಹ ನನ್ನ ಬಂಧುಗಳೇ, ವೇದಿಕೆಯ ಮೇಲಿರುವ ಗಣ್ಯವ್ಯಕ್ತಿಗಳೇ, ತಮ್ಮ, ಸಾರ್ವಜನಿಕರ ಮಗುವಾಗಿ ಬುರ್ರಕಥಾ ಕಲೆಯನ್ನು ಕಲಿತಿರುತ್ತೀನಿ'.

ಜಯಮ್ಮನ ಮುತ್ತಾತ ತುಳಸಿರಾಮ ದಾಸರು ಆಂಧ್ರ ಮೂಲದವರು. ಆಂಧ್ರಪ್ರದೇಶದ ಕಾಂಬೋದಿರಾಜ, ಬಾಲನಾಗಮ್ಮ, ಮಲ್ಲಮ್ಮ, ಧನಲಕ್ಷ್ಮೀ, ದೇಸಿಂಗರಾಜ, ನಲ್ಲತಂಗಿ ಮುಂತಾದ ಕಥೆಗಳನ್ನು ತೆಲುಗಿನಲ್ಲಿ ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದರು. ಇವರು ತೆಲುಗಿನಲ್ಲಿ ಹಾಡುವ ಹಾಗೂ ಸಾರಾಂಶವನ್ನು ಕನ್ನಡದಲ್ಲಿ ಬಿಡಿಸಿ ಹೇಳುವ ಕಲೆಯನ್ನು ಮೆಚ್ಚಿ ಜಯಚಾಮರಾಜ ಒಡೆಯರ್ ಅವರು ಜರತಾರಿ ಪೇಟತೊಡಿಸಿ ಸನ್ಮಾನಿಸಿದ್ದನ್ನು ಆಕೆ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಾಳೆ.

ತುಳಸೀರಾಮದಾಸರ ಮಗ ರಾಮದಾಸರು, ಅವರ ಮಗ ವೆಂಕಟಸ್ವಾಮಿದಾಸರು. ವೆಂಕಟಸ್ವಾಮಿದಾಸರ ಮಗಳೇ ಈ ಜಯಮ್ಮ. ಜಯಮ್ಮ ತನ್ನ ತಾಯಿಯ ಹೊಟ್ಟೆಯಲ್ಲಿದ್ದಾಗ ಇವರ ತಂದೆಯವರು ಆಂಧ್ರದಿಂದ ಕನಕಪುರಕ್ಕೆ ಬರುತ್ತಾರೆ. ಈಕೆಯ ಒಡಹುಟ್ಟಿದವರು ಏಳು ಜನ. ಅವರೆಲ್ಲ ಈಕೆಯ ತಮ್ಮಂದಿರು. ತಾತ, ತಂದೆಯವರಿಂದ ಎಲ್ಲರೂ ಬುರ್ರಕಥೆಯ ಕಲೆಯನ್ನು ಕಲಿತರೂ ಅದನ್ನು ಉಳಿಸಿ ಮುಂದುವರಿಸಿಕೊಂಡು ಬಂದವರು ಕೇವಲ ಜಯಮ್ಮ ಮಾತ್ರ. ಅದಕ್ಕಾಗಿಯೇ ಈಕೆಯ ತಂದೆ ಜಯಮ್ಮನನ್ನು ನನ್ನ ಹಿರಿಯ ಮಗ ಎಂದು ಭಾವಿಸುತ್ತಿದ್ದರು ಎಂದು ಈಕೆ ಹೇಳುತ್ತಾಳೆ. ಈಕೆಯ ಬಡಹುಟ್ಟಿದ ಏಳು ಜನ ತಮ್ಮಂದಿರು ನಾನಾ ಕಾರಣಗಳಿಂದಾಗಿ ಸಾವನ್ನಪ್ಪುತ್ತಾರೆ. ತಾಯಿಯೇ ಗರ್ಭದಲ್ಲಿರುವಾಗಲೇ ಈಕೆ ಆಂಧ್ರ ಗಡಿಯನ್ನು ದಾಟಿ ಕರ್ನಾಟಕದ ಕನಕಪುರ ಜಿಲ್ಲೆಯ ಕೊಮ್ಮೇನಹಳ್ಳಿಗೆ ಬಂದು ಸೇರಿಕೊಳ್ಳುತ್ತಾಳೆ.

ವೆಂಕಟಸ್ವಾಮಿ ಹಾಗೂ ಮುನಿಯಮ್ಮನವರ ಮೊದಲ ಮಗಳಾದ ಜಯಮ್ಮನ ಬಾಲ್ಯ ನಮಗೆ ಕಂಡುಬರುವುದು ಆಕೆಯ ಏಳು ವರ್ಷದ ಪ್ರಾಯದಿಂದ. ಮಗು ಬಾಹ್ಯ ಜಗತ್ತಿಗೆ ಬಂದ ಕ್ಷಣದಿಂದ ಆರಂಭವಾಗುವ ವೀಡಿಯೋ ದಾಖಲೀಕರಣ ಅಂದಿನ ಪರಿಸ್ಥಿತಿಯಲಿರಲಿಲ್ಲ. ಹೆಜ್ಜೆ ಹೆಜ್ಜೆಗೂ ಮಗುವಿನ ಬೆಳವಣಿಗೆಯನ್ನು ದಾಖಲಿಸುತ್ತ ದೊಡ್ಡವನಾದ ಮೇಲೆ ಅದನ್ನು ಮಗುವಿಗೆ ತೋರಿಸಿ ಸಂಭ್ರಮಿಸುವ ಇಂದಿನ ಅವಿಭಕ್ತ ಕುಟುಂಬದ ತಂದೆ ತಾಯಿಗಳಂತಿರಲಿಲ್ಲ ಅವರ ತಂದೆ ತಾಯಿಯರು. ಎಂಟು ಮಕ್ಕಳ ಹೊಟ್ಟೆ ತುಂಬಿಸುವುದೇ ದೊಡ್ಡ ಕಷ್ಟದ ಕೆಲಸ. ಅದರಲ್ಲೂ ಕಲಾವಿದರ ಕುಟುಂಬ ಎಂದ ಮೇಲೆ ಮುಗಿದೇ ಹೋಯಿತು. ಆದರೂ ಜಯಮ್ಮನಿಗೆ ತಂದೆಯ ಜೊತೆ ಒಂದು ಆಪ್ಯಾಯಮಾನವಾದ ಸಂಬಂಧ ಇದ್ದುದನ್ನು ಅನೇಕ ಘಟನೆಗಳನ್ನು ಮೆಲುಕು ಹಾಕುವುದರ ಮೂಲಕ ಆಕೆ ಖಚಿತಪಡಿಸುತ್ತಾಳೆ.

ನಾನು ಏಳುವರ್ಷದ ಬಾಲಕಿಯಾಗಿದ್ದಾಗಿನಿಂದ ನಮ್ಮ ತಂದೆ ಜೊತೆಯೊಳಗೆ ಹಿಮ್ಮೇಳಕ್ಕೆ ಶುರು ಮಾಡಿದೆ. ನಾನು ಓದಲಿಕ್ಕೆ ಆಗಲಿಲ್ಲ, ಇದೇ ನನ್ನ ದೊಡ್ಡ ಓದಾನಿಕೆ ಆಯ್ತಲ್ಲ. ಇನ್ನೆಲ್ಲಿ ಓದಿಸುತ್ತಾರೆ. ನಮ್ಮ ತಂದೆ ಜೊತೆಗೆ ಕನಕಪುರ ತಾಲ್ಲೂಕು, ವೆಂಕಟರಾಯನದೊಡ್ಡಿ ಗ್ರಾಮದಲ್ಲಿ ಚಾಮೇಗೌಡ್ರು ಅಂದ್ರ ದೊಡ್ಡ ಶ್ರೀಮಂತರು. ಇವತ್ತಿಗೂ ಹಳೆ ದುಡ್ಡು ಹೂತಾಕಿಟ್ಟಿರುವ ಗ್ರಾಮ ಅದು. ಈ ದಿನವೂ ಕೂಡ. ಒಂಬತ್ತು ವರ್ಷದ ಮಗ ನಾನು, ನನ್ನ ಎತ್ತಿ ಟೇಬಲ್ ಮ್ಯಾಲೆ ನಿಲ್ಲಿಸಿ ಹೂವಿನಹಾರ ಹಾಕಿ ನಮ್ಮ ತಂದೆಗೆ ಮಾಡಿಸಿದ ಬೆಳ್ಳಿ ಮೆಡ್ಲು ನನಗಾಕಿದ್ರು. ಇದು ನಿನಗೆ ಗಂಡಾಗಿ ಹುಟ್ಟಬೇಕಾಗಿತ್ತು. ಹೆಣ್ಣಾಗಿ ಹುಟ್ಟಿಬಿಟೈತಪ್ಪ ಅಂತಹೇಳಿ ೯ ವರ್ಷಕ್ಕೆ ನಿನಗಿಂತ ಚೆನ್ನಾಗಿ ಹಾಡ್ತಾಳೆ ಬಿಡಿ ದಾಸರೆ, ನಿಮಗೊಂದು ಕೀರ್ತಿ ತರುತ್ತಾಳೆ ಅಂತ ಹೇಳಿದ್ರು. ಸೋಲಿಗರ ಜಾತಿಯಲ್ಲಿ ಜನಿಸಿದ್ದಕ್ಕೆ ನನ್ನ ಸೋಲಿಗರ ಕುಲಕ್ಕೆಲ್ಲಾ ಹೆಸರು ತಂದ್ಲು ಅನ್ನೋ ಒಂದು ಪ್ರೀತಿ, ಒಂದು ಸಂತೋಷ

ಎಂದು ತನ್ನ ತಂದೆಯ ಜೊತೆಗಿನ ತನ್ನ ಸಂಬಂಧವನ್ನು ವಿವರಿಸುತ್ತಾ ಸಾಗುತ್ತಾಳೆ. ತಾನು ಸಂಪಾದಿಸಿದ ಚಿನ್ನ ಬೆಳ್ಳಿಯ ಮೆಡಲ್‌ಗಳು ಪ್ರಶಸ್ತಿ ಪುರಸ್ಕಾರಗಳನ್ನು ಕಳ್ಳರು ಕದ್ದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ತಂದೆಯ ಜೊತೆಗಿನ ತನ್ನ ಒಡನಾಟವನ್ನು ಸ್ಮರಿಸಿಕೊಳ್ಳುತ್ತಾಳೆ:

ನಾನು ಹಿಮ್ಮೇಳನೆ ಅಲ್ವಾ ಸಾರ್ ಇದ್ದಿದ್ದು, ಹಿಮ್ಮೇಳನೆ! ನನ್ನ ತಂದೆ ಜೊತೆಯಲ್ಲಿ, ಹಿಮ್ಮೇಳದಲ್ಲಿಯೇ ನಾನು ಮೆಡಲ್ ತಗೊಂಡೆ. ಇದೇ ಮಂಡ್ಯದಲ್ಲಿ ವಾಚ್ ಕೊಟ್ಟುಬಿಟ್ರು. .... ನಮ್ಮಪ್ಪನ ಎದುರು ಚಿನ್ನ–ಬೆಳ್ಳಿ ೧೮೦ ಮೆಡ್ಲು .... ನಾನಿವತ್ತು ನನ್ನ ಮಗಳು ಅಂತ ಆಗಲಿಲ್ಲ ನಮ್ಮಪ್ಪಾಜಿಗೆ, ನನ್ನ ಮಗ ಹಾಕಿಕೊಂಡಾನೆ. ಇದನ್ನು ನೀನು ಹಾಕಿಕೊಳ್ಳೊ ಹಿರೇ ಮಗನೆ, ನೀನೇ ಹಾಕಿಕೊಳ್ಳೋ. ನಮ್ಮ ವಡವೆ ವಸ್ತು ಸುದ್ದಿ ಹೇಳಿಕೊಂಡರೆ ಅದು ಬಾರಿ ವಿಪರೀತ ಸಾರ್, ಎಲ್ಲವೂ ಇದ್ದ ಟ್ರಂಕ್ ತಗೊಂಡು ಎದ್ದುಬಿಟ್ಟರು, ೧೩ ದಿವಸದ ಬಾಣಂತಿ ನಾನು..... ಆ ಟ್ರಂಕ್ ಎತ್ತಿಕೊಂಡು ಹೊರಟೋಗಿಬಿಟ್ಟರು......... ಎಲ್ಲವೂ ಕಳೆದೊಗಿಬಿಟ್ಟವು.

ಹೀಗೆ ಆಕೆ ತನ್ನ ತಂದೆಯೊಂದಿಗೆ ಬುರ್ರಕಥೆಯನ್ನು ಕಲಿತ ವಿವರಗಳನ್ನು ನಮ್ಮ ಮುಂದಿಡುತ್ತಾಳೆ.

ವಿವಾಹ

ಜಯಮ್ಮನಿಗೆ ತನ್ನ ಸೌಂದರ್ಯದ ಬಗ್ಗೆ ಬಹಳ ಹೆಮ್ಮೆ. ಈಕೆ ವಿವಾಹವಾದದ್ದು ತನ್ನ ಸೋದರ ಮಾವನೊಂದಿಗೆ. ವಿವಾಹ ಪೂರ್ವದ ಒಂದು ಘಟನೆಯನ್ನು ಆಕೆ ಮೆಲಕು ಹಾಕಿ ಸಂಭ್ರಮಿಸುತ್ತಾಳೆ:

ನಮ್ಮ ಅಪ್ಪ ಅಮ್ಮ ಇಲ್ಲದಾಗ ನಮ್ಮ ಮಾವ ಜಯಾ ಒಂದಿಷ್ಟು ನೀರು ಕೊಡಮ್ಮ ಅಂದಾಗ, ಹೋಗು ಮಾವ ಅಲ್ಲೆ ಎಲ್ಲಾದ್ರು ಇಸಕೊಂಡು ಕುಡಿ, ಅಂತಿದ್ದೆ. ಆಗ ಅವರು ಹೇ ಯಾಕ ಏಕವಚನದಲ್ಲಿ ಕರಿತೀಯಾ ಅಂದುಬಿಡೋರು. ಆ ರೀತಿ ಬದುಕಿದವರು ನಾವು, ಆ ರೀತಿ ಬದುಕದೇ ಹೋಗಿದ್ದರೆ ನಮ್ಮ ತಂದೆಯವರ ತಲೆ ಯಾವತ್ತೋ ಹೋಗಿಬಿಡೋದು, ನನ್ನ ಯಾರೋ ಹೊತ್ತುಕೊಂಡು ಹೋಗಿಬಿಡೋರು. ಆಗ......... ನಮ್ಮ ಅಪ್ಪಾಜಿ ಮದುವೆ ಮಾಡಿದ್ರು, ಜುಲ್ಮೆಯಿಂದ ಮಾಡಿದ್ರು.

ಇಲ್ಲಿ ತನ್ನ ವಿವಾಹ ಸೋದರ ಮಾಮನೊಂದಿಗೆ ಒತ್ತಾಯ ಪೂರ್ವಕವಾಗಿ ಆಯಿತು ಎಂದು ತಿಳಿಸುತ್ತಾಳೆ. ಇದು ಈಕೆಯ ತಂದೆಗೆ ಮಗಳ ಮೇಲಿನ ಮಮತೆ ಎಂಬುದಕ್ಕೆ ನಿದರ್ಶನ. ಮಗಳಲ್ಲ ನೀನು ನನಗೆ ಹಿರೀ ಮಗ ಎಂದು ಕರೆಯುತ್ತಾ ತಮ್ಮ ಬುರ್ರಕಥಾ ವಾಚನದ ಕಲೆಯನ್ನು ತನ್ನ ಮಗಳಿಗೆ ಸಂಪೂರ್ಣ ಧಾರೆ ಎರೆದಿದ್ದಾರೆ. ತನ್ನ ಮದುವೆಯ ಬಗ್ಗೆ, ರಕ್ತ ಸಂಬಂಧದ ಬಗ್ಗೆ ಒಂದು ತರ್ಕವನ್ನು ಮುಂದಿಡುತ್ತಾಳೆ:

ನಮ್ಮ ಅಪ್ಪಾಜಿಗೆ ನನ್ನನ್ನು ಸೋದರ ಮಾವನಿಗೆ ಕೊಡೋಕೆ ಇಷ್ಟವಿಲ್ಲ. ನನ್ನ ಸೋದರ ಮಾವನನ್ನ ನಾನು ಮದ್ವೆ ಆಗೋದಿಲ್ಲ ಅಂತ ಅಂದುಬಿಟ್ಟರೆ, ಜಯಾ ನಾನು ಸತ್ತು ಹೋಗ್ಬಿಡ್ತೀನಿ. ಅಂತ ಹೇಳಿ, ವಿಷ ಅದನ್ನ ಇದನ್ನ ತೋರಿಸಿ ನಾನು ಸತ್ತು ಹೋಗ್ತೀನಿ ಅಂತಿದ್ರು. ನಮ್ಮ ಅಮ್ಮನ ತಮ್ಮನೆ, ನಾನು ನಮ್ಮ ಅಕ್ಕನ ಮಗಳನ್ನು ಬಿಟ್ಟು ಯಾರನ್ನೂ ಆಗೋಲ್ಲ ಅನ್ನುವುದು ಅವರ ಶಪಥ, ಇವರಿಗೆ ನನ್ನನ್ನು ಕೊಡಬಾರದು ಇರೋಕೆ ಒಬ್ಬ ಮಗಳನ್ನು ನಾನು ಸಾಕಿರುವೆ ಅನ್ನೋರು. ಈ ಮಗಳನ್ನು ಆತನಿಗೆ ಕೊಟ್ಟುಬಿಟ್ಟರೆ ಸಾಕಲಾರ, ನಮ್ಮ ಮಗಳು ಅಲ್ಲಿ ಏನು ಮಾಡುತ್ತೆ ಅನ್ನುವುದು ನಮ್ಮ ಅಪ್ಪ ಅಮ್ಮನ ಯೋಚನೆ. ನಮ್ಮ ಅಮ್ಮನಿಗೆ

ಅರ್ಧ ಯೋಚನೆ ಇದ್ದರೆ ಇನ್ನರ್ಧ ಕೊಡಬೇಕು ಎನ್ನುವ ಆಸೆ ಇತ್ತು. ಅವರ ಕರುಳಲ್ವ, ಅವರ ಕರಳು ಬಿಡ್ತಾರಾ, ರಕ್ತ ಸಂಬಂಧ. ನೀರು ಹೊಡೆದು ಬಿಟ್ಟರೆ ಎರಡಾಗುತ್ತಾ? ಸಂಬಂಧವನ್ನು ಕತ್ತರಿಸಿ ಬಿಟ್ರೆ ಎರಡಾಗುತ್ತಾ?.

ಹೀಗೆ ಜಯಮ್ಮನನ್ನು ಅವರ ಸೋದರ ಮಾವನಿಗೆ ಕೊಟ್ಟು ಕೊಮ್ಮೆನಹಳ್ಳಿಯಲ್ಲಿ ಮದುವೆ ಮಾಡುತ್ತಾರೆ. ಆಕೆಯೇ ಹೇಳುವಂತೆ ಅವರ ಸಂಸಾರ ಹೊಸದುರ್ಗದಲ್ಲಿ ಆರಂಭವಾಗುತ್ತೆ. ಈಕೆಯ ಗಂಡ ಕಲಾವಿದನಲ್ಲ, ಕೃಷಿಕನೂ ಅಲ್ಲ. ಬಹಳ ಕಷ್ಟದಿಂದಲೇ ಜೀವನ ಆರಂಭಿಸುತ್ತಾರೆ. ಈಕೆಯ ಗಂಡನಿಗೆ ಗೊತ್ತಿದ್ದುದು ಒಂದೇ ಕಸುಬು, ಕೀ ರಿಪೇರಿ ಮಾಡೋದು. ಒಂದು ಕೀ ರಿಪೇರಿ ಮಾಡಿದರೆ ಕೇವಲ ನಾಲ್ಕಾಣಿ ಸಂಪಾದನೆ. ಈ ಪ್ರಸಂಗವನ್ನು ಉಲ್ಲೇಖಿಸುತ್ತಾ ಒಬ್ಬ ಆರ್ಥಿಕ ತಜ್ಞೆಯಂತೆ ಹಣಕಾಸಿನ ಮೌಲ್ಯವನ್ನು ಬಿಚ್ಚಿಡುತ್ತಾಳೆ.

ಆ ನಾಲ್ಕಾಣೆ ನಾಲ್ಕಾಣೆ ಆಯ್ತೆಂದ್ರೆ ನಮ್ಮ ಸಂಸಾರಕ್ಕೆ ಎಷ್ಟು ಬೇಕು? ಹತ್ತು ಸಾವಿರ ಅಂದ್ರ ಯಾರಾದ್ರ ಕೊಟ್ಟಾರೆ? ಇವತ್ತು ಕೊಡ್ತಾರೆ ೧೦೦–೧೫೦ ರೂಪಾಯಿ, ಅವತ್ತು ಕೊಡುತ್ತಿದ್ದೋರು ಯಾರು ಸಾರ್.

ಹೀಗೆ ದಿನದೂಡುತ್ತಾ ಸಾಗಿದ ಜಯಮ್ಮನ ಬದುಕು ಎರಡು ಮಕ್ಕಳು ಹುಟ್ಟಿದ ಮೇಲೆ ತುಂಬಾ ಕಷ್ಟವನ್ನು ಎದುರಿಸಬೇಕಾಗುತ್ತದೆ. ಇವರಿಗೆ ಗೊತ್ತಿದ್ದು ಬುರ್ರಕಥೆ ಮಾತ್ರ. ಆಕೆಯ ಗಂಡನಿಗೆ ಅದೂ ತಿಳಿದಿರಲಿಲ್ಲ. ಮಕ್ಕಳನ್ನು ಸಾಕಲಿಕ್ಕೆ ಗಂಡ ಹೆಂಡತಿ ಪಡಬಾರದ ಕಷ್ಟ ಪಡುತ್ತಾರೆ. ಕೇವಲ ೬ ರೂಪಾಯಿ ಕೂಲಿಗೆ ನಾಲ್ಕು ಎಕರೆ ಜಮೀನಿನ ಕಳೆ ಕಿತ್ತಿದ್ದಾನೆ ಈಕೆಯ ಗಂಡ. ಒಂದು ಎರಡು ಕೊಳಗ ಭತ್ತಕ್ಕೆ ಹತ್ತುಕೊಳಗ ಭತ್ತವನ್ನು ಸರಿಮಾಡಿಕೊಟ್ಟಿದ್ದಾಳೆ. ಉಡಲು ಬಟ್ಟೆಯಿಲ್ಲದೆ ಪರದಾಡಿದ್ದಾರೆ. ಆಕೆಯೇ ಹೇಳಿದ ಒಂದು ಪ್ರಸಂಗ ತುಂಬಾ ನೋವುಂಟು ಮಾಡುತ್ತದೆ. ಇದು ಈಕೆ ಒಬ್ಬಳ ಕಥೆಯಲ್ಲ. ಕಲೆಯನ್ನೇ ನಂಬಿ ಬದುಕಿದ ಸಾವಿರಾರು ಜನರ ಗೋಳು. ಅವರ ವಿಪರೀತ ಕಷ್ಟ ಕೋಟಲೆಗಳೇ ಕಲೆಯ ರೂಪ ತಳೆದು ಜನಮನ ಗೆದ್ದಿರುವುದಕ್ಕೆ ಜಯಮ್ಮನೆ ಉತ್ತಮ ಉದಾಹರಣೆ.

ನಾನು ಸ್ನಾನ ಮಾಡಬೇಕಂದ್ರ ನಮ್ಮ ಯಜಮಾನ್ರು ಪಂಚೆ ಕೊಡಬೇಕು. ಅದನ್ನು ನಾನು ಉಟಕೊಂಡುಬಿಟ್ಟು ಸ್ನಾನ ಮಾಡಿಬಿಟ್ಟು ಸೀರೆ ತೊಳೆದು ಅವರ ಕೈನಲ್ಲಿ ಕೊಟ್ಟರೆ ಅವರು ಹಾರಾಕಬೇಕು. ಅದು ಒಣಗಿದ ಮ್ಯಾಲೆ ನಾನು ಪಂಚೆ ಒಗದಕೊಟ್ರೆ ಅದು ಒಣಗಿಂದ ಅವರು ಸ್ನಾನ ಮಾಡ್ತಿದ್ರು. ಇಂತಹ ೧೦೮ ಕಷ್ಟಪಟ್ಟಿದ್ದೀನಿ ಸಾರ್.

ಹೀಗೆ ಜಯಮ್ಮ ದಂಪತಿ ಕೂಲಿನಾಲಿ ಮಾಡುತ್ತಾ ಜೀವನ ಸಾಗಿಸುತ್ತಾರೆ. ಬಡತನದ ಪರಿವೆಯೇ ಇಲ್ಲದೆ. ಬ್ರಹ್ಮ ಇವರಿಗೆ ಏಳು ಜನ ಹೆಣ್ಣುಮಕ್ಕಳು ಹಾಗೂ ಒಬ್ಬ ರೋಗಿ ಗಂಡು ಮಗನನ್ನು ಕರುಣಿಸುತ್ತಾನೆ. ಈ ಮಕ್ಕಳನ್ನು ಸಾಕಲು ಪಡಬಾರದ ಕಷ್ಟಪಡುತ್ತಾರೆ. ಬಲ್ಲವರನ್ನು, ನೆಂಟರಿಷ್ಟರನ್ನು ಸಾಲ ಕೇಳಿದಾಗ ಅವರಾಡುವ ಮಾತುಗಳಿಗೆ ತಲೆ ಕೆಡಿಸಿಕೊಳ್ಳದೆ ಅದನ್ನೂ ವಿಡಂಬನೆಯಾಗಿ ತನ್ನ ಕಥಾ ಭಾಗದಲ್ಲಿ ಬಳಸಿಕೊಳ್ಳುತ್ತಾಳೆ. ಒಬ್ಬ ಮಗನಿಗೆ ಐದಾರು ವರ್ಷದಿಂದ ಮೈಸೂರು, ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ಎಲ್ಲ ಆಸ್ಪತ್ರೆಗಳಲ್ಲೂ ತೋರಿಸಿದ್ದಾಳೆ. ಕೊನೆಗೆ

ಎಲ್ಲ ಕಡೆ ತಗೊಂಡೋಗಿ ಹಾಕ್ದೆ, ನನಗೆ ಸುಸ್ತಾಗಿಬಿಟ್ಟಿತು. ನಿನ್ನ ಹಣೆಯಲ್ಲಿ ಬರೆಯಲಿಲ್ಲಪ್ಪಾ. ಇನ್ನೆರಡು ದಿವಸ ನಿನ್ನ ಯೋಗ ಇದ್ರೆ ಇರು. ನಿನ್ನದು ಮುಗಿದು ಹೋಗಿದ್ರೆ ಹೊರಟೋಗು, ನಾನು ಇನ್ನೇನು ಮಾಡೋಕೆ ಸಾಧ್ಯವಿಲ್ಲ. ನನಗ್ಯಾವ ಆಸ್ತಿ ಇದೆ. ಸಾಲ ಕೊಡ್ರಿ ಐವತ್ತು ಸಾವಿರ, ಒಂದು ಲಕ್ಷ ಅಂತ ಅಂದ್ರೆ ಕೊಡೋರು ಯಾರು? ಏನು ನೋಡಿ ಕೊಡ್ತಾರೆ ನಮಗೆ

ಎಂದು ಹೇಳುತ್ತಾ ಸಮಾಜದಲ್ಲಿ ನಡೆಯುತ್ತಿರುವ ಸಂಗತಿಯನ್ನು ಹಾಸ್ಯಮಯವಾಗಿ ವಿವರಿಸುತ್ತಾಳೆ,

ಆಸ್ತಿ ಇರೋರು ಕೇಳಿದ್ರೆ .... ಆಯ್ತು ಸುಮ್ನೆ ಕೂತ್ಕೊ ಜಗಮಂಡ ಅಂತಾರೆ, ನಮ್ಮಂತಹವರು ಕೇಳಿದ್ರೆ, ಮೊದ್ಲೆ ಬರಬಾರದಿತ್ತ..... ಈಗ್ತಾನೆ ಕಬ್ಬು ಕುಯ್ಲಿನ ದುಡ್ಡನ್ನ ದೊಡ್ಡಮ್ಮ ಇಸಕೊಂಡು ಹೋದ್ಲು ಅಂತಾರೆ. ನಮ್ಮಂತಹವರಿಗೆ ಯಾರು ದುಡ್ಡು ಕೊಡ್ತಾರೆ ಸಾರ್.

ಬಂಧುಗಳ ಬಗ್ಗೆ ಬೇಸತ್ತು ಅವರ ಸಾವು ನೋವುಗಳ ಸಂದರ್ಭದಲ್ಲಿ ಸಮಯಸಾಧಕರಾಗಿ ವರ್ತಿಸುವವರ ಬಗ್ಗೆ ವಿಡಂಬನೆ ಮಾಡುತ್ತಾಳೆ:

ಈಗ ಇರೋದು ಸುಮ್ಮನೆ ಹೊಗೋದು ನಮ್ಮ ಮನೆ. ಈ ಕಾಯಾನ, ಡಬ್ಬಾನ ತಗೊಂಡೋಗುವಾಗ ನೆಂಟರು, ಇಷ್ಟ್ರು, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಬಡಕೊಂಡು ಬಂದು ಬಿಡ್ತಾರೆ. ಅದರಲ್ಲಿ ನಾಲ್ಕು ಜನ ಹೆಣ್ಣುಮಕ್ಕಳು ಇರ್ತಾರೆ. ಸತ್ತ ಆ ತಾಯಿ

ಮೈಮೇಲೆ ನಾಲ್ಕು ವಡವೆ ಇರುತ್ತೆ. ಎಲ್ಲಾರೂ ಒಂದು ತರವಾಗಿ ದುಃಖ ಮಾಡಿದ್ರೆ, ನನ್ನಂಗೆ ಬಡವಿ ಆಗಿ ಇರ್ತಾಳಲ್ಲ, ನೊಂದಿರ್ತಾಳಲ್ಲ, ಅವಳಿಗೆ ಒಂದು ತರ ದುಃಖ...... ಹೆಂಗೇ?, ಅಮ್ಮ ನಿನ್ನ ಕತ್ತಿನಲ್ಲಿರೋ ಕಾಸಿನ ಸರ ಕೊಟ್ಟಿದ್ರೇ ಅವತ್ತೇ ನನ್ನ ಮೂರು ಜನ ಹೆಣ್ಮಕ್ಕಿದ್ರು ಅವರಿಗೆ ಹಂಚಿಬಿಟ್ಟು ಹೆಂಗೊ ಮದುವೆ ಮಾಡುತ್ತಿದ್ದೆ...... ಈಗ ನಮ್ಮ ಅಕ್ಕಂದಿರು ಬಿಟ್ಟಾರೇನೇ.... ಎಲ್ಲಾರು ಬಂದುಬಿಟ್ಟು ಭಾಗಕ್ಕೆ ಕೂತುಕೊಂಡವ್ರೆ, ಎಂಥಾ ಮೋಸ ಮಾಡಿಬಿಟ್ಟೆ ನನ್ನವ್ವ......

ಮಗು ಹುಟ್ಟಿದ ಸಂದರ್ಭ, 'ಅಜ್ಜಿ ಬರುತ್ತಾಳೆ, ನಾಮಕರಣ ನಡೆಯುತ್ತಿದೆ, ಜಯಮ್ಮ ಅಜ್ಜಿಯ ಮಾತಿನ ಶೈಲಿಯಲ್ಲೆ ಹೇಳುತ್ತಾಳೆ; ಹೆಂಗಿದಿಯೇ ಮಗ... ಗಂಡು ಮಗ ಕಣಜ್ಜಿ.... ಚೆನ್ನಾಗಿ ಸಾಕು... ಎಲ್ಲರಿಗೂ ಮಕ್ಕಳು.... ನನ್ನ ಮೊಮ್ಮಗಳಿಗೆ ಮಕ್ಕಳಿಲ್ಲ ಅಂತಾ ದೇವರಿಗೆ ಹರಕೆ ಹೊತ್ತು ಕೊಂಡಿದ್ದೆ. ನಂದು ಓಲ್ಡ್ ಪೆನ್ಷನ್ ಬರ್ತಾದಲ್ಲಾ..., ಆಗ ಹತ್ತು ರೂಪಾಯಿ ಕೊಡ್ತೀನಿ....., ಅವ್ವನಿಗೆ ಸ್ವಲ್ಪ ರವೆ ಉಂಡೆ, ಎಲೆ ಅಡಿಕೆ ಕೊಡ್ರಿ.... ಮದುವೆ ದಿನ ಬರ್ತಾರೆ, ಲೇ,... ಈ ಹುಡುಗಿ ಯಾರು ಅಂದುಕೊಂಡಿದ್ದೀಯಾ? ನಮ್ಮಣ್ಣನ ಮಗಳು.... ಈಡು ಜೋಡಿ ಸಂದಾಗದೆ ಕಣಪ್ಪ... ಸಂದಾಗದೆ... ಅಮ್ಮನಿಗೆ ಸೀರೆ ರವಿಕೆ ಕೊಟ್ಟುಕಳಿಸಿ...... ತೀರಿಕೊಂಡ ದಿನ ಬರ್ತಾರೆ.... ನನ್ನ ಮೊಮ್ಮಗ ಪ್ಯಾಂಟು ಶೂಟು ಹಾಕ್ಕೊಂಡು ನಡುಬೀದಿಯಲ್ಲಿ ಓಡಾಡ್ತಾ ಇದ್ದರೆ ಥರೆ ಮೊಮ್ಮಗ ಬಂದಂಗೆ ಬರತಿದ್ದನಲ್ಲೊ ಭಗವಂತಾ....

ಜನರು-ಬಂಧುಗಳು ಹೇಗೆ ಎಂದರೆ 'ರಾಗಿಕಲ್ಲು ಬೀಸುವಾಗ ರಾಜ್ಯವೆಲ್ಲ ನೆಂಟರು' ಎಂಬಂತೆ. ಜಯಮ್ಮನಿಗೆ ಎದುರಾದ ಕಷ್ಟಗಳು, ಸೋದರರ ಅಸಹಕಾರ, ಮನೆತುಂಬ ಮಕ್ಕಳು, ಅನಾರೋಗ್ಯದಿಂದ ಕೂಡಿದ ಮಕ್ಕಳು- ಹೀಗೆ ಎಲ್ಲವೂ ಆಕೆಗೆ ಸವಾಲೊಡ್ಡಿ ನಿಂತವು. ಆಗ ಆಕೆಗೆ ತಂದೆಯಿಂದ ಬಳುವಳಿಯಾಗಿ ಹಾಗೂ ಪರಂಪರಾಗತವಾಗಿ ಬಂದ ಕಲೆ ಉತ್ತರವಾಯಿತು. ತನ್ನ ಮಕ್ಕಳನ್ನು ಸುಖವಾಗಿ ಸಾಕಬೇಕು ಎಂಬ ಛಲ ಹುಟ್ಟಿಕೊಳ್ಳುತ್ತದೆ. ಆಕೆ 'ಬುರ್ರಕಥೆ' ಯನ್ನು ಸಾರ್ವಜನಿಕವಾಗಿ ಆಡುವುದಕ್ಕೆ ಮುಂಚೆ ಒಂದೆರಡು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಾಳೆ. ಮೊದಲನೆಯದು, ಆಕೆಯ ಮಗಳಿಗೆ ತುಂಬಾ ಅನಾರೋಗ್ಯ. ಯಾವುದೆ ಚಿಕಿತ್ಸೆ ಫಲಕಾರಿಯಾಗುವುದಿಲ್ಲ. ಮಗು ಊಟ ಮಾಡಿ ಎಷ್ಟೋ ದಿನ ಆಗಿದೆ. ಏನು ಆಹಾರ ಕಂಡರೂ ವಾಕರಿಕೆ. ಕಡೆಗೆ ತನ್ನ ಬಂಧು ಬಿಲ್ಲವನ ಬಳಿ ಯಂತ್ರ ಹಾಕಿಸಲು ಎರಡು ರೂಪಾಯಿ ಕೇಳುತ್ತಾಳೆ. ಆಕೆ ಜಯಮ್ಮನ ಮಾತನ್ನು ನಂಬದೆ ಪರಿಶೀಲನೆ ಮಾಡಿ ಎರಡು ರೂಪಾಯಿ ನೀಡುತ್ತಾಳೆ. ಆ ಎರಡು ರೂಪಾಯಿ ತೆಗೆದುಕೊಂಡು ಹೋಗಿ ಚಿಕ್ಕಮ್ಮನ ಕೆರೆಯ ಬಳಿಯಿದ್ದ ದೇವಸ್ಥಾನದಲ್ಲಿ ಯಂತ್ರ ಹಾಕಿಸುತ್ತಾಳೆ. ಮಗು ಉಷಾರಾಗುತ್ತದೆ. ಮುಂದೆ ಈ ಮಗು ಕೆಂಪೇಗೌಡ ಆಸ್ಪತ್ರೆಯಲ್ಲಿ ತೀರಿಹೋಗುತ್ತದೆ.

ಇನ್ನೊಂದು ಘಟನೆ: ಈಕೆಯ ತಮ್ಮ ರಾಮ ಮಂಗಳಾರತಿಯಲ್ಲಿ ಬಂದ ಹಣದಲ್ಲಿ ಎರಡು ರೂಪಾಯಿ ಕೊಡಲು ನಿರಾಕರಿಸುತ್ತಾನೆ, 'ನಾನು ಕೊಡಲ್ಲ ಅಕ್ಕ, ನನ್ನ ಮಂಗಳಾರತಿಯೊಳಗೆ ಹತ್ತು ಪೈಸೆ ಒಬ್ಬರಿಗೆ ಕೊಟ್ಟುಬಿಟ್ರೆ ದರಿದ್ರ ಬಂದು ಬಿಡ್ತದೆ, ಕೊಡಲ್ಲ' ಎಂದು ನಿಷ್ಠುರವಾಗಿ ಹೇಳಿಬಿಡುತ್ತಾನೆ.

ಮತ್ತೊಂದು ಘಟನೆ: ಈಕೆಯ ತಮ್ಮ ರಾಮ ಹೊನ್ನಮ್ಮನದೊಡ್ಡಿಗೆ ಹೋಗಿ ಹೇಗೋ ಒಂದು ಮೂಟೆ ಭತ್ತ ಸಂಪಾದಿಸಿಕೊಂಡು ಬಂದಿರುತ್ತಾನೆ. ತಮ್ಮ ತಮ್ಮನ ಹೆಂಡತಿ ಮುಂದೆ ಈಕೆ ಹೋಗಿ ಅಂಗಲಾಚಿ.... 'ರಾಮ ಎರಡು ಸೇರು ಭತ್ತ ಕೊಡೋ.... ಮಗ ಅನ್ನ ಕೇಳ್ತಾದೆ.. ಎಂದು ಗೋಗೆರೆಯುತ್ತಾಳೆ. ಅದಕ್ಕೆ ಆಕೆಯ ತಮ್ಮ.... ನನ್ನ ಕೇಳಬೇಡವ್ವ, ನನ್ನ ಖರ್ಚಿಗೆ ದುಡ್ಡುಬೇಕು ಎಂದು ಹೇಳುತ್ತಾನೆ. ಆಕೆಗೆ ಆಗ ಮತ್ತೆ ಛಲ ಹುಟ್ಟಿಕೊಳ್ಳುತ್ತದೆ. ಕಲೆಯ ಮೂಲಕವೇ ನನ್ನ ಬದುಕಿಗೊಂದು ದಾರಿ ಕಂಡುಕೊಳ್ಳಬೇಕೆಂದು ಅನ್ನಿಸುತ್ತದೆ,

'ಅವತ್ತು ನನಗೆ ಛಲ, ಗುಮಟೆ ಎತ್ತಿಕೊಂಡೆ..., ಅದು ನಾವು ಬಾರಿಸೋ ಗುಮಟೆ, ತಂಬೂರಿ ಕೊಡು ಅಂದೆ.... ತಂಬೂರಿ ನಾನು ಕೊಡೋದಿಲ್ಲ ಅಂದ..... ಆ ಗುಮಟೆ ಎತ್ತಿಕೊಂಡು ಒಂದು ಮನೆ ಹತ್ತಿರ ಹೋಗಿ ಕುಂತುಕೊಂಡೆ....... ಮನೆಯವರು...... ಜಯಮ್ಮ ಯಾವತ್ತು ಬಂದೆ ಅಂದ್ರು..... ನಾನು ನಿನ್ನೇನೆ ಬಂದೆ ಅಂದೆ.... ಬಾ ಅಂದ್ರು..... ಕುಂತುಕೊಂಡೆ.... ಎಲ್ಲಾ ನಾಲ್ಕೈದು ಮನೆಯವರು ಅಲ್ಲಿಗೆ ಸುತ್ಕೊಂಡು ಬಿಟ್ರು..... ನಲ್ಲತಂಗಿ ಕಥೆ ಗುಮಟೆ ಬಾರಿಸ್ತಾ ಹಾಡಕ್ಕೆ ಶುರುಮಾಡ್ತೆ.... ಒಳಗಿನ ದುಃಖ ಕಣ್ಣೀರಾಗಿ ಹರಿತಾ ಇದೆ..... ನಾನು ಹಾಡ್ತಾಯಿದ್ದೀನಿ, ನಾನಾಡ್ತಯಿದ್ದೀನಿ.... ನನ್ನ ಕಣ್ಣಲ್ಲಿ ನೀರು ಸೋರ್ತಾಯಿದೆ.... ತಮ್ಮ ತಮ್ಮನ ಹೆಂಡ್ತಿ ಭತ್ತ ಮಾರೋದಿಕ್ಕೆ ತಗೊಂಡೋಗ್ತಿದ್ದಾರೆ.... ನೋಡು ನನ್ನ ವಿಧಿ ಹೆಂಗೆ ಆಡಿಸಿಬಿಟ್ಟ ಆ ಪರಮಾತ್ಮ.

ಮದುವೆಯಾದ ಮೇಲೆ ಸುಮಾರು ೨೧ ವರ್ಷ ಯಾವುದೇ ಆದಾಯವಿಲ್ಲದೆ, ಕಸುಬಿಲ್ಲದೆ ಜೀವನ ಸಾಗಿಸಿದ ಜಯಮ್ಮ ಅಂತಿಮವಾಗಿ ತಾನು ತಿಂದ ನೋವುಗಳಿಂದ ಹೊರಬರಲು ಕಲೆಯನ್ನು ಅವಲಂಬಿಸುತ್ತಾಳೆ.

ತಮ್ಮ ತಂಬೂರಿ ಕೊಡಲಿಲ್ಲ. ಮತ್ತೆ ಕಥೆ ಮಾಡೋಕೆ ತಂಬೂರಿ ಬೇಕಲ್ಲ. ಬೋರಾಪುರದ ಹೊಗೆಸೊಪ್ಪಿನ ತೋಟದಲ್ಲಿ ಕಂಡ ಸ್ವಾರೆಕಾಯಿಯ ಬುರಡೆಯನ್ನು ಆಕೆ ಕೇಳಿ ಪಡೆದುಕೊಳ್ಳುತ್ತಾಳೆ. ಸ್ವಾರೆಬುರುಡೆ ಕೊಟ್ಟ ಚನ್ನಮ್ಮ ಬಿತ್ತನೆಗೆ ಅದರೊಳಗಿನ ಬೀಜ ಬೇಕು ಎಂದು ಪಡೆದುಕೊಳ್ಳುತ್ತಾಳೆ. ಅವರ ಪೈಕಿ ಒಬ್ಬನಿಗೆ ಈ ಸ್ವಾರೆಬುರುಡೆ ಕೊಟ್ಟು ಮೂರು ತಂತಿ ಹಾಕು ಎಂದು ಆತನಿಗೆ ಹೇಳಿ ತಂಬೂರಿ ಸಿದ್ಧಪಡಿಸಿಕೊಳ್ಳುತ್ತಾಳೆ. ಮರದ ಚಕ್ಕೆಯನ್ನು ಕುಡುಗೋಲಿನಿಂದ ಸವರಿ ಎರಡು ಚಿಟಿಕೆಗಳನ್ನು ಮಾಡಿಕೊಂಡು ತನ್ನ ಕಲಾ ಕಾಯಕಕ್ಕೆ ಚಾಲನೆ ನೀಡುತ್ತಾಳೆ. ಬದುಕಿನ ಜಂಜಾಟದಲ್ಲಿ ಸೋತು ಸೊರಗಿದ ಜಯಮ್ಮ ಮುಂದೆ ಕಲಾ ಸೇವೆಯಲ್ಲಿ ತೃಪ್ತಿಯನ್ನು ಕಂಡುಕೊಳ್ಳುತ್ತಾಳೆ.

ಭಾಷೆಯ ತೊಡಕು

ಜಯಮ್ಮನವರ ತಂದೆ, ತಾತ ಬುರ‍್ರಕಥೆಯನ್ನು ತೆಲುಗಿನಲ್ಲೇ ಕಲಿತವರು. ಆ ಭಾಷೆಯಲ್ಲೇ ಅವರಿಗೆ ಹೆಚ್ಚಿನ ಪ್ರಭುತ್ವ ಇದ್ದಿದ್ದು ಆಕೆಯ ಮಾತುಗಳಿಂದ ಕಂಡು ಬರುತ್ತದೆ. ತೆಲುಗಿನಲ್ಲಿ ಹಾಡು ಹಾಡಲಾರಂಭಿಸಿದರೆ ಕನ್ನಡದ ಜನ ಹೇಗೆ ಸ್ವೀಕರಿಸುತ್ತಿದ್ದರು ಎಂಬುದಕ್ಕೆ ಆಕೆ ತನಗಾದ ಅನುಭವವನ್ನು ವಿವರಿಸುತ್ತಾಳೆ....:

> ಈ ಕನ್ನಡ ಭಾಷೆಯೊಳಗೆ ಕಥೆಯ ಪ್ರಾರಂಭವಿಲ್ಲ ತೆಲುಗಿನಲ್ಲಿ ಹಾಡಬೇಕು.... ಹೆಂಡ್ರಾ..... ಪಂಡ್ರಾ ಅಂತೀಯಾ ಹೋಗಮ್ಮ ಅಂತಾರೆ .... ಏನು ಮಾಡೋದು? ಈ ಕನ್ನಡ ಭಾಷೆಯೊಳಗ ಅರ್ಥ ಮಾಡಿಕೊಟ್ಟರೆ ..... ತೆಲುಗಿನಲ್ಲಿ ರಾಗ ಎಳೆತೀರಲ್ಲಾ ಅದು ಕನ್ನಡದಲ್ಲಿ ಬಂದುಬಿಟ್ಟರೇ ನಮಗೆ ಭಾರಿ ಇಂಪು. ನೀವು ಮಾತಾಡದಂಗೆ ಹೊಡೆದು ಹೇಳಿದ್ರ ನಮಗೇನು ಅರ್ಥ ಆಗುತ್ತೆ.... ಅಂತಾ ಹೇಳಿಬಿಡೋರು.

ಈಕೆ ಆರಂಭದಲ್ಲಿ ಎದುರಿಸಿದ ಭಾಷೆಯ ತೊಡಕನ್ನು ವಿವರಿಸುತ್ತಾ ಕನ್ನಡದಲ್ಲೆ ಬುರ‍್ರಕಥೆಯನ್ನು ಕಲಿತು ಹಾಡಬೇಕೆಂದು ಪಣ ತೊಡುತ್ತಾಳೆ. ಈಕೆ ಕನ್ನಡಕ್ಕೆ ತರ್ಜುಮೆ ಮಾಡಿ ಹಾಡುವ ರೀತಿಯನ್ನು ಕಂಡರೆ ಯಾರಾದರೂ ನಿಬ್ಬೆರಗಾಗುತ್ತಾರೆ. ಈಕೆಗಿರುವ ಅಪಾರ ಜ್ಞಾಪಕ ಶಕ್ತಿ, ಕನ್ನಡ ಶಬ್ದಸಂಪತ್ತು ನಿಜವಾಗಿಯೂ ಸೋಗಿಜಗವೇ ಸರಿ.

ಕನ್ನಡ ಭಾಷೆಯಲ್ಲಿ ಹಾಡುಗಾರಿಕೆಯನ್ನು ಕಲಿತ ಬಗ್ಗೆ ಆಕೆ ಪಟ್ಟ ಪರಿಶ್ರಮದ ಬಗ್ಗೆ ಮನಬಿಚ್ಚಿ ಮಾತನಾಡುತ್ತಾಳೆ. ಕನ್ನಡ ಭಾಷೆಯೊಳಗ ಒಂದು ಛಲ ಹುಟ್ಟಿಕೊಂಡಿತು.

> ಕನ್ನಡ ಭಾಷೆಯೊಳಗ ಇದನ್ನು ಹಗಲು ರಾತ್ರಿ ಶುರುಮಾಡಿಕೊಂಡ್ವಿ. ಒಂದೊಂದೇ ಮಟ್ಟನ್ನು... ವೀರನಾದಕ ಓದಿಯಾ ಟೂಸಾಲಾ....
>
> .... ರಾಮಜೋಗಿ ಮಂದಾಲೋ....
>
> ....ದೇವ ಜೋಗಿ ಮಂದಾಲೋ.... ಅಂದ್ರೆ ಏನು ಅಂತ ಗೊತ್ತಾಗುತ್ತೇನ್ರಿ ನಿಮಗೆ.... ಎಂದು ಹೇಳುತ್ತಾ ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುತ್ತಾಳೆ.
>
> ರಾಮ ಜೋಗಿ ಮದ್ದೈತಿ....
> ದೇವ ಜೋಗಿ ಮದ್ದೈತಿ....
> ತಲೆನೋವಿಗೆ ಮದ್ದೈತಿ....
> ಚಳಿ ಜ್ವರಕೆ ಮದ್ದೈತಿ....
> ಹಲ್ಲು ಬಾವಿಗೆ ಮದ್ದೈತಿ....
> ಕೀಲು ಬಾವಿಗೆ ಮದ್ದೈತಿ....
> ನಿಮೋನಿಯಾಗೆ ಮದ್ದೈತಿ....

ರಕ್ತು ಕಾಸಿ ಮದ್ದೈತಿ....

ಒಂದು ಹಾಡು ತೆಲುಗಿನಲ್ಲಿ ಹಾಡುತ್ತಾ...... 'ತಲ್ಲಿಗಬ್ಬಾ ಮುಂದು ನಾ ತನ್ನೋತೇ ಯಾವುಡೋ ಕಿನ್ನರಿ ರೀತಿ ಕನಕಂಟೂ......

ಕನ್ನಡದ ಭಾಷೆಯಲ್ಲಿ ಕಥೆಯನ್ನು ಕಲೀಬೇಕಂದ್ರ ನಾವು ಎಷ್ಟು ಕಷ್ಟಪಟ್ಟಿದೀವಿ.... ಈ ಕರ್ನಾಟಕದಲ್ಲಿ ತುತ್ತು ಹುಟ್ಟಿಸಿಕೊಂಡು ಊಟ ಮಾಡಬೇಕಂದ್ರೆ ನಾವು ತುಂಬಾ ಕಷ್ಟ ಪಟ್ಟಿದ್ದೀವಿ ..... ಎಂದು ಹೇಳುತ್ತಾ ಜಯಮ್ಮ ಕನ್ನಡಾನುವಾದ ಅಭ್ಯಾಸದ ಬಗ್ಗೆ ವಿವರಿಸುತ್ತಾಳೆ. ನಮ್ಮಪ್ಪ ಒಂದೊಂದೇ ಮಟ್ಟು ತೆಲುಗಿನಲ್ಲಿ ಹಾಡಬೇಕು.... ಕೂತುಕೊಂಡು ಹಂಗೇ ಯೋಚನೆ ಮಾಡಬೇಕು.... ಅಪ್ಪಾಜಿ ನೀವು ತೆಲುಗಿನಲ್ಲಿ ಹಾಡಿ ನಾನು ಕನ್ನಡದಲ್ಲಿ ವರ್ಣಿಸ್ತೀನಿ.... ಒಂದು ತಿಂಗಳು ಕಾಲ ಅದೇ ಪಾಠ ಆಗೋಯ್ತು.... ನಮ್ಮ ಅಪ್ಪಾಜಿಗೂ ನನಗೂ.... ಆ ಶಾರದಾಂಬೆ ನಮಗ ಕನ್ನಡದೊಳಗ ತಂದುಬಿಟ್ಲು....

ವಿಶ್ವವಿದ್ಯಾಲಯದ ಭಾಷಾಂತರ ಪದವಿ ತರಬೇತಿ ಪಡೆದವರೂ ಕೂಡ ಒಂದು ತಿಂಗಳಲ್ಲಿ ಐದಾರು ಕಾವ್ಯಗಳನ್ನು ಕನ್ನಡ ತರ್ಜುಮೆ ಮಾಡಲು ಸಾಧ್ಯವೆ? ಬರವಣಿಗೆಯ ಗಂಧ ಗಾಳಿ ಗೊತ್ತಿಲ್ಲ. ಎಲ್ಲವನ್ನೂ ಜ್ಞಾಪಕದಲ್ಲಿಟ್ಟುಕೊಂಡು ತರ್ಜುಮೆ ಮಾಡಬೇಕು, ಮತ್ತೆ ಅದನ್ನು ಹಾಡಬೇಕು. ಅಂತಹ ಸಾಹಸಗಳನ್ನು ತಂದೆ ಮಗಳು ಮಾಡಿ ಆಕೆಯೇ ಹೇಳುವಂತೆ 'ಕನ್ನಡದ ಮಗಳು' ಎಂಬ ಖ್ಯಾತಿಗೆ ಭಾಜನಳಾಗಿದ್ದಾಳೆ. ಮತ್ತೊಂದು ಹಾಡನ್ನು ತೆಲುಗಿನಲ್ಲಿ ಸುಶ್ರಾವ್ಯವಾಗಿ ಹಾಡುತ್ತಾಳೆ....

ತಲ್ಲಿಗಬ್ಬಮುಂದ ನಾ ತನ್ನೋತೇ ಯವ್ವಡೊ....
ಕಂಚಿಂರಾವ್ ಕಿನ್ನಾರೀಕಿ ಕನಕಂಬೊರಪ್ರುನಾಥ ವಿರ್ರ್ವದಾ....

ಅರ್ಥವಾಯ್ತೇನ್ರಿ, ಅರ್ಥವಾಯ್ತಾ ಸಾರ್ ನಿಮಗೆ ಎಂದು ಪ್ರೇಕ್ಷಕರನ್ನು ಪ್ರಶ್ನಿಸುತ್ತಾ ಕನ್ನಡದಲ್ಲಿ ಮತ್ತೆ ಅದೇ ದಾಟಿಯಲ್ಲಿ ಹಾಡುತ್ತಾಳೆ,

ತಾಯಿ ಗರ್ಭದಿಂದ ಹುಟ್ಟುತ್ತಾ ಹಣ ತಂದಿಲ್ಲಾ....
ಹೋಗ್ವಾಗ ಏನೂ ತಂಗೊಂಡೋಗಲಿಲ್ಲಾ....
ಹೋಗುವಾಗ್ಲೂ ಬೆತ್ತಲೆ.... ಬರುವಾಗ್ಲೂ ಬೆತ್ತಲೆ....
ಗುಂಡಾಗಿ ಬಂದಿದ್ದೀವಿ.... ಬೆಂಡಾಗಿ ಹೊರಟೋಗತ್ತೀವಿ.

ಮತ್ತೆ ತೆಲುಗಿನಲ್ಲಿ ಹಾಡುತ್ತಾ ಕನ್ನಡದಲ್ಲಿ ವಿವರಿಸುತ್ತಾ ಪ್ರೇಕ್ಷಕರ ಮನಸ್ಸನ್ನು ಗೆಲ್ಲುತ್ತಾಳೆ,

....ಇಂತ ಸಂಪಾದಿಂಚಿ ಇಟುವಲನಾ ದಾಸಿ ಮರಣ ಗಾಲವೊ ನಾಡು ಮರುತೇನೆ... ಎಮೋ, ಇಷ್ಟು ಸಂಪಾದಿಸಿ ಬಚ್ಚಿಟ್ಟು ಮರಣಕಾಲದ ದಿವಸ ಏಕೆ ಮರೆತು ಹೋಗಬೇಕು. ಜೀವಕ್ಕೆ ಇದೊಂದು ಬಾಡಿಗೆ ಮನೆ. ಜೀವ ಈ ಬಾಡಿಗೆ ಮನೇಲಿ ಇರೋತನಕ ಈ ಬಾಡಿಗೆ ಮನೆ ನಂದು.... ಹೊಲ ನಂದು.... ಗದ್ದೆ ನಂದೂ.... ನಂದೂ...... ನಂದೂ...... ಮಾತು ನಿಂತೈತಿ ಎತ್ತಿ ಪಡಸಾಲೆಗೆ ಒಯ್ಯಿರಿ... ಆಜು ಬಾಜುವಿನ ನೆಂಟರಿಗೆಲ್ಲ ಹೇಳಿಬಿಡಿ .... ಅಸ್ಥಿರವಾದ ದೇಹ.... ಸ್ಥಿರವಾದ ದೇಹವಲ್ಲ.... ಶತ್ರುವಾದ್ರು ಹಿತ ಕೋರಬೇಕು... ತಿರದು ಬಂದ್ರು ಕರೆದು ಊಟ ಹಾಕಬೇಕು.... ಬಾಪ್ಪ ಎಂದವನಿಗೆ ಸ್ವರ್ಗ.... ಬಾರೋ ಎಂದವನಿಗೆ ನರಕ....

ಕಲೆಯೇ ಜೀವನ ಆದಾಗ, ಬದುಕು ಸಾಗಿಸಲು ಇದು ಅನಿವಾರ್ಯ ಎಂದಾದಾಗ, ಎಷ್ಟೇ ಕಷ್ಟ ಇದ್ದರೂ ದಾಟುವ ಶಕ್ತಿ ಛಲ ಕಲಾವಿದನಿಗೆ ಬರುತ್ತದೆ. ಜಯಮ್ಮ ಉಂಡ ನೋವು ಆಕೆ ಎರಡೂ ಭಾಷೆಯಲ್ಲಿ ಪ್ರಭುತ್ವವನ್ನು ಹಾಗೂ ಹಿಡಿತವನ್ನು ಸಾಧಿಸಲು ದಾರಿಮಾಡಿಕೊಟ್ಟಿತು.

ಸಾವು–ನೋವು

ಈ ಮೊದಲೇ ಹೇಳಿದಂತೆ ಈಕೆಯ ತಮ್ಮಂದಿರು ಏಳು ಜನ ಅಕಾಲ ಮೃತ್ಯುವಿಗೆ ತುತ್ತಾಗುತ್ತಾರೆ. ಅವರು ಈಕೆಗೆ ಯಾವುದೇ ರೀತಿಯ ಸಹಕಾರ ನೀಡದಿದ್ದರೂ ಅವರ ಸಾವಿಗಾಗಿ ಆಕೆ ಮರುಗಿ ಕಂಬನಿ ಮಿಡಿಯುತ್ತಾಳೆ.

....ನಮ್ಮ ಅಪ್ಪಾಜಿಯವರು ಹೃದಯಾಘಾತವಾಗಿ ತೀರಿಹೋಗಿಬಿಟ್ಟರು. ಬಸ್ಸು ಇಳಿದುಬಿಟ್ಟು.... ಹಳ್ಳಿ ಮರಕ್ಕೆ ಒರಗಿಕೊಂಡು ಮಳವಳ್ಳಿಯೊಳಗೆ ತೀರಿಹೋಗಿಬಿಟ್ಟರು. ನನ್ನ ತಮ್ಮ ಇಲ್ಲಿಗೆ ಎಂಟನೇ ವರ್ಷದಲ್ಲಿ ಅವನು ಹಾರ್ಟ್‌ಅಟ್ಯಾಕ್ಕಾಗಿ ತೀರಿಕೊಂಡು ಬಿಟ್ಟ.... ರಾತ್ರಿ ಮಲಗಿದನು ಬೆಳಿಗ್ಗೆ ಕಾಫಿ ಕುಡಿಯ್ಯೊಕೆ ಏಳಲೇ ಇಲ್ಲ. ಈ ತರ ಏಳು ಜನ ತಮ್ಮಂದಿರು ಹೋಗಿಬಿಟ್ಟರು ಸಾರ್. ತಂದೆ ತಾಯಿಗಳು ಕೂಡ ಹೋಗಿಬಿಟ್ಟರು....

ಈಕೆಯ ತಂದೆಗೆ ೯೫ ವರ್ಷಗಳು. ವಯಸ್ಸಾದಂತೆ ಕಾಣುತ್ತಿರಲಿಲ್ಲ. ಹಲ್ಲುಗಳು ಬಿದ್ದಿರಲಿಲ್ಲ, ತಲೆಕೂದಲು ನೆರೆತಿರಲಿಲ್ಲ ಎಂದು ತನ್ನ ತಂದೆಯ ಬಗ್ಗೆ ಹೆಮ್ಮೆಯಿಂದ ಹೇಳುತ್ತಾಳೆ. ನಮಗೆ ಬದುಕಿಗಿಂತ ಕಲೆಯೇ ಮುಖ್ಯ ಎಂದು ಪದೇ ಪದೇ ಹೇಳುತ್ತಾ ಮನಃಕರಗುವಂತಹ ಒಂದು ಮಾತನ್ನು ನುಡಿಯುತ್ತಾಳೆ,

....ಮನೆಯಲ್ಲಿ ಏನೇ ಕಷ್ಟ ಇರಲಿ. ನಾನು ಬರೋದಕ್ಕೆ ನನ್ನ ಮಗ ತೀರಿಕೊಂಡಿದ್ದರೆ ಪರವಾಗಿಲ್ಲ.... ಅವನು ತೀರಿಕೊಂಡಿದ್ದರೆ ಪರವಾಗಿಲ್ಲ.... ಇರೋದು ಒಬ್ಬ ಮಗ... ಹೆತ್ತ ಸತ್ತ ತಾಯಿ ಮಲಗಿಸಿಬಿಟ್ಟು ಹೋಗಿ ೦೭ ಕಥೆ ಮಾಡಿಬಿಟ್ಟು ೦೩ ಗಂಟೆಗೆ ಬಂದು ಮಣ್ಣು ಮಾಡಿದ್ದೀನಿ....

ತನಗೆ ಹುಟ್ಟಿದ ಏಳು ಹೆಣ್ಣುಮಕ್ಕಳನ್ನು ಸಾಕಿ ಸಲುಹಲು ಬಹಳ ಕಷ್ಟಪಟ್ಟಿದ್ದಾಳೆ. ಒಬ್ಬ ಮಗಳನ್ನು ಉಳಿಸಿಕೊಳ್ಳಲು ನಾನಾ ತರಹದ ಪ್ರಯತ್ನ ಮಾಡಿದ್ದಾಳೆ.... ಆದರೂ.... ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

"ಸರಸ್ವತಿ ಯಾರಿಗೆ ಒಲಿತಾಳೊ... ಒಬ್ಬ ಮಗಳಿದ್ದಳು... ಆ ಯಮ್ಮ ಕೆಂಪೇಗೌಡ್ರು ಆಸ್ಪತ್ರೆಯಲ್ಲಿ ತೀರಿ ಹೋಗಿ ಬಿಟ್ಟಳು. ಆ ಮಗಳು ಇದ್ದಿದ್ರೆ ... ಅವಳು ತಬಲ ನುಡಿಸಬೇಕಾದ್ರೆ ನನ್ನ ಸ್ಟೇಜ್ ಸ್ಟೈಲ್ ಬದಲಾಗೋದು. ನಮ್ಮಪ್ಪನ ಬಾಯಿಯಲ್ಲಿ ಎಂತಹ ಮಾತುಗಳು ಬರುತ್ತಿದ್ದವೊ ಅವುಗಳನ್ನೆಲ್ಲಾ ತನ್ನ ಬೆರಳಿನಲ್ಲೆ ನುಡಿಸುತ್ತಿದ್ದಳು...

ಮಗಳ ಕೈಚಳಕದ ಬಗ್ಗೆ ತುಂಬಾ ಹೆಮ್ಮೆಯಿಂದ ಹೇಳುತ್ತಾಳೆ. ತಾನೇ ಸಿದ್ಧಪಡಿಸಿದ ತಂಬೂರಿ ಹಿಡಿದುಕೊಂಡು ಮಗಳೊಂದಿಗೆ ಕಥೆ ಮಾಡಲು, ಬದುಕು ಸಾಗಿಸಲು ಹೊರಾಡುತ್ತಾಳೆ. ಸದ್ಯ ಆ ಮಗಳನ್ನು ತಮಿಳುನಾಡಿನ ತನ್ನ ಚಿಕ್ಕಪ್ಪನ ಮಗನಿಗೆ ಕೊಟ್ಟು ಮದುವೆ ಮಾಡಿದ್ದಾಳೆ. ಸುತ್ತಮುತ್ತಲ ಗ್ರಾಮದವರು ನಾಟಿ ಹಾಕುವಾಗ ಅವರನ್ನು ಭೇಟಿ ಮಾಡಿ ಕೇವಲ ಇಪ್ಪತ್ತೈದು ರೂಪಾಯಿಗಳಿಗೆ ಒಂದು ಕಥೆ ಮಾಡಿದ್ದಾಳೆ. ಹತ್ತತ್ತು ಮನೆಯವರು ಸೇರಿ ಒಂದೊಂದು ಕಥೆಯನ್ನು ಮಾಡಿಸ್ತಾ ಇದ್ದರು. ಸುಗ್ಗಿಯಲ್ಲಿ ಯಾರು ಮೊದಲು ಭತ್ತ ಬಡಿತಾರು ಅವರು ಜಯಮ್ಮನಿಗೆ ಎರಡು ಕೊಳಗ ಭತ್ತ ಕೊಟ್ಟುಬಿಡಬೇಕು, ಎಂದು ಹತ್ತೂ ಗ್ರಾಮದ ಹಿರಿಯರು ಸೇರಿ ಒಂದು ಫರ್ಮಾನು ಹೊರಡಿಸಿದ್ದರು. ಹೀಗೆ ಆಕೆಯ ಬದುಕು ಒಂದು ಸ್ಥಿರ ಸ್ಥಿತಿಗೆ ಬಂತು.

ತೀರಿಹೋದ ಮಗಳನ್ನು ಮತ್ತೆ ಮತ್ತೆ ನೆನೆಯುತ್ತಾ ಮತ್ತೊಂದು ಕಷ್ಟವನ್ನು ಬಿಚ್ಚಿಡುತ್ತಾಳೆ:

"ಹಾಲಳ್ಳಿ ದೊಡ್ಡ ಹಾಲಳ್ಳಿ, ಹಾಲಳ್ಳಿಯಲ್ಲಿ ಬರೀ ನಾಲ್ಕು ರೂಪಾಯಿಗೆ..... ಇಬ್ಬರು ಮಕ್ಕಳ ತಾಯಿ..... ಮನೆಯಲ್ಲಿ ಡಿಲವರಿ ಆಗಿದೆ... ಮಗಳು ಅಂದ್ರೆ ಮಗಳು ಅಲ್ಲ ಬಿಡಿ... ತೀರಿಹೋಗಿಬಿಟ್ಟಳು. ಆ ಮಗು... ಮೂರು ತಿಂಗಳ ಮಗು, ಕಂಕುಳಿಗೆ ಕಟ್ಟಿಕೊಂಡು ಬಿಟ್ಟು ನಾಲ್ಕು ರೂಪಾಯಿಗೆ ಒಂದು ಕಥೆ ಮಾಡಿಬಿಟ್ಟು ಬಂದು ಒಂದು ಕಾಲು ರೂಪಾಯಿ ಕೊಟ್ಟು ಒಂದು ಪಂಚೆ ತಗೊಂಡೆ ನಮ್ಮ ಯಜಮಾನ್ರಿಗೆ... ಇನ್ನುಳಿದ ಬಾಕಿ ಕಾಸಿಗೆ ರೇಷನ್ ತಗೊಂಡು ಆಗ ಅಡುಗೆ ಮಾಡಿಕೊಂಡು ಊಟ ಮಾಡಿಬಿಟ್ಟು, ಒಂದು ಕಡೆ ಕೂತುಕೊಂಡೆ.... ಮರದ ಬುಡಕ್ಕೆ.... ಅಲ್ಲೆ ಒಂದು ಮರದ ಕೆಳಗೆ ಅಡುಗೆ ಮಾಡುತ್ತಿದ್ವಿ... ಮತ್ತೊಂದು ಮರದ ಬುಡಕ್ಕೆ ಕೂತುಕೊಂಡು ನನ್ನ ಮನಸ್ಸಿಗೆ ಏನೋ ಬಂದು ಬಿಡ್ತು ..... ಇಕ್ಕಲಮ್ಮನ ಹಾಡು ಬಂದು ಬಿಟ್ಟವು ನನ್ನ ಮನಸ್ಸಿಗೆ....

ಕಾರಣ ಮಜ್ಜದಿ ಕೈಕಾಲುಗಳು ಪೆಡ್ಡಾ
ಮಾನ ಹೀನನ ಮಾಡಿ ಹೇಗೆನ್ನ ಬಿಸುಟೇ...
ಹೇ.... ಹೇ.... ಹೇ.... ಹೇ.... ಹೇ....
ಏಕೆನ್ನ ಬಿಸುಟೇ...

... ನಾನಾಗಿ ಕೂಗಿದರು ಓ ಎನ್ನುವುದಿಲ್ಲ.

... ಏನಾಯ್ತು ನಿನಗೆಂದು ಯಾರು ಕೇಳುವವರಿಲ್ಲ.

...ಹೇಳಲಾರೆನು ಜಗದೀ.... ತಡೆಯಲಾರೆನು ಪ್ರಭುವೇ...

ರಾಗ ಎತ್ತಿಬಿಟ್ಟೆ, ರಾಗ ಚೆನ್ನಾಗಿತ್ತು.... ಮರದ ಬುಡಕ್ಕೆ ಕೂತುಕೊಂಡುಬಿಟ್ಟು..... ಒಂದು ಜಾಕೇಟೆಲ್ಲ ನೆನ್ದೋಗಿಬಿಡ್ತು ಸ್ವಾಮಿ... ಅಷ್ಟೊಂದು ಕಣ್ಣೀರು ಸ್ವಾಮಿ.... ನನ್ನ ವಯಸ್ಸಿಗೆ ನಾನು ಪಟ್ಟ ಕಷ್ಟ ಯಾರು ಪಡಲಿಲ್ಲ... ನಾನು ಸುರಿಸಿದ ಕಣ್ಣೀರು ಯಾರೂ ಸುರಿಸಲಿಲ್ಲ.... ಅದಕ್ಕೆ ನೋಡಿ ಈವಾಗ ನನಗ ಕಣ್ಣು ಮಬ್ಬುಗಡ್ಲು, ಅಂದ್ರ ಬೆಳಿಗ್ಗೆ ಎದ್ದು ನಿಮ್ಮ ಮುಖ ನೋಡಿದ್ರೆ ಕಾಣಲ್ಲ ಚೆನ್ನಾಗಿ....

ಜಯಮ್ಮ ಸುಮಾರು ವರ್ಷಗಳಿಂದ ಈ ಕಲೆಯನ್ನೆ ನಂಬಿ ಬದುಕುತ್ತಿದ್ದಾಳೆ. ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಈಗಲಾದರೂ ಆಕೆಯ ಆರ್ಥಿಕ ಸ್ಥಿತಿ ಸುಧಾರಿಸಿದೆಯೇ ಎಂದರೆ, ಇಲ್ಲ ಎಂಬುದು ಆಕೆಯ ಮಾತುಗಳಿಂದ ಸಾಬೀತಾಗುತ್ತದೆ:

...ಕತ್ತಲು ಕತ್ತಾಲಗ ಕತ್ತಲುವುಂಟಯ್ಯ.... ನನ್ನ
ಕತ್ತಲು ಕುಂದಾಯಿ ಈ ಕತ್ತಲು ಪೊರಾಯ ....
ಕುಂದಲು ಕೊಟ್ರೆ... ಅರ್ಥವಾಯ್ತಾ..?
ನಿಮಗೆ.... ನಿಮಗೆ.... ಅರ್ಥವಾಯ್ತಾ..?

ಕತ್ತಲು ಬಿತ್ತಲು ಅಂದ್ರೆ.... ಕಥೆ ನಿಜವಾಯ್ತು, ನಿನ್ನೆ ಹೊಡೆದ ಮೊಲ ಇವತ್ತು ಸಾರಾಯ್ತು... ಆ ಮೊಲ ಸಾಯಿಸಿದವನು ಸತ್ತ. ಹಂಗೆ ನಾನು ಕಲೆ ಕಲಿತ್ತಿದ್ದು ಆಯ್ತು.... ಒಂದು ವರ್ಷದಲ್ಲಿ ಕಣ್ಣೀರು... ಒಂದು ದಿನ ಕಣ್ಣೀರು ತಪ್ಪಿದ್ರೆ.... ಮತ್ತೊಂದು ದಿನ ಕಣ್ಣೀರು.... ಸ್ವಲ್ಪ ದುಡ್ಡು ಇದ್ದಾಗ ಕಣ್ಣೀರು ಒರಸಿಕೊಂಡು... ಆಹಾ! ಪರಮಾತ್ಮ ಇವತ್ತು ಕೊಟ್ಟ ಅಂದುಕೊಂಡು ಊಟ ಮಾಡುದ್ರೆ.... ನಾಳೆ ದಿನ ಒಂದು ತುತ್ತು ಇರಲ್ಲವಲ್ಲ ಆವಾಗ ಕಣ್ಣೀರು ಸಾರ್.... ನಾನು ಕಲೆ ಕಲಿತಾಗಿನಿಂದ ಯಾವಾಗ್ಲೂ ಸಂತೋಷದಿಂದ ಇಲ್ಲ ಸಾರ್.... ನಿಮ್ಮೊಡನೆ ನಾನು ಸಂತೋಷವಾಗಿ ಕಲೆ ಮಾಡ್ತೀನಿ ಹೊರತು ನಾನು ಮನೆಗೆ ಹೋದ್ರೆ ಕಣ್ಣೀರು ಸಾರ್.....

ಬಹಳಷ್ಟು ಕಲಾವಿದರ ಬದುಕು ಹೀಗೆ ಸಾಗಿದೆ. ನಿಜವಾದ ಕಲೆ ಮಾತ್ರ ಕೊನೆಯವರೆಗೂ ಉಳಿಯುತ್ತದೆ. ಸಂತೃಪ್ತಿ ಇರುವ ಕಡೆ ಕಲೆ ಉಳಿಯುವುದಿಲ್ಲ. ಉಳಿದರೂ ಬೆಳೆಯುವುದಿಲ್ಲ. ಸೃಜನಶೀಲತೆಗೆ ನೋವು ದಾರಿಯಾಗುತ್ತದೆ. ಆಗ ಕಲೆಯ ಸ್ಥಾನ ಉತ್ತುಂಗಕ್ಕೇರುತ್ತದೆ.

ಕಥೆಯೊಳಗಿನ ವಿಡಂಬನೆ

ಸಮಾಜವನ್ನು ವಿಡಂಬನೆಮಾಡುತ್ತ ಕಥೆಯ ನಡುವೆ ಆಕೆ ನಿರರ್ಗಳವಾಗಿ ಹಿಂದಿ ಉರ್ದು ಭಾಷೆಯನ್ನು ಬಳಸುತ್ತಾಳೆ. ಕಬೀರ ಕನಕರ ಸಂತವಾಣಿಗಳನ್ನು ಉಲ್ಲೇಖಿಸುತ್ತಾಳೆ.

ಜೀವನ ....ಕ್ಯಾ ಹೈ ಅಂದಿದ್ದಾರೆ ಕಬೀರರು.... ಇವತ್ತು ಮನೆಯಲ್ಲಿ ನಾಳೆ ಮಣ್ಣಲ್ಲಿ..... ನಾಳೆಗೆ ಏನು ಇಲ್ಲ..... ಮನೆಗಿರಬೇಕು ಒಲೆ.... ಒಳ್ಳೆಯ ಮನುಷ್ಯನಿಗಿರಬೇಕು ತಲೆ... ಜೀವನವೇ ಒಂದು ನಾಟಕದ ಕಲೆ. ಇದು ಷೇಕ್ಸ್‌ಪಿಯರ್‌ನ ಮಾತುಗಳು.

ಬುರ್ರಕಥೆಯಲ್ಲಿ ಬರುವ ಪ್ರಸಂಗಗಳನ್ನು ಹೇಳುವ ಸಂದರ್ಭದಲ್ಲಿ ನಡುವೆ ಉಪಕಥೆಗಳನ್ನು ಹೇಳುತ್ತಾ ಜನರ ಮನಸ್ಸನ್ನು ಹಿಡಿದಿಡುತ್ತಾಳೆ,

ಮಾತಾ ಪಿತೃ ಸೇವೆ, ಮಲ್ಲಿಕಾರ್ಜುನನ ಸೇವೆ, ಜನತಾ ಜನಾರ್ಧನನ ಸೇವೆ....... ಅಂದಮ್ಯಾಲೆ ಹೋ... ಅಪ್ಪಾ .... ನಿಮ್ಮಪ್ಪ ಬೇಜಾನ್ ಆಸ್ತಿ ಸಂಪಾದನೆ ಮಾಡಿದ್ದಾನೆ.... ನೀನೊಬ್ಬನೇ ಮಗ.... ಆ ಗದ್ದೆಗಳಿಗೆ ನೀರು ನಿಡಿ ಕಟ್ಟುವಾಗ.... ಯಾರಾದ್ರು ನಮಗಾಗದವರು ಕಣೋ ಇವರೆಲ್ಲಾ ..... ಗುದ್ಲಿ ಮಡಗ್‌ಬಿಟ್ರೆ ಏನಪ್ಪಾ ಮಾಡೋದು..... ಬರ್ಲಿ ಬಿಡಮ್ಮ ಯಾವನನ್ನಗ ಬರುತ್ತಾನೊ... ಏನಾಗುತ್ತೋ ನೋಡ್ತೀನಿ.... ನನ್ನ ಆಸ್ತಿಯೆಲ್ಲಾ ಹೊಂಟೋಗ್ಲಿ.... ಆಸ್ತಿ, ಅಂತಸ್ತು, ನೆಮ್ಮದಿ ಜೀವನ ಯಾವುದು ಇವತ್ತಿನ ಜನಕ್ಕೆ ಮುಖ್ಯ ಅಲ್ಲ. ಮತ್ತೊಬ್ಬರ ಮೇಲೆ ಕ್ಷುಲ್ಲಕ ಕಾರಣಕ್ಕೆ ಸೇಡು ತೀರಿಸಿಕೊಳ್ಳೊ ಮನೋಭಾವ. ಕೋಪ ಎಂಬುದು ಮಹಾ ಶತ್ರು ಎಂದು ಹೇಳುತ್ತಾ.... ಕೋಪದಲ್ಲಿ ರವಿ....

ಶಾಂತಿಯಲ್ಲಿ ಗುರು, ಆತುರಗಾರನಿಗೆ ಬುದ್ಧಿಮಟ್ಟ... ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು.... ಹೀಗೆ ಅನೇಕ ಅನುಭವದ ನುಡಿಗಳನ್ನು ಕಥಾ ಪ್ರಸಂಗದ ನಡುವೆ ಸೇರಿಸಿ ಮಾತನಾಡುತ್ತಾಳೆ. ಹಾಗೆಯೇ ಮುಂದುವರಿದು ಒಂದು ಉದಾಹರಣೆ ನೀಡುತ್ತಾಳೆ:

ನಿಮ್ಮ ಹೆಂಡ್ತಿನಾ..... ಅದೇ.... ಅವರು ಬರ್ತಾರಲ್ಲ.... ನಿಮ್ಮ ಮನೆಗೆ ಅವರೊಂದಿಗೆ ಬಹಳ ಹೊತ್ತು ಮಾತಾಡ್ತ ಇದ್ರು ಕಣೋ... ಎಂದು ಹೇಳಿ ಒಬ್ಬರ ಮನಸ್ಸನ್ನ ಕೆಡಿಸಿ ಆನಂದ ಪಡೋರು, ಇರ್ತಾರೆ.

ಹೀಗೆ ಅನೇಕ ಜೀವನಾನುಭವದ ಮಾತುಗಳನ್ನು ಆಡುತ್ತಾ ಆಧುನಿಕ ಸಮಾಜವನ್ನು ವಿಡಂಬನೆ ಮಾಡುತ್ತಾಳೆ, ಜೊತೆಗೆ ಜಾನಪದ ಕಲೆ ತನ್ನ ಮಹತ್ವವನ್ನು ಕಳೆದುಕೊಳ್ಳುವುದಕ್ಕೆ ಆಧುನಿಕ ದೃಶ್ಯಮಾಧ್ಯಮಗಳೇ ಕಾರಣ ಎಂದು ಹೇಳುತ್ತಾಳೆ:

ಏನ್ರಮ್ಮ ಹಳ್ಳಿ ಮುಕ್ಕನಿಗೆ ಹುಳ್ಳಿ ಕಜ್ಜಾಯಾ... ಅಂತ ನನಗೇನು ತಿಳಿಯುವುದಿಲ್ಲ ಅಂತಿರಾ... ನಿಮಗೇನು ಗೋತ್ತಾಗುತ್ತೆ... ನಾವು ಸಿಟಿ ಹುಡುಗೂರು ಅಂತ ಅನ್ನಬೇಡಿ, ನನಗೆಲ್ಲಾ ಗೊತ್ತು

ಎಂದು ಹೇಳುತ್ತಾ ಒಂದು ಘಟನೆಯನ್ನು ಉಲ್ಲೇಖಿಸುತ್ತಾಳೆ.

ಆಹಾ! ನಾಲ್ಕು ಗಂಟೆಗೆ ತಾವೆದ್ದ ತಕ್ಷಣ ಬಿಸಿ ಕಾಫಿ ಕುಡಿಯೋರು..... ಬೆಡ್ ಮೇಲೆ ಮಲಗಿಕೊಂಡು ೯ ಗಂಟೆ ಆಗ್ತಾ ಬಂತು.... ಕಾಫಿ ಇಲ್ಲವೆ? ಅಂದ್ರೆ.... ಆಗ ಅಜ್ಜಿ ಹೇಳ್ತಾಳೆ.... ತಾಳವ್ವ ಸ್ವಲ್ಪ ಕರ ಬಿಟ್ಕೋತ್ತೀನಿ..... ನಿನ್ನ ದಮ್ಮಯ್ಯ ಅಂತೀನಿ..... ಕಾಯಿಸಿ ಕೊಟ್ತೀನಿ.... ತಾತ ಬರ್ತಾನೆ ಸ್ವಲ್ಪ ಕಾಲೆತ್ತಮ್ಮ ಕಸ ಗುಡಿಸ್ಕೋತ್ತೀನಿ......

ಇಂತಹ ಅನೇಕ ಸಂಗತಿಗಳನ್ನು ಕಥಾ ಭಾಗದ ಮಧ್ಯೆ ಉಲ್ಲೇಖಿಸುತ್ತಾಳೆ. ಉದಾಹರಣೆಗಳು ಆಧುನಿಕ ಜಗತ್ತಿನದೇ ಆದರೂ ಅದರಲ್ಲಿ ನಿರೀಕ್ಷಿಸುವ ಆದರ್ಶ ಮೆಚ್ಚುವಂತಹದ್ದು. ದುಶ್ಚಟಗಳ ಬಗ್ಗೆಯೂ ಆಕೆ ವ್ಯಂಗೋಕ್ತಿ ನುಡಿಯುತ್ತಾಳೆ:

ಇವನೊಂದು ಪ್ಯಾಂಟ್ ತಗಲಾಕ್ಕೊಂಡು ಲುಂಗಿ ಹಾಕಿರೋನ್ನ ಒಬ್ಬನ್ನ ಜೊತೆಯಲ್ಲಿ ಕರಕೊಂಡು ದಮ್ಮು ಎಳೆಯೋದು..... ಸಿಗರೇಟು ಇವಾಗ ಸೇದಿದ್ರ ಸಿಗರೇಟೇ............ ದಮ್ಮು ಜಾಸ್ತಿಯಾಯ್ತು ಅಂದ್ರೆ ಸಿಗುರುಗೇಟು.... ಜೀವನಕ್ಕೆ ಹಾನಿ

ಎಂಬುದನ್ನು ಪ್ರಾಸಬದ್ಧವಾಗಿ ಹೇಳುತ್ತಾಳೆ. ಆಕೆ ಇಂಗ್ಲಿಷ್ ಭಾಷೆಯನ್ನು ಕಥಾ ಭಾಗದ ಮಧ್ಯೆ ಬಳಸುತ್ತಾಳೆ. ಯಾವ ಪ್ರೇಕ್ಷಕರಿರುತ್ತಾರೋ ಅವರ ಮನಸ್ಸನ್ನು ಸೆಳೆಯಲು ಪ್ರೇಕ್ಷಕರ ವಯೋಮಾನಕ್ಕೆ ಅನುಗುಣವಾಗಿ ಉಪಕಥೆಗಳನ್ನು ಹೆಣೆದು ಹಾಸ್ಯಮಯವಾಗಿ ಪ್ರಸ್ತುತ ಪಡಿಸುತ್ತಾಳೆ:

ಟೈಮು ಕೇಳಿದ್ರೆ ಒಬ್ಬೊಬ್ರು ಟೈಮ್ ಹೇಳ್ತಾರೆ ನೋಡಿ, ಸೆಟಕವಾಯು ಬಂದವರಂತೆ ಬಲ ಕೈಯನ್ನು ಎದೆ ಭಾಗದವರೆಗೆ ಎಳೆದು... ಮೂರು ಗಂಟೆ' ಎಂದೆನ್ನುತ್ತಾರೆ.

ಮುಂದುವರೆದು ಪ್ರಸ್ತುತ ಮಾನವೀಯ ಸಂಬಂಧಗಳನ್ನು ಪುರಾಣದ ಪಾತ್ರಗಳಿಗೆ ಹೋಲಿಸಿ ಸಂಬಂಧಗಳ ಅಧಃಪತನವನ್ನು ಬಿಂಬಿಸುತ್ತಾಳೆ.

.....ಇವಾಗಿನ ಗಂಡುಮಕ್ಕಳು ಹೆಂಗದ್ರೆ ಆಹಾ! ಮಾನಸ್ಥರಾದ ತಂದೆ ತಾಯಿಗೆ... ಮಾನ ಹೀನರಾದ ಮಕ್ಕಳು.... ಧರ್ಮಸಾಗರನಂಥ ಅಣ್ಣನಿಗೆ ಹಿರಣ್ಯಾಕ್ಷನಂಥ ತಮ್ಮ..... ಸಾಗರಪರಿಷೆ ಆಗಿನ ತಕ್ಕಂಥ ಅತ್ತೆಗೆ ಮಾರಿಯಂಥ ಸೊಸೆ.....

......ಒಳ್ಳೆಯವರಿಗೆ ಒಳ್ಳೆಯವರು ಸಿಕ್ಕಕ್ಕಿಲ್ಲ..... ಒಳ್ಳೆಯವರಿಗೆ ಒಳ್ಳೆಯವರು ಸಿಕ್ಕಿಬಿಟ್ರೆ..... ರಾಮರಾಜ್ಯ ಆಗೋಗುತ್ತೆ..... ಸಿಗಕ್ಕಿಲ್ಲ..... ಮಕ್ಕಳು ಕೆಟ್ಹೋಗ್ತಾರೆ ಅಂತಾ ಅಡತಡೆಯಿಲ್ಲದೆ ಸಂಪಾದನೆ ಮಾಡಿ ಬಚ್ಚಿಟ್ಟ ಹಣಕ್ಕೆ ತೆರಿಗೆದಾರರಾದ ಮಕ್ಕಳು..... ಹುಟ್ದ ಕೂಡಲೇ ಮಸಾಲೆ ದೋಸೆ ಶುರು..... ಅವರು ಬೆಣ್ಣೆ ದೋಸೆ ತಿಂದು ತೂರಾಡುತ್ತಾ ಇದ್ರೆ..... ಇಲ್ಲಿ ಕೂಡಾಕಿದೋರು ಗೊಣ್ಣೆ ಸುರುಸ್ತಾ ಗೋಳಾಡೋದು....... ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ತಂದೆ ತಾಯಿಗಳಿಗೆ ಊಟ ಹಾಕದೆ...... ಮೂರು ದಿನ ಆಯ್ತು ಕಣವ್ವ ನಾನು ಊಟ ಮಾಡಿ ನೋಡು ಮಗಾ ನನಗೆ..... ಕೂಡಿಟ್ಟವರಲ್ಲ ಮಗ... ಕೊಟ್ಹೋಗ್ತಾನೆ ಅಂತ..... ಇದು ತಂದೆ ತಾಯಿಗಳಿಗೆ ಮಕ್ಕಳು ಕೊಟ್ಟ ಬಹುಮಾನ.....

ಇನ್ನು ರಕ್ತ ಸಂಬಂಧದ ಬಗ್ಗೆ ಆಕೆಯ ಮಾತು ಇನ್ನು ಸೊಗಸಾಗಿದೆ:

ಮಗನನ್ನು ಕುರಿತು ತಾಯಿ ಹೇಳುತ್ತಾಳೆ 'ಮಗ ಅಕ್ಕನ ಮಗಳ್ನ ಮದ್ವೆ ಮಾಡ್ಕೊ..... ನಮ್ಮ ರಕ್ತ ಸಂಬಂಧ .... ಕಷ್ಟ ಸುಖ ನೋಡ್ತಾರೆ ಕಣೋ.....ಬೇರೆ ಹೆಣ್ಮಕ್ಕಳನ್ನ ತಂದ್ರೆ ನಮ್ಮನ್ನೆಲ್ಲಾ ನೋಡಾಂಗಿಲ್ಲ..... ನಿನ್ನ ಕರಕೊಂಡು ಪಿಚ್ಚರ್ ನೋಡಿಕೊಂಡು... ಅಲ್ಲೊಂದು ಮಸಾಲೆ ದೋಸೆ ತಿನಕೊಂಡು ಬಂದು ಮಲಗುತಾರೆ... ಅಡುಗೆ ಮಾಡಬೇಕಾಗುತ್ತೇ ಅಂತಾ.... ಇದು ಬೇಡ ಅಂತ ಹಂಗೇ ಮಾಡಿಕೊಳ್ಳಿರೋ ಅಂತ ತಾಯಿ ಅಂದ್ರೆ..... ತಾಯಿಗೆ ಮಗ ಹೇಳ್ತಾನೆ..... ಇಂಪಾಸಿಬಲ್..... ನಾನು ಬಿ.ಎ., ಓದಿದ್ದೀನಿ.... ನನಗೆ ಎಂ.ಎ., ಓದಿದವಳೇ ಬೇಕು.... ಎಂದು ಹಟಹಿಡಿದು ಮದುವೆಯಾಗ್ತಾನೆ..... ಮುಂದೆ ತಂದೆ ತಾಯಿ ಆಕೆಯ ಸೇವೆ ಮಾಡಿಕೊಂಡು ಬದಕ್ತಾರೆ.....

ಇಂತಹ ಲೋಕಪ್ರಿಯವಾದ ಘಟನೆಗಳನ್ನು ಉಲ್ಲೇಖಿಸುತ್ತಾ ಮುಖ್ಯಕಥೆಯನ್ನು ರಾಗಬದ್ಧವಾಗಿ ಹಾಡಲಾರಂಭಿಸುತ್ತಾಳೆ:

ನಲ್ಲತಂಗಿಯ ಕಥೆಯನ್ನು ಹೇಳುತ್ತಾ ಅದರಲ್ಲಿ ತಲ್ಲೀನಗೊಂಡು ಭಾವತೀವ್ರತೆಯಲ್ಲಿ ತನ್ನದೇ ಕಥೆಯನ್ನು ಆಕೆಯ ಕಥೆಯೊಂದಿಗೆ ಹೋಲಿಸಿ ಹಾಡತೊಡಗುತ್ತಾಳೆ, ಈ ಕಥೆಯಲ್ಲಿ ರಾಣಿ ಕುದುರೆಯ ಮೇಲೆ ಹೋಗುತ್ತಿರುತ್ತಾಳೆ. ಸಾಕಷ್ಟು ಹಾದಿ ಕ್ರಮಸಿರುತ್ತಾಳೆ. ಕುದುರೆ ದಿಢೀರ್ ಎಂದು ಒಂದು ನೆಗ್ತಾ ನೆಗೆದು ಮುಂದಕ್ಕೆ ಹೋಗುತ್ತದೆ..... ಎಂದು ಹೇಳುತ್ತಾ ಜಯಮ್ಮ ಕಥೆ ಶುರು ಮಾಡಿಕೊಂಡು..... ಕುದುರೆ ಗಾಡಿ ಪಲ್ಟಿ ಹೊಡೆದು ರಾಣಿ ಕೆಳಗೆ ಬೀಳುತ್ತಾಳೆ. ಕಾವಲಿಗೆ ಬಂದ ಸೈನಿಕರ ಪಡೆ ಕುದುರೆಯ ವೇಗಕ್ಕೆ ಹೆಜ್ಜೆ ಹಾಕಲಾರದೆ ಹಿಂದೆ ಬಿದ್ದಿದೆ. ರಾಣಿಯನ್ನು ಕಾಪಾಡಲು ಯಾರು ಇಲ್ಲ.....

ಎಂದು ಹೇಳುತ್ತಾ ಜಯಮ್ಮ ಸುಮಾರು ಮುವತ್ತು ನಿಮಿಷ ತನ್ನ ಬದುಕಿನ ಕಥೆಯನ್ನು ಹೇಳುತ್ತಾಳೆ. ನಾವು ಅಕ್ಷರಸ್ಥರು ಕಲೆಯನ್ನು ಬದುಕನ್ನು ಬೇರೆ ಬೇರೆ ಮಾಡಿ ನೋಡುತ್ತೇವೆ. ಆದರೆ ಕಲಾವಿದರಿಗೆ ಅವೆರಡೂ ಒಂದೇ. ಕಲೆ ಅವರ ಬದುಕಿನ ಭಾಗವೇ ಆಗಿರುತ್ತದೆ. ಇವರು ಕಲೆಯನ್ನು ಆ ರೀತಿಯಲ್ಲಿ ಬಳಸಿಕೊಂಡಿದ್ದಾರೆ, ದುಡಿಸಿಕೊಂಡಿದ್ದಾರೆ. ಅದಕ್ಕೆ ಅವರು ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

ತಮ್ಮ ಕಥೆಯನ್ನು ಹೇಳ್ತಾ ಹೇಳ್ತಾನೇ ಕಥೆಯ ಮುಖ್ಯವಾಹಿನಿಗೆ ಬಂದು ಕಥೆಯನ್ನು ಪುನಃ ಮುಂದುವರೆಸುವುದು ಕಥೆಯ ಕೇಳುಗರಿಗೆ ಇವರ ಕಥೆಯನ್ನು ಕೇಳ್ತಾ ಇದ್ದೇವೆಯೋ, ಮಹಾರಾಣಿಯ ಕಥೆಯನ್ನು ಕೇಳ್ತಾ ಇದ್ದೇವೆಯೋ ಎಂಬ ವ್ಯತ್ಯಾಸ ಗೊತ್ತಾಗಿರುವುದಿಲ್ಲ. ಆ ಸ್ಥಿತಿಯಲ್ಲಿ ಕಥೆಯನ್ನು ಬೆಳಸಿಕೊಂಡು ಹೋಗುವಂತಹ ಕಲೆಗಾರಿಕೆ ಈಕೆಗಿದೆ.

ವಿಶ್ವವಿದ್ಯಾಲಯ ಇಂತಹ ಕಲಾವಿದರೊಂದಿಗೆ ಸಂವಾದ ನಡೆಸುವ ಪ್ರಮುಖ ಉದ್ದೇಶವೇ ಕಲಾವಿದರ ಕಲಾಪರಿಶ್ರಮವನ್ನು ಅರ್ಥ ಮಾಡಿಕೊಳ್ಳುವುದು. ಜೊತೆಗೆ ಅವರ ಬದುಕಿನ ಸ್ಥಿತಿಯನ್ನು ಗಮನಿಸುವುದೇ ಆಗಿದೆ. ಕಲಾವಿದರ ವೇಷಭೂಷಣ, ಕಲೆಗಾರಿಕೆ, ವಿದ್ವತ್ ಅನ್ನು ಮೆಚ್ಚಿ ತಲೆದೂಗಿ ಸಂಭ್ರಮಿಸುತ್ತೇವೆ. ಅವರು ತುಂಬಾ ಸುಖವಾಗಿಯೇ ಇದ್ದಾರೆ ಎಂದು ಭಾವಿಸುತ್ತೇವೆ. ನಾವು ಗಂಭೀರವಾಗಿ ಗಮನಿಸಬೇಕಾದ ಅಂಶ ಅವರೂ ತುಂಬಾ ತೊಂದರೆಯಲ್ಲಿದ್ದಾರೆ ಎಂಬುದು. ಜಯಮ್ಮ ಮಾತನಾಡುವ ಸಂಗತಿಗಳು, ವೈರಾಗ್ಯ, ಹಣಕಾಸಿನ ಬಗೆಗಿನ ನಿರ್ಮೋಹ..... ಏನೇ ಹೇಳಿದರೂ..... ಕಡೆಗೆ ಕಾಡುವುದು ಹಸಿವು. ಹೊಟ್ಟೆಯ ಪಾಡಿಗೆ ಆಕೆ ಏನನ್ನಾದರು ಮಾಡಲೇಬೇಕು. ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿದಾಗ ಆಕೆ ನನಗೆ ಒಂದು ಕಾರ್ಯಕ್ರಮ ಸಿಕ್ಕಿತು ಎಂದು ಸಂತಸಪಟ್ಟ ಜಯಮ್ಮನಿಗೆ ನಿರಾಶೆ ಕಾದಿತ್ತು. ಏಕೆಂದರೆ ಇದು ಕಾರ್ಯಕ್ರಮವಾಗಿರಲಿಲ್ಲ, ಸಂವಾದ ಗೋಷ್ಠಿಯಾಗಿತ್ತು.

.....ಸಾರ್ವಜನಿಕರು ಇಷ್ಟೆಲ್ಲಾ ಮಾತನಾಡುವುದಕ್ಕೆ ಅವಕಾಶ ಕೊಟ್ರೆ.... ಒಂದು ಕಥೆನಾದ್ರು ಹಾಡೋಣಂದ್ರೆ... ಹಾಡೋಣಂದ್ರೆ..... ಮಟ್ಟುಗಳು ಹಾಕಬೇಕು..... ಅದಕ್ಕೆನಂದ್ರೆ.. ಏನು ಇಲ್ಲ..... ಚಪ್ಪಾಳೆ ಹಾಕಿಕೊಂಡು ಮಟ್ಟುಗಳು ಹಾಡೋಕ್ಕಾಗಲ್ಲ..... ಅಂದ್ರೆ, ಬಾಯಿ ಮಾತಿನಲ್ಲಿ ಹೇಳೋಣ ಅಂದ್ರೆ ಈ ಯಮ್ಮ ಒಂದು ಉಪಕಥೆ ಹೇಳ್ತಾಳೆ.... ಅಂದುಕೋತ್ತೀರಿ..... ಸಾಯ್ದೆ ಬದುಕಿದ್ರೆ.... ಈ ಸ್ಥಾನಕ್ಕೆ..... ಉಸಿರಿದ್ರೆ ನೀವು ಕರಿಸಿದ್ರೆ..... ನನ್ನ ತಂಡ ತಗೊಂಡು ಬಂದು ಬಂದು ಕಲೆ ಮಾಡೋಣ ಸಂತೋಷವಾಗಿ..... ಕಲೆಯೆಂದರೆ ನನಗಿವಾಗ ಹರೆಯದಲ್ಲಿ ಇದ್ದುದರ ಸಂತೋಷಕ್ಕಿಂತ ಹೆಚ್ಚಿನ ಸಂತೋಷ ಬರ್ತದೆ..... ಯಾಕೇ..... ನಾನು ಮುಕ್ತಾಯ ಆಗ್ತಾ ಬರ್ತಾ ಇದ್ದೀನಿ..... ಹಾಡಬೇಕು ಅನ್ನುವ ಆಸೆ ನನಗೆ ಕಲೇನೆ ನನ್ನ ಜೀವನ.

ಕಲೆಯೇ ಜೀವನ ಎಂದರೂ ಆಕೆಯ ಬದಕೇ ಇನ್ನೂ ಹಸನಾಗಿಲ್ಲ. ಆಕೆಗೆ ವಾಸಮಾಡಲು ಒಂದು ಮನೆಯಿಲ್ಲ. ಸರ್ಕಾರವಾಗಲಿ, ಸಂಘ ಸಂಸ್ಥೆಗಳಾಗಲಿ ಯಾವುದೇ ಆರ್ಥಿಕ ನೆರವು ಒದಗಿಸಿಲ್ಲ. ಸರ್ಕಾರದಿಂದ ಮಾಸಿಕ ಮಾಸಾಶನ ಮಾತ್ರ ಬರುತ್ತದೆ. ಆಕೆಯೇ ಹೇಳುವಂತೆ ಅದರಿಂದ ಜೀವನ ನಡೆಸಲು ಸಾಧ್ಯವಿಲ್ಲ.

ಬಹಳಷ್ಟು ಕಲಾವಿದರ ಬದುಕು ಹೀಗೆ ಆಗಿದೆ. ನಿಜವಾದ ಕಲೆ ಉಳಿಯುವುದು ನೋವಿನಲ್ಲಿ ಸಂತೃಪ್ತಿ ಇರುವಲ್ಲಿ ಕಲೆ ಉಳಿಯುವುದಿಲ್ಲ, ಉಳಿದರೂ ಬೆಳೆಯುವುದಿಲ್ಲ.

ಸಾರ್ವಜನಿಕ ಕಾರ್ಯಕ್ರಮಗಳು

ಜಯಮ್ಮ ಉದರ ಪೋಷಣೆಗಾಗಿ ತನ್ನೂರಿನ ಜಗಲಿಯಿಂದ ಕಥೆ ಹೇಳುವ, ಹಾಡುವ ಕಾಯಕವನ್ನು ಆರಂಭಿಸಿ ರಾಜಧಾನಿಯ ರವೀಂದ್ರ ಕಲಾ ಕ್ಷೇತ್ರದವರೆಗೆ ಸಾಗಿದ್ದಾಳೆ. ಜಾನಪದ ವಿದ್ವಾಂಸರ ಸಮ್ಮುಖದಲ್ಲಿ ಕಥೆ ಮಾಡಿ ಸೈ ಎನ್ನಿಸಿಕೊಂಡಿದ್ದಾಳೆ. ರವೀಂದ್ರ ಕಲಾ ಕ್ಷೇತ್ರದಲ್ಲಿ ಡಾ. ಎಚ್. ಎಲ್. ನಾಗೇಗೌಡರ ಸಮ್ಮುಖದಲ್ಲಿ ಮಾಡಿದ ಬುರ್ರಕಥೆಯ ಬಗ್ಗೆ ಆಕೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

> .....ನಮ್ಮಪ್ಪಾಜಿ ಪಾದಕ್ಕೆ ನಮಸ್ಕಾರ ಮಾಡಿಬಿಟ್ಟು ಶಾರದೆಯನ್ನು ಮೇಲೆತ್ತಿಕೊಂಡು ಎದ್ದೆ..... ಎಚ್.ಎಲ್. ನಾಗೇಂದ್ರಗೌಡ್ರು, ಎಲ್ಲಾ ಕುಂತಿದ್ರು........ ಮೂರು ಸಾರಿ ಬೆನ್ನು ತಟ್ಟಿದ್ರು ನಮ್ಮಪ್ಪಾಜೀ........ ಯಾಕಪ್ಪಾಜೀ ಅಂದೆ....... ನೋಡಮ್ಮ ಮಹಾಸಭೆ....... ಹೆದರಿಕೋಬೇಡ ಮಗಳೇ....... ನಾನಿದ್ದೀನಿ....... ನಮ್ಮಪ್ಪನ ಕಂಠ ಇಲ್ಲ....... ಅವರು ಹಾಡಿದ್ರೆ ಮೂರು ಮೈಲಿ ಕೇಳಿಸುತ್ತಿತ್ತು. ಅವರ ರಾಗ ಇವತ್ತಿಗೂ ಚನ್ನಪಟ್ನ ತಾಲೂಕಿನಲ್ಲಿ, ಮಳವಳ್ಳಿ ತಾಲೂಕಿನಲ್ಲಿ ಹೆಸರುವಾಸಿ....... ನನಗೂ ಅದೇ....... ನಾಟಕ ಕಲಿಯೋರೆಲ್ಲ ಬಾಡಿಗೆಗೆ ನನ್ನ ಕಂಠ ಕೇಳುತ್ತಿದ್ರು....... ಹತ್ತು ರಾತ್ರಿ ಗಣಪತಿ ಕಾರ್ಯಕ್ರಮದಲ್ಲಿ ನಾನು ಕಥೆ ಮಾಡಿಕೊಂಡು ಬಂದ್ರು ನನ್ನ ಕಂಠ ಕೆಡುತ್ತಿರಲಿಲ್ಲ....... ಈಗ ವಯಸ್ಸಾಯ್ತು ೭೫ ವರ್ಷ. ಇನ್ನು ಎಷ್ಟು ಹಾಡಬೇಕು....... ಹಾರ್ಮೋನಿಯಂ ಅಲ್ಲ ಇದು....... ಇದು ನಾದಕ್ಕೆ ಹುಟ್ಟಬೇಕಂದ್ರ ತಂತಿ ಸರಿ ಮಾಡಬೇಕು....... ಬಾರಿ ಕಷ್ಟ....... ಆ ತಾಯಿ ಬಂದು ಒಲಿದಾಳೆ ಅಂದ್ರ....... ಸ್ವಲ್ಪ ಸೌವಂಡ್ ಕಡಿಮೆ....... ಅಂದಮ್ಯಾಲೆ ಇನ್ನೂ ಕಥೆ ಮಾಡಿದ್ರೆ ಜಯಮ್ಮ ಮೂರು ಮೈಲಿಗೆ....... ಮೂರು ಮೈಲಿ ಆಚೆ ಇರುವ ಮತ್ತೊಂದು ಊರಿಗೆ ಕೇಳಿಸ್ತಾ ಇತ್ತು....... ನಾನು ಚಿಗಟಗೇರಿಯಲ್ಲಿ ಕಥೆ ಮಾಡಿದ್ರೆ ತಮ್ಮಸಂದ್ರದವರು ಕುಂತುಕೊಂಡು....... ಗದ್ದೆಗಳತ್ರ....... ನೀರುಕಟ್ಟೋಕೆ ಹೋದವರು....... ಕೇಳುಸ್ಕೋತಾ ಇದ್ರು.......

ತಾಳ ಮೇಳ ಸರಿಯಿಲ್ಲದೆ ಕಥೆಗಳನ್ನು ಬೆರಸಿಕೊಂಡು ಹಾಡುದ್ರೆ ಹೆಂಗಯ್ಯ ಸರಿಹೋಗುತ್ತೆ? ಎಂಬುದು ಸಭಿಕರನ್ನು ಪ್ರಶ್ನಿಸಿ ಮೂಲ ಮಟ್ಟಿನ ಬಗ್ಗೆ ಚರ್ಚಿಸುತ್ತಾಳೆ. ಅನೇಕ ಕಲಾವಿದರ ಅಭಿಪ್ರಾಯದಂತೆ ಮೂಲ ಮಟ್ಟಿನಲ್ಲಿ ಯಾವುದೇ ಕಲೆಯನ್ನು ಪ್ರದರ್ಶನ ಮಾಡಿದರೂ ಇಂದಿನ ಜನರ ಮನಸ್ಸನ್ನು ಸೆಳೆಯಲು ಸಾಧ್ಯವಿಲ್ಲ. ಆರ್ಕೆಸ್ಟ್ರಾ, ಕ್ಯಾಬರೆ, ಪಾಪ್ ಮುಂತಾದ ಅಬ್ಬರದ ಸಂಗೀತಗಳ ಮಧ್ಯ ಬುರ್ರಕಥೆಯಂತಹ ಕಲಾ ಪ್ರಕಾರಗಳು ಪೇಲವವಾಗುತ್ತವೆ. ಆ ಕಾರಣಕ್ಕಾಗಿ ಪ್ರಸ್ತುತ ಎಲ್ಲಾ ಜನಪದ ಕಲಾವಿದರು, ಅದರಲ್ಲೂ ಬದುಕಿಗಾಗಿ ಕಲೆಯನ್ನೆ ಅವಲಂಬಿಸಿರುವವರು ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಪ್ರಾಸಂಗಿಕವಾಗಿ ಸಿನಿಮಾ ಹಾಡುಗಳನ್ನು ಹಾಡುವುದು, ಆಧುನಿಕ ಜಗತ್ತಿನ ಘಟನೆಗಳನ್ನು ಹಾಸ್ಯ ಪ್ರಸಂಗಗಳಾಗಿ ಬಳಸಿಕೊಳ್ಳುವುದು ರೂಢಿಗೆ ಬಂದಿದೆ. ಕಲಾವಿದರು ಇಂದು ಹೆಚ್ಚು ಆಧುನಿಕವಾಗಿದ್ದಾರೆ. ಹೆಚ್ಚು ಮಾರಾಟಕ್ಕೆ ಒಳಗಾಗುವ ಪ್ರಕ್ರಿಯೆಗೆ ಅವರು ತೊಡಗಿಕೊಂಡಿದ್ದಾರೆ. ಬುರ್ರಕಥೆಯ ಮಾಧ್ಯಮವನ್ನು ಮುಂದಿಟ್ಟುಕೊಂಡು ಅದರ ಜೊತೆ ಹರಿಕಥೆಯನ್ನು ಬೆರಸಿಕೊಂಡು, ಜೊತೆಗೆ ಸಿನಿಮಾದ ಕೆಲವು ತುಣುಕುಗಳಣ್ನು ಬಳಸಿಕೊಂಡು ಹೆಚ್ಚು ಮನೋರಂಜಕವಾಗಿ ಪ್ರದರ್ಶನಕೊಟ್ಟರೆ ಮಾತ್ರ ಜನ ಸೇರುತ್ತಾರೆ ಎಂಬ ಅಂಶ ಕಲಾವಿದರ ಮನದಲ್ಲಿ ನೆಲೆಯೂರಿದೆ. ಹಾಗಾಗಿ ಮೂಲಮಟ್ಟು ಉಳಿದುಕೊಳ್ಳುವ ಸಾಧ್ಯತೆ ಕಡಿಮೆಯಾಗುತ್ತಾ ಬರುತ್ತಿದೆ. ಕೃಷಿ ಚಟುವಟಿಕೆಗಳನ್ನು ಆಧರಿಸಿ ಹುಟ್ಟಿಕೊಂಡಿರುವ ಬಿತ್ತುವ ಪದಗಳು, ನಾಟಿಪದಗಳು, ಕುಟ್ಟುವ ಪದಗಳು, ಹಂತಿ ಪದಗಳು, ಬೀಸೋ ಪದಗಳು ಇವೆಲ್ಲಾ ಇಂದು ಕಣ್ಮರೆಯಾಗುತ್ತಿವೆ. ಇಂತಹ ಹಾಡುಗಳನ್ನು ಸಂರಕ್ಷಿಸಲು ಸಾಧ್ಯವೇ ಹೊರತು, ಆ ಪರಂಪರೆಯನ್ನು ಮುಂದುವರಿಸಲು ಸಾಧ್ಯವಿಲ್ಲ. ಏಕೆಂದರೆ ಕೃಷಿ ಚಟುವಟಿಕೆಗಳನ್ನು ಆಧರಿಸಿ ಹುಟ್ಟಿಕೊಂಡ ಈ ಕಲೆಗಳು ಮುಂದುವರಿಯಲು ಯಾವುದೇ ಅವಕಾಶಗಳಿಲ್ಲ. ಇಡೀ ರಾತ್ರಿ ರಾಗಿಯನ್ನು ಬೀಸುತ್ತಾ ಹಾಡುತ್ತಿದ್ದ ಹಾಡನ್ನು ಹಿಟ್ಟಿನ ಗಿರಣಿ ಅಂಗಡಿಯಲ್ಲಿ ಹಾಡಲು ಸಾಧ್ಯವಿಲ್ಲ. ಇಡೀ ರಾತ್ರಿ ಬೀಸುತ್ತಿದ್ದ ರಾಗಿಯನ್ನು ಗಿರಣಿ ಹತ್ತೇ ನಿಮಿಷಕ್ಕೆ ಬೀಸಿ ಎಸೆಯುತ್ತದೆ. ಬಿತ್ತುವಾಗ, ನಾಟಿ ಮಾಡುವಾಗ, ಹೊಲ ಗದ್ದೆ ಹದಮಾಡುವಾಗ ಹಾಡುತ್ತಿದ್ದ ಹಾಡುಗಳ ಜಾಗದಲ್ಲಿ ಟ್ರಾಕ್ಟರ್ಸ್‌ನ ಕೂಗುಮಾರಿಯಲ್ಲಿ ಅಹ್... ಅಂಟೆ... ಅಮಲಾಪುರಂ ಎಂಬ ತೆಲುಗು ಹಾಡು ಕಿರುಚುತ್ತಿರುತ್ತದೆ. ಅವರು ಜಾನಪದ ಗೀತೆಯನ್ನು ಹಾಡಲು ಸಾಧ್ಯವೆ? ವಿರಳವಾಗಿರುವ ಜಾನಪದ ಕಲಾವಿದರಿಂದ ಹಾಡುಗಳನ್ನು, ವಿವಿಧ ಕಲಾಪ್ರಕಾರಗಳನ್ನು ಡಿ.ವಿ.ಡಿ.ಗಳಲ್ಲಿ ದಾಖಲಿಸಿದರೆ ಕಲೆ ಉಳಿಯುತ್ತದೆಯೇ? ಇದು ಚರ್ಚೆಗೆ ಒಳಪಡಬೇಕಾದ ವಿಷಯ.

ಜಯಮ್ಮ ಸುಶ್ರಾವ್ಯವಾಗಿ ಹಾಡಿ ವಿವರಿಸುವ ಒಂದು ಬಹು ಮುಖ್ಯ ಕಥೆಯ ಸಾಲುಗಳು ಹಾಗೂ ಸಾರವನ್ನು ಇಲ್ಲಿ ನೀಡಲು ಪ್ರಯತ್ನಿಸಿದ್ದೇನೆ. ಇದೇ ಕಥೆಯನ್ನು ಆಕೆ ವಿಸ್ತರಿಸಿ ಎರಡು ರಾತ್ರಿ ಒಂದು ಹಗಲು ಹಾಡಬಲ್ಲಳು. ಆದರೆ ಇಂದು ಅದನ್ನು ಅಷ್ಟೊಂದು ತಾಳ್ಮೆಯಿಂದ ಕೇಳುವ ಶ್ರೋತೃಗಳೆಲ್ಲಿ? ಈಕೆಯ ಕಥೆಯನ್ನು ಕೇಳಲೇಬೇಕು ಎಂದೆನ್ನುವವರು ಹಳೇ ಕಾಲದವರು ನಿದ್ದೆಗೆಟ್ಟು ಜಗಲಿಯ ಮೇಲೋ, ಹಜಾರದಲ್ಲೊ ಕಥೆಕೇಳುತ್ತಿದ್ದರೆ, ಇಂದಿನ ಯುವಜನಾಂಗ ಅದರ ಯಾವ ಪರಿವೆಯೇ ಇಲ್ಲದೆ ಟಿ. ವಿ. ಯ ಜನಪ್ರಿಯ ಧಾರಾವಾಹಿಗಳಲ್ಲಿ, ರಿಯಾಲಿಟಿ ಷೋಗಳಲ್ಲಿ ಮಗ್ನರಾಗಿರುತ್ತಾರೆ, ತಮ್ಮ ಹಿರಿಯರಿಗೆ ಬುದ್ಧಿಯಿಲ್ಲ, ಕೆಲಸಕ್ಕೆ ಬಾರದ ಕಥೆ ಕೇಳುತ್ತಿದ್ದಾರೆ ಎಂದು ಭಾವಿಸುತ್ತಾರೆ.

ಬಾಲನಾಗಮ್ಮನ ಕಾವ್ಯ

ಭೂಚಕ್ರ ಪಟ್ಟಣದ ನವಭೋಜರಾಜನು ತಂದನತಾನ
ಆಗ ನವಭೋಜರಾಜನ ಮಡದಿ ಭೂಲಕ್ಷ್ಮಿದೇವಿ ತಂದನ್ನತಾನ
ಭೂಲಕ್ಷ್ಮಿದೇವಿಗೆ ಮಕ್ಕಳ ಸಂತಾನವಿಲ್ಲ
ಹುಟ್ಟುಬಂಜೆ ನಾವೀಗ ಆದೆವು ಶಿವನೆ
ಅಯ್ಯ ಅಕ್ಕಪಕ್ಕದ ರಾಣಿರು ಬಂಜೆರಾಣಿ ಅನ್ನುತಾರೆ
ಆಗ ನವಭೋಜರಾಜನು ಏನೆಂದು ಹೇಳುತಾನೆ
ಕೇಳು ಕೇಳೆ ಪ್ರಾಣಕಾಂತೆ ಹೇಳುವಂಥ ಮಾತನ್ನು
ಬಾಲೆ ಹಡೆದ ಮಕ್ಕಳು ಇಲ್ಲ ದುಡಿದ ಬಂಗಾರವಿಲ್ಲ
ಬಾಲೆ ಯಾವದೇವರ ಹೊಕ್ಕು ಪುತ್ರಭಾಗ್ಯ ನಮಗಿಲ್ಲ
ಮಕ್ಕಳೆ ಇಲ್ಲವೆಂದು ಧರಣಿದುಃಖ ಮಾಡುತಾಳೆ
ಮದುವೆಯಾಗಿ ನಮಗೀಗ ಮುವತ್ತಾರು ವರುಷ
ಪುತ್ರಸಂತಾನ ನಮಗಿಲ್ಲ ಅಂತ ದುಃಖ ಮಾಡುತಾಳೆ
ಗಂಡನಾದ ನವಭೋಜ ಬೇಂಟೆಗೆ ಹೊರಟಾನು
ಮಡದಿ ಭೂಲಕ್ಷ್ಮಿದೇವಿ ಏನು ಯೋಚನೆ ಮಾಡುತಾಳೆ
ನಾ ಎಲ್ಲಾದರು ಹೋಗಬೇಕು ಪ್ರಾಣಹತ್ಯ ಮಾಡಬೇಕು
ಅಯ್ಯ ಗಂಡನಿಲ್ಲದ ವೇಳೇಲಿ ಮನೆಮಠಬಿಟ್ಟಳು
ಕಾಡುಮಾರ್ಗ ಹಿಡುಕೊಂಡು ಹೊರಟವಳೆ ಭೂಲಕ್ಷ್ಮಿ
ಅಯ್ಯ ಹೋಗುವಂಥ ದಾರೀಲಿ ಋಷಿಯ ಆಶ್ರಮವೈತೆ
ಹೋಗುತಾಳೆ ಭೂಲಕ್ಷ್ಮಿ ಋಷಿಯ ಆಶ್ರಮವೈತೆ
ಕಣ್ಣನಾದರೆ ಮುಚ್ಚಿಕೊಂಡು ದೇವರ ಧ್ಯಾನದಲಿ
ಕುಳಿತರೆ ಋಷಿಗಳ ಕಂಡಳುರಾಣಿ
ಅಡ್ಡಬಿದ್ದು ಬೇಡುತಾಳೆ ಕಣ್ವಋಷಿಯ ತಾನು
ಆಗ ಕಣ್ಣುಬಿಟ್ಟು ನೋಡಿದ ಸಾಧು ಕಣ್ವಋಷಿ
ಅಮ್ಮ ನೀನ್ಯಾರು ಇಲ್ಲಿಗ್ಯಾಕೆ ಬಂದೆ ಹೇಳಮ್ಮ
ಸ್ವಾಮಿ ಭೂಚಕ್ರ ಪಟ್ಟಣದ ನವಭೋಜರಾಜನ
ಮಡದಿ ಭೂಲಕ್ಷ್ಮಿದೇವಿ ಎಂದು ಕರೆಯುತಾರೆ
ಆಗಂದು ಭೂಲಕ್ಷ್ಮಿದೇವಿ ದುಃಖ ಮಾಡುತಾಳೆ
ಅಮ್ಮ ಮಕ್ಕಳಿಲ್ಲವೆಂದು ದುಃಖನಾದರೆ ಮಡಬೇಡ
ಗಂಡು ಸಂತಾನವಿಲ್ಲ ಹೆಣ್ಣು ಮಕ್ಕಳಾಗುತಾವೆ ಅಮ್ಮ
ಹೆಣ್ಣು ಮಕ್ಕಳಾಗುತಾವೆ ಎಂಬ ಮಾತು ಕೇಳುತಾಳೆ
ಸ್ವಾಮಿ ಹೆಣ್ಣಾದರು ಆಗಲಿ ಗಂಡಾದರು ಆಗಲಿ
ಸ್ವಾಮಿ ಬಂಜೆಯೆಂಬೊ ಶಬ್ದನಾದರೆ ಹೋದರೆ ಸಾಕೆಂದಳು
ಅಯ್ಯ ಸಂತೋಷದಿಂದಲಿ ಕುಣಿತಾಳೆ ಮಾರಾಣಿ

ಆಗ ನೋಡುತಾನೆ ಕಣ್ವಋಷಿ ಸಂತೋಷದಿಂದಲಿ
ಅಮ್ಮ ಇಲ್ಲಿಗೆ ಗಾವುದ ದೂರದಲ್ಲಿ ನಾಗರಾಜನ ಮಾವಿನ ತೋಪು
ಮಧ್ಯಾನ್ಹ ಹನ್ನೆರಡು ಗಂಟೇಲಿ ನಾಗರಾಜ
ಇಲ್ಲದಿರೋ ವೇಳೆಯಲ್ಲಿ ಮಾವಿನಹಣ್ಣ ತಂದರೆ
ಅಮ್ಮ ಪುತ್ರ ಭಾಗ್ಯವಾಗುತದೆ ಬಂಜೆತನ ಹೋಗುತದೆ
ಅಂತಪ್ಪ ಮಾತಕೇಳಿ ಮಹಾರಾಣಿ ಭೂಲಕ್ಷ್ಮಿದೇವಿ
ಓಡಿಓಡಿ ಹೋಗುತಾಳೆ ನಾಗರಾಜನ ಮಾವಿನತೋಪಿಗೆ
ನಾಗರಾಜನ ಸುಳಿವೆಯಿಲ್ಲ ತೋಟಕ್ಕಾದರೆ ಹೋಗುತಾಳೆ
ಅಯ್ಯ ಕಾವಲುಗಾರರಿಲ್ಲದ ತೋಟಕೋಗಿ ಹಣ್ಣನು ನೋಡಿದಳು
ಹಣ್ಣ ನೋಡಿ ಬಲು ಆಸೆ ಬರುತೈತೆ ಭೂಲಕ್ಷ್ಮಿದೇವಿಗೆ
ಉಟ್ಟ ಸೀರೆ ಅರ್ಧ ಹರಿದು ಜೋಳಿಗೆನಾದರು ಕಟ್ಟುತಾಳೆ
ಗಿಡಕೊಂದು ಮಾವಿನಹಣ್ಣ ಬಿಡಿಸುತಾಳೆ ಭೂಲಕ್ಷ್ಮಿ
ಅಲ್ಲಿಗೆ ನಾಗರಾಜನ ಅವದಿ ತಾ ಮುಗಿಯುತ ಬಂತು
ಹಣ್ಣನೆಲ್ಲ ಕುಯ್ಕೊಂಡು ಜೋಳಿಗೆಯ ತುಂಬಿಕೊಂಡು
ಹಿಂದುರಿಗಿ ಹೊರಟಾಳೆ ಮಹಾರಾಣಿ ಭೂಲಕ್ಷ್ಮಿದೇವಿ

ಹೊಳೆ ಬಾಕಲಿಗೆ ಬಂದಾಳೆ ದೊಡ್ಡದೊಂದು ಹುತ್ತವಾಯ್ತು
ಹುತ್ತದ ಮೇಲ್ಭಾಗದಲ್ಲಿ ಮಾವಿನಹಣ್ಣು ತೂಗುತೈತೆ
ಎಷ್ಟೋ ಹಣ್ಣ ಕುಯ್ದುಕೊಂಡೆ ಈ ಹಣ್ಣು ಇರಲೇ ಇಲ್ಲ
ತಲೆಯಮೇಗಲ ಗಂಟನೀಗ ನೆಲಕಾದರೆ ಇಡುತಾಳೆ
ಹುತ್ತದ ಮೇಲೆ ಹತ್ತಿದಾಳು ಮಾವಿನ ಹಣ್ಣ ಕೀಳುತಾಳೆ
ಅಯ್ಯ ಹುತ್ತದಿಂದ ಇಳಿಯುವಾಗ ಏಳು ಹೆಡೆ ಸರ್ಪ ಬಂತು
ಏಳು ಹೆಡೆಯ ಸರ್ಪ ಆದರೆ ಪ್ರತ್ಯಕ್ಷವಾಗಿ ನಿಂತಿರುವುದು
– –
– –
ಅಷ್ಟು ದಿನದಿಂದ ಕಲ್ಲಾಗಿದ್ದ ರಾಜರೆಲ್ಲ ಎದ್ದರು
ದಂಡುದಾಳಿ ಎಲ್ಲವು ಎದ್ದಿತು ಅರಗಳಿಗೇಲಿ
ಗಿಳಿಯನಾದರೆ ಎರಡೇ ತುಂಡಿಗಾದರೆ ಕತ್ತರಿಸಿ
ಮಾಯಮರಾಟಿಯ ಕೊಂದನು ತಾಯನಾದರೆ ಬಿಡಿಸಿದ
ತನ್ನ ತಾಯಿಯ ಕರಕೊಂಡ ದಂಡುದಾಳಿ ಕರಕೊಂಡ
ಪುನ್ನಾಟ ಗುಡ್ಡವನೆಲ್ಲ ಗಂಗಮ್ಮನಿಗೆ ಬಿಟ್ಟುಕೊಟ್ಟ
ದಂಡುದಾಳಿ ಕಟ್ಟಿಕೊಂಡು ತನ್ನ ಮಡದಿ ಕರಕೊಂಡ
ಎಲ್ಲರ ಜೊತೆಯಲಿ ಕರಕೊಂಡು ತನ್ನ ಪಟ್ಟಣ ಸೇರಿದನು
ತಂದೆ ದೊಡ್ಡಪ್ಪದೀರು ಮಗನಿಗೆ ಮದುವೆ ಮಡುತಾರೆ

ಗಂಧದ ಸೌದೆ ತರಿಸಿದ ಅರಮನೆ ಮುಂದೆ ಹಾಕಿಸಿದ
ಬಾಲನಾಗಮ್ಮ ಶಿವಶರಣೆ ಆವಾಗೇನ ಮಾಡಿದಳು
ಮಲ್ಲಿಗೆ ಮೊಗ್ಗಿನ ಹಾರವ ಕೊರಳಿಗಾದರು ಹಾಕಿದಳು
ಸುತ್ತ ಸೇರಿದ ಪ್ರಜೆಗಳಿಗೆ ಶರಣನಾದರೆ ಮಾಡಿದಳು
ಅಗ್ನಿಗಾದರೆ ಧುಮುಕಿದಳು ಪಾರ್ವತಿ ಪರಮೇಶ್ವರನು
ಅಯ್ಯ ಪಾರ್ವತಿ ಪರಮೇಶರು ಪ್ರತ್ಯಕ್ಷವಾದರು

ಉರಿಯೊ ಬೆಂಕಿಯು ಆಗ ತಣ್ಣಗೆ ಆಯಿತಲ್ಲ
ಮುಡಿದ ಮಲ್ಲಿಗೆ ಮೊಗ್ಗು ಅರಳಿನಿಂತವು ಆಗ
ಪಾರ್ವತಿ ಪರಮೇಶ್ವರರು ಸೇರಿ ಬಾಲನಾಗಮ್ಮನಿಗೆ
ಕಾರುವರ್ಧನ ರಾಜನಿಗೆ ಶಿವಶರಣೆ ಬಾಲನಾಗಿಗೆ
ಮತ್ತೆ ಮದುವೆಯ ಮಾಡಿದರಲ್ಲಿ ಆಗ ಎಲ್ಲ ಸೇರಿಕೊಂಡು
ಎಲ್ಲರು ಸುಖವಾಗಿ ಇರುತಾರೆ ಪಟ್ಟಣದಲ್ಲಿ
ಎಂತೆಂಬೊ ಬಾಲನಾಗಮ್ಮನ ಕತೆಯಾದರೆ ಇಲ್ಲಿಗೆ
ಅಂಕಿತವು ಶಿವಶಿವ ತಂದನ್ನ ತಾನ

ಮಂಗಳ

ಮಂಗಳವಾಗಿದೆ ಜಯ ಜಯ ಮಂಗಳವಾಗಿದೆ
ಕಂಗಳ ಕೊನೆಯಲಿ ತಳ ತಳ ಹೊಳೆಯುತ
ತಿಂಗಳ ಬೆಳಕಿನ ತಿಳಿರಸ ಉಕ್ಕುತ
ಗುರು ಮಹಾಲಿಂಗನ ತೇಜವು
ಮಂಗಳವಾಗಿದೆ ಜಯ ಜಯ ಮಂಗಳವಾಗಿದೆ

ಬಾಲನಾಗಮ್ಮ

ಬಾಲನಾಗಮ್ಮನ ಕಥೆಯ ಮೂರು ಪಾಠಗಳು ಈವರೆಗೆ ಲಭ್ಯವಾಗಿವೆ. ಮೊದಲನೆಯದು ನೀಲಗಾರ ಸಂಪ್ರದಾಯದ 'ಬಾಲನಾಗಿ ಕಥೆ'. ಉಳಿದ ಎರಡು ಪಾಠಗಳು ನಾಗಮಂಗಲ ತಾಲ್ಲೂಕಿನ ಬೇರೆ ಬೇರೆ ಕಡೆಗಳಲ್ಲಿ ದೊರೆತವು. ಕರಾಕೃ ಅವರು ಪ್ರಕಟಿಸಿರುವ ಜನಪದ ಕಥನಗೀತೆಗಳು ಸಂಕಲನದಲ್ಲಿ ಪ್ರಕಟವಾಗಿರುವ 'ನಾಗರಗನ್ನೆ' ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿ ಕ್ಯಾತನಹಳ್ಳಿಯ ಹರಿಜನಸ್ತ್ರೀಯರಿಂದ ಸಂಗ್ರಹಿತವಾದುದು. ಇದೇ ಶೀರ್ಷಿಕೆಯಲ್ಲಿ ಬಾಲನಾಗಮ್ಮನ ಕಥೆಯನ್ನು ಎಚ್.ಎಲ್. ನಾಗೇಗೌಡರು ಬೆಳ್ಳೂರು ಸಮೀಪದ ಹೆರಗನಹಳ್ಳಿಯ ಸೋಬಾನೆ ಚಿಕ್ಕಮ್ಮನಿಂದ ಸಂಗ್ರಹಿಸಿ ತಮ್ಮ 'ಸೋಬಾನೆ ಚಿಕ್ಕಮ್ಮನ ಪದಗಳು' ಸಂಕಲನದಲ್ಲಿ ಪ್ರಕಟಿಸಿದ್ದಾರೆ.

ಕಥೆಯ ಸಾರಾಂಶ

ಬಾಲನಾಗಮ್ಮನ ತಂದೆ ನಾಗರಾಜ, ತಾಯಿ ಋತುಮತಿದೇವಿ. ಮಕ್ಕಳಿಲ್ಲದ ಋತುಮತಿದೇವಿ ಮನೆ ದೇವರಾದ ನಾಗರಾಜನನ್ನು ಕುರಿತು ತಪಸ್ಸು ಮಾಡಿ ಮಕ್ಕಳ ವರವನ್ನು ಪಡೆಯುತ್ತಾಳೆ. ಸಿಂಹಪರ್ವತದಿಂದ ಮರಳುವಾಗ ಅವಳು ಹಿಂದಿರುಗಿ ನೋಡದಂತೆ ನಾಗರಾಜ ಎಚ್ಚರಿಸಿದ್ದರೂ ಬೆಟ್ಟಕ್ಕೆ 'ಬೇಗೆ'ಬಿದ್ದಾಗ ನೋಡಿಬಿಡುತ್ತಾಳೆ. ಮುನಿದ ನಾಗರಾಜ "ನಿನಗೆ ಏಳು ಹೆಣ್ಣು ಮಕ್ಕಳಾಗಲಿ, ಮಕ್ಕಳು ಹುಟ್ಟಿದ ಮೂರು ವರ್ಷಕ್ಕೆ ನಿನಗೆ ಹಾವು ಕಡಿಯಲಿ" ಎಂದು ಶಾಪಕೊಡುತ್ತಾನೆ.

ಮಕ್ಕಳು ಹುಟ್ಟಿದ ಮೇಲೆ ಋತುಮತಿದೇವಿಗೆ ಒಂದು ದಿನ ಜೋಪಡಿಯಿಂದ ತಲೆಯ ಮೇಲೆ ಬಿದ್ದ ಹಾವಿನಿಂದ ಮರಣ ಎಂದು ಜೋಯಿಸರು ಹೇಳುತ್ತಾರೆ. ಅವಳನ್ನು ಎಷ್ಟೇ ಸುರಕ್ಷಿತ ನೆಲೆಯಲ್ಲಿಟ್ಟರೂ ಮಾಯದ ಹಾವು ಬಂದು ಅವಳನ್ನು ಕಚ್ಚುತ್ತದೆ. ತಾಯಿ ತೀರಿಕೊಂಡಳು. ತಂದೆಯ ಆಶ್ರಯದಲ್ಲೇ ಏಳು ಮಂದಿ ಅಕ್ಕತಂಗಿಯರು ಬೆಳೆದು ತಾರುಣ್ಯವನ್ನು ಎಟುಕಿಸಿಕೊಂಡರು ಯಾವ ಪರರಾಜರೂ ಬಂದು ಅವರ ಕೈ ಹಿಡಿಯಲಿಲ್ಲ. ಪಟ್ಟೆ ಮಂಚದ ಮೇಲೆ 'ಅಶ್' ಎಂದು ನಿಟ್ಟುಸಿರುಬಿಟ್ಟು ಅವರು ಮಲಗಿದರು. ಅವರ ಗೋಳು ಕೋಟೆಗೆ ತಗುಲಿ ಅದು ಕುಸಿಯಿತು. ನಾಗರಾಜನ ದಂಡೆಲ್ಲ ಮಡಿಯತೊಡಗಿತು. ಪಟ್ಟಣವೇ ನಾಶವಾಗುವ ಸ್ಥಿತಿ ಬಂದಿತು. ಮಕ್ಕಳನ್ನು ಕಣ್ಣುಕಟ್ಟಿ ಕಾಡಿಗೆ ಬಿಟ್ಟರೆ ಪಟ್ಟಣ ಉಳಿಯುವುದೆಂದು ಜೋಯಿಸರು ನುಡಿಯುತ್ತಾರೆ. ರಾಜ ಮಕ್ಕಳನ್ನು ಕಾಡಿಗೆ

ಬಿಡಬೇಕಾಯಿತು. ಇನ್ನೇನು ತಮ್ಮ ಪಟ್ಟಣ ಮರೆಯಾಯಿತು ಎನ್ನುವಾಗ ಬಾಲನಾಗಮ್ಮ ಕಣ್ಣಿನ ವಸ್ತ್ರವನ್ನು ಬಿಚ್ಚಿ ತಂದೆಯ ಪಟ್ಟಣವನ್ನು ನೋಡಿದಳು. ಅದು ಕೂಡಲೇ ಅಗ್ನಿಗೆ ಆಹುತಿಯಾಗುತ್ತದೆ. ತಂದೆಗೆ ಕೋಪ ಬಂದು ಮಕ್ಕಳಿಗೆ ಶಾಪಕೊಡುತ್ತಾನೆ.

ನಿಮ್ಮ ಉಟ್ಟಿದ ಸೀರೆ ಮಾಯವಾಗಲಮ್ಮ
ನಿಮ್ಮ ತೊಟ್ಟಿದ ಕುಬುಸ ಮಾಯವಾಗಲಮ್ಮ
ಮೂಗಳ ಮುತ್ತು ನಾಗಳ ರತ್ನ ಮಾಯವಾಗಲಮ್ಮ

ತಂದೆಯ ಶಾಪದಂತೆ “ಅವರು ಹುಟ್ಟಿದ ನಿರ್ವಾಣದಲ್ಲಿ ಉಣ್ಣಲು ಅನ್ನವಿಲ್ಲದೆ, ತೊಡಲು ವಸ್ತ್ರವಿಲ್ಲದೆ ಗೆಡ್ಡೆಗೆಣಸು ತಿಂದುಕೊಂಡು ಬಿದರ ಹಿಂಡಲಲ್ಲಿ ಇರುತ್ತಾರೆ. ಪಾನಗಲ್ಲ ಪಟ್ಟಣದ ಏಳು ಮಂದಿ ರಾಜಕುಮಾರರು ಬೇಟೆಗೆ ಬಂದು ಅವರನ್ನು ಗುರುತಿಸಿ ಕರೆದೊಯ್ದು ಲಗ್ನಮಾಡಿಕೊಳ್ಳುತ್ತಾರೆ.

ಕೊನೆಯ ರಾಜಕುಮಾರಿ ಬಾಲನಾಗಮ್ಮನಿಗೆ ಮಾತ್ರ ನಾಗೇಂದ್ರನ ವರದಿಂದಲೇ ಒಂದು ಗಂಡುಮಗುವಾಗುತ್ತದೆ. ಆ ಗಂಡುಮಗುವಿಗೆ ನಾಮಕರಣ ಮಾಡಲು ತಳವಾರ ರಾಮಣ್ಣನಿಗೆ ತಿಳಿಸಿದಾಗ, ಅವನು ರಾಜಕುಮಾರರ ದೊಡ್ಡಪ್ಪ ಸಿದ್ಧರಾಜ ಪಟ್ಟಣದ ಸಿದ್ಧರಾಜನಿಂದ 'ದೇವರ ಪೆಟ್ಟಿಗೆ' ಯನ್ನು ತಂದಲ್ಲದೆ ನಾಮಕರಣ ಮಾಡಲು ಸಾಧ್ಯವಿಲ್ಲವೆಂದು ತಿಳಿಸುತ್ತಾನೆ, ದೇವರ ಪೆಟ್ಟಿಗೆಯನ್ನು ತರಲು ಹೋಗಿ ತಳವಾರ ರಾಮಣ್ಣ ಸಿದ್ಧರಾಜನಿಂದ ಪೆಟ್ಟು ತಿಂದು ಅವಮಾನಿತನಾಗಿ ಬರುತ್ತಾನೆ. ಅದೇ ಕಾರಣದಿಂದಾಗಿ ಪಾನಗಲ್ಲ ಪಟ್ಟಣದ ರಾಜರು ತಳವಾರ ರಾಮಣ್ಣನನ್ನು ತಮ್ಮ ಪಟ್ಟಣಕ್ಕೆ ಕಾವಲು ಇಟ್ಟು ಸಿದ್ಧರಾಜನ ಮೇಲೆ ದಂಡೆತ್ತಿ ಹೋಗುತ್ತಾರೆ.

ಬಾಣಂತಿಯಾದ ಬಾಲನಾಗಮ್ಮನನ್ನು ಮಂತ್ರವಾದಿ ಯೊಬ್ಬ ಮಾರುವೇಷದಲ್ಲಿ ಬಂದು, ಭಿಕ್ಷೆಯನ್ನು ಬೇಡುವ ನೆಪದಲ್ಲಿ ಬಾಗಿಲಿಂದ ಹೊರಗೆ ಬರಮಾಡಿಕೊಂಡು ಜೂಲುನಾಯಿ ಮಾಡಿಕೊಂಡು ಕರೆದುಕೊಂಡು ಹೋಗುತ್ತಾನೆ. ಏಳು ದಿನದ ಮಗು ತೊಟ್ಟಿಲಲ್ಲೇ ಉಳಿಯುತ್ತದೆ. ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋದ ಮಂತ್ರವಾದಿ ಮತ್ತೆ ಬಾಲನಾಗಮ್ಮನ ನಿಜರೂಪವನ್ನು ಪಡೆದು ಮದುವೆಯಾಗುವಂತೆ ಒತ್ತಾಯ ಪಡಿಸುತ್ತಾನೆ. ಗೌರಿಯ ವ್ರತವನ್ನು ಆಚರಿಸುತ್ತಿರುವುದಾಗಿ ಹೇಳಿ ಬಾಲನಾಗಮ್ಮ ಹನ್ನೆರಡು ವರ್ಷ ಅವಕಾಶವನ್ನು ಪಡೆದು ಕೊಳ್ಳುತ್ತಾಳೆ.

ಇತ್ತ ಯುದ್ಧಕ್ಕೆ ಹೋಗಿದ್ದ ಏಳು ಮಂದಿ ರಾಜರು ತಮ್ಮ ಪಟ್ಟಣಕ್ಕೆ ಬಂದಾಗ ವಿಷಯ ತಿಳಿಯುತ್ತದೆ. ಕುದುರೆ ಹತ್ತಿ ಮಂತ್ರವಾದಿಯ ಪಟ್ಟಣಕ್ಕೆ ಹೋಗುತ್ತಾರೆ. ಆದರೆ ಮಂತ್ರವಾದಿ ಅವರನ್ನು ಕಲ್ಲುಮಾಡಿ ನಿಲ್ಲಿಸುತ್ತಾನೆ.

ಬಾಲನಾಗಮ್ಮನ ಮಗ ರಾಮಣ್ಣ ಅಜ್ಜಿಯ ಹಾರೈಕೆಯಲ್ಲಿ ಬೆಳೆಯುತ್ತಿರುತ್ತಾನೆ. ಹುಡುಗರೊಡನೆ ಆಡುವಾಗ ತಾಯಿ ಮಂತ್ರವಾದಿಯ ಜೊತೆ ಹೋದದ್ದನ್ನೂ, ಅವನ ಏಳು ಮಂದಿ ತಂದೆಯರೂ ಮಂತ್ರವಾದಿಯ ಪಟ್ಟಣದಲ್ಲಿ ಕಲ್ಲಾಗಿ ನಿಂತುದನ್ನೂ ಎತ್ತಿ ಆಡಿ ಅಣಕಿಸುತ್ತಾರೆ. ರಾಮಣ್ಣ ಅಳುತ್ತ ಅಜ್ಜಿಯ ಬಳಿಗೆ ಬಂದು ಅಪ್ಪಣೆಪಡೆದು ತಾಯಿಯನ್ನು, ತಂದೆಯರನ್ನೂ ಬಿಡಿಸಿಕೊಂಡು ಬರಲು ಮಂತ್ರವಾದಿಯ ಪಟ್ಟಣಕ್ಕೆ ಬರುತ್ತಾನೆ. ಮುದುಕಿಯೊಬ್ಬಳ ಸಹಾಯದಿಂದ ವಿವರಗಳನ್ನು ಸಂಗ್ರಹಿಸಿ ಹೂವಾಡಿಗಿತ್ತಿಯ ಮನೆಯನ್ನು ಸೇರಿ ಹೂವಿನ ಮಾಲೆಯಲ್ಲಿ ತಾಯಿಗೆ ಪತ್ರವನ್ನು ಕಳಿಸುತ್ತಾನೆ. ಬಾಲನಾಗಮ್ಮ ಮಗನ ಸೂಚನೆಯಂತೆ ಮಂತ್ರವಾದಿಯ ಜೀವವಿರುವ ನೆಲೆಯನ್ನು ತಿಳಿದುಕೊಳ್ಳುತ್ತಾಳೆ. ರಾಮಣ್ಣ ತಾಯಿಯ ಸೂಚನೆಯನ್ನರಿತು ಗಂಡುಭೇರುಂಡ ಪಕ್ಷಿಗಳ ನೆರವನ್ನು ಪಡೆದು ಮಂತ್ರವಾದಿಗೆ ಇಲ್ಲಿ ಚಳಿಜ್ವರ ಕಾಣಿಸಿಕೊಳ್ಳುತ್ತದೆ. ಗಿಣಿಯನ್ನು ಕೊಲ್ಲಬೇಡ ಎಂದು ಬೇಡಿಕೊಳ್ಳುತ್ತಾನೆ ರಾಮಣ್ಣನನ್ನು ಕಲ್ಲಾಗಿದ್ದ ಏಳುಮಂದಿ ದೊರೆಗಳನ್ನೂ ಮತ್ತೆ ಸಜೀವಗೊಳಿಸಲು ರಾಮಣ್ಣ ಸೂಚಿಸುತ್ತಾನೆ. ಮಂತ್ರವಾದಿ ಅವರನ್ನು ಬದುಕಿಸುತ್ತಾನೆ. ಅನಂತರ ಗಿಣಿಯ ಕುತ್ತಿಗೆಯನ್ನು ಮುರಿಯಲು, ಮಂತ್ರವಾದಿ ಸಾವನ್ನಪ್ಪುತ್ತಾನೆ! ಎಲ್ಲರನ್ನೂ ಬಿಡಿಸಿಕೊಂಡು ರಾಮಣ್ಣ ತಮ್ಮ ಪಟ್ಟಣಕ್ಕೆ ಮರಳುತ್ತಾನೆ.

ತನ್ನ ಕಡೆಯವರನ್ನೆಲ್ಲ ಬಾಲಪಾಪಣ್ಣ ಬದುಕಿಸಿಕೊಂಡದ್ದಲ್ಲದೆ, ತನ್ನ ತಾಯಿಯನ್ನೂ, ಇಬ್ಬರು ಮಡದಿಯರನ್ನೂ ಪಲ್ಲಕ್ಕಿಯಲ್ಲಿ ಜೋಗಿಯೇ 'ಪಾನಗಲ್ಲು ಪಟ್ಟಣ'ದ ವರೆಗೆ ಹೊತ್ತು ತರುವಂತೆ ಮಾಡುತ್ತಾನೆ. ತನ್ನ ಕಾರ್ಯವೆಲ್ಲ ಮುಗಿದ ಮೇಲೆ ಫಕೀರನನ್ನು ಅತ್ಯಂತ ಕ್ರೂರವಾದ ರೀತಿಯಲ್ಲಿ ಕೊನೆಗಾಣಿಸುತ್ತಾನೆ. ದೊಡ್ಡ ಕೊಂಡವನ್ನು ಏರ್ಪಡಿಸಿ ಗಿಣಿಯ ಒಂದೊಂದೇ ಭಾಗಗಳನ್ನು ಆ ಕೊಂಡಕ್ಕೆ ಹಾಕಿ, ಕೊನೆಗೆ ಕುತ್ತಿಗೆಯನ್ನು ಮುರಿದು, ಗಿಣಿಯನ್ನೂ ಕೊಂಡಕ್ಕೆ ಎಸೆಯುತ್ತಾನೆ.

ಅನೇಕ ವರ್ಷ ಫಕೀರನ ಸೆರೆಯಲ್ಲಿದ್ದ ಬಾಲನಾಗಮ್ಮನ ಪಾತಿವ್ರತ್ಯದ ಪರೀಕ್ಷೆಯೂ ನಡೆಯುತ್ತದೆ. 'ಅಗ್ನಿಕೊಂಡ' ದಲ್ಲಿ ಬಿದ್ದು ಏಳು ದಿವಸ ಆ ಕೊಂಡದಲ್ಲಿದ್ದು ಅಗ್ನಿದಿವ್ಯೆಯಾಗಿ ಬಾಲನಾಗಮ್ಮ ಹೊರಗೆ ಬಂದಮೇಲೆ ಅವಳ ಪತಿ ಚಿಕ್ಕನಂಜರಾಜ ಸ್ವೀಕರಿಸುತ್ತಾನೆ.

ಬಾಲನಾಗಮ್ಮನ ಕಥೆಯ ಚೌಕಟ್ಟು ರಾಮಾಯಣದ ಕೆಲವು ಪ್ರಸಂಗಗಳನ್ನು ಅಸ್ಪಷ್ಟವಾಗಿ ಹೋಲುತ್ತದೆ. ಬಾಲನಾಗಮ್ಮನನ್ನು ಜೋಗಿಯ ವೇಷದ ಮಾಯಾವಿಯೊಬ್ಬ ಅಪಹರಿಸಿದ್ದು, ಏಳು ಸಮುದ್ರಗಳನ್ನು ದಾಟಿಹೋದೆ ಬಾಲರಾಮಣ್ಣ ಜೋಗಿಯ ಜೀವವನ್ನು ಶೋಧಿಸಿ ಅವನನ್ನು ಸಂಹರಿಸಿದುದು, ಸೀತಾದೇವಿಯಂತೆ ಅಗ್ನಿದಿವ್ಯಯಾಗಿ ಬಾಲನಾಗಮ್ಮ ಪತಿಯನ್ನು ಮತ್ತೆ ಕೂಡಿದುದು ಇಂಥ ಕಥಾರೇಖೆಗಳು ಶಿಷ್ಟ ಕವಿಗಳ ಸಂಸ್ಕರಣಕ್ಕೆ ಒಳಗಾಗುವ ಮುನ್ನ ರಾಮಾಯಣ ಮಹಾಭಾರತ ಕಥೆಗಳೂ ಜನಪದ ಕಾವ್ಯಗಳ ರೂಪದಲ್ಲಿ ಪ್ರಚಾರದಲ್ಲಿದ್ದುವು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಇದು ಒಟ್ಟು ಕಥೆಯ ಸಾರ. ಬೇರೆ ಬೇರೆ ಕಥೆಗಾರರು ಭಿನ್ನಪಾಠಗಳನ್ನು ಕಂಠಸ್ಥ ಮಾಡಿಕೊಂಡು ಹಾಡುತ್ತಾರೆ. ರಾಮಣ್ಣನ ಶಕ್ತಿ ಸಾಮರ್ಥ್ಯಗಳನ್ನು ಬಿಂಬಿಸಲು ಅನೇಕ ಪರಾಕ್ರಮಭರಿತ ಕಥೆಗಳನ್ನು ಸೃಜಿಸಿ ಹಾಡುತ್ತಾರೆ. ಸ್ತ್ರೀ ಪಾತ್ರ ಪ್ರಧಾನವಾದ ಜನಪದ ರಮ್ಯ ಕಾವ್ಯಗಳಲ್ಲಿ 'ಬಾಲನಾಗಮ್ಮನ' ಕಾವ್ಯ ಬಹಳ ದೀರ್ಘವಾದದ್ದು ಹಾಗೂ ಹೆಚ್ಚು ಜನಪ್ರಿಯವಾದದ್ದು.

ವಿವಿಧ ದಿನಪತ್ರಿಕೆಗಳಲ್ಲಿ ಬುರ್ರಕಥಾ ಜಯಮ್ಮನನ್ನು ಕುರಿತು ಪ್ರಕಟಗೊಂಡ ವರದಿಗಳು

ಅಪರೂಪದ ಕನ್ನಡ ಬುರ್ರಕಥಾ ಕಲಾವಿದೆ

'ಸಾವಿರಾರು ಪುಣ್ಯಪುರುಷರು, ಮಹಾತ್ಮರು ಹುಟ್ಟಿ ಸತ್ತು.... ಸಾವಿರಾರು ರಾಜ್ಯ ಮಹಾರಾಜ್ರು ಈ ಧರೆಯನ್ನಾಳಿ ಮಣ್ಣಾಗಿ ಹೋದ್ರು.... ಇನ್ನು ನನ್ನಂತಹ ಜೀವಿಗಳ ಯಾರ್ ಕೇಳ್ತಾರೆ ಸಾ ಅದ್ರೆ ನಂಗ್ ಬಂದಂತಹ ಕಷ್ಟ ಮಾತ್ರ ಬೇರೆಯಾರ್ಗೆ ಬರಬಾರ್ದು ಸಾ' ಎಂದು ಈ ಕ್ರೂರ ಬಡತನದ ಬದುಕಿನ ಕಷ್ಟಗಳಿಂದ ತತ್ತರಿಸಿ ಹೋಗಿ ಗಳಗಳನೆ ದುಃಖಿಸಿ ಕಣ್ಣೀರ ಸುರಿಸುವ ಜಯಮ್ಮ ಕನ್ನಡ ಜಾನಪದ ಕ್ಷೇತ್ರದ ಏಕೈಕ ಬುರ್ರಕಥಾ ಕಲಾವಿದೆಯಾಗಿದ್ದಾರೆ. ತನ್ನ ಇಬ್ಬರು ಪ್ರೀತಿಯ ಪುತ್ರಿಯರು ಮಕ್ಕಳ ಹಡೆದು ಸುಖದ ಜೀವನ ನಡೆಸುವುದರ ಬದಲು ಹೆರಿಗೆಯ ಸಮಯದ ಭಯಾನಕ ನೋವು ತಿಂದು ಮಕ್ಕಳಿಗೆ ಜನ್ಮ ನೀಡಿ ತೀರಿಕೊಂಡರು. ಹಾಗೇ ತನ್ನ ತಮ್ಮ ಹೊಟ್ಟೆ ನೋವಿನಿಂದ ಬಳಲಿ ತೀರಿಕೊಂಡ. ಇವರೆಲ್ಲರ ಮಕ್ಕಳ ಹಸಿದ ಹೊಟ್ಟೆ ಸಾಕಲು, ತನ್ನ ಅಗಾಧವಾದ ಸಂಕಟವನ್ನು ಮರೆಯಲು ಹಾಡು ಹಾಡಿಕೊಂಡು ಭಿಕ್ಷೆ ಮಾಡಿ ವಿಷಾದದ ಜೀವನ ನಡೆಸುತ್ತಿದ್ದಾರೆ. ಹಾಡಿ ಜನರ ಮನಸ್ಸನ್ನು ಉಲ್ಲಾಸಗೊಳಿಸುವುದನ್ನು ಬಿಟ್ಟರೆ ಎಂದೂ ತನ್ನ ನೋವಿನ ಕತೆಯನ್ನು ಹೇಳಿಕೊಳ್ಳದಂತಹ ಸ್ವಾಭಿಮಾನಿ ಕಲಾವಿದೆ.

ಜಯಮ್ಮ ಹುಟ್ಟಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ಕೊಮ್ಮೇನಹಳ್ಳಿ. ತಂದೆ ವೆಂಕಟಸ್ವಾಮಿ ದಾಸರು ಮಹಾನ್ ಬುರ್ರಕಥಾ ಕಲಾವಿದ. ದುರಾದೃಷ್ಟ ಎಂದರೆ ಜೀವನ ಪೂರ್ತಿ ಹಾಡಿ....ಹಾಡಿ ಈಗ ಧ್ವನಿಯನ್ನೇ ಕಳೆದು ಕೊಂಡಿದ್ದಾರೆ. ಈಗ ಅವರಿಗೆ ೯೦ ವರ್ಷ. ತನ್ನೆಲ್ಲ ಪ್ರತಿಭೆಯನ್ನು ನೇರವಾಗಿ ಮಗಳಿಗೆ ಧಾರೆ ಎರೆದು ಉತ್ತಮ ರೀತಿಯಲ್ಲಿ ಕಲೆಯನ್ನು ಕಲಿಸಿದ್ದಾರೆ. ಭಾವಪೂರ್ಣವಾಗಿ ಹಾಡಿ ಕಥೆ ನಿರೂಪಣೆ ಮಾಡುವ ಜಯಮ್ಮನ ಪ್ರತಿಭೆ ಬಗ್ಗೆ ಇವರಿಗೆ ತುಂಬಾ ಹೆಮ್ಮೆ.

'ಬುರ್ರ' ಎಂದರೆ ತಂಬೂರಿ ಎಂಬ ಅರ್ಥ. ಸಾಮಾನ್ಯವಾಗಿ ಆಂಧ್ರ ಪ್ರದೇಶದಲ್ಲಿ ಈ 'ಬುರ್ರಕಥಾ' ಕಂಡುಬರುತ್ತದೆ. 'ಬುರ್ರಕಥಾ' ಹಾಗೂ 'ಹರಿಕಥೆ' ಪರಸ್ಪರ ಒಂದೇ ಸಮಾನಂತರ ಕಲೆಗಳಾಗಿ ಆಂಧ್ರದಲ್ಲಿ ಕಂಡುಬರುತ್ತವೆ. ಆದರೆ ಬುರ್ರಕಥಾ ಸಂಪೂರ್ಣ ಜನಪದ ಆಶಯದಿಂದ ಕೂಡಿದ್ದು ಜನಪರವಾಗಿ ಮೂಡಿಬರುತ್ತದೆ. ಬುರ್ರಕಥೆಯಲ್ಲಿ ರಾಜ ಮಹಾರಾಜರ ಕಥೆಗಳು ನಿರೂಪಿತವಾಗಿರುತ್ತವೆ. ಹೇಗೋ ಈ ತೆಲುಗಿನ ಬುರ್ರಕಥೆಗಳು ಕನ್ನಡ ರೂಪಾಂತರಗೊಂಡು ಜಯಮ್ಮನ ತಂದೆಯ ಪೂರ್ವಿಕರು ಕನ್ನಡದಲ್ಲಿ ಹಾಡಿ ಪ್ರಚಾರ ಮಾಡಿದರು. ಜಯಮ್ಮನ ಮುತ್ತಾತನಿಗೆ ಮೈಸೂರು ರಾಜರ ಅರಮನೆಯಲ್ಲಿ ಜರತಾರಿ ಪೇಟ ಧರಿಸಿ ಗೌರವಿಸಿದ್ದರಂತೆ. ಇಂದಿನ ಜಯಮ್ಮ ತನ್ನ ಮುತ್ತಾತ ದಿವಂಗತ ತೊಳಸಿ ರಾಮದಸರನ್ನು ಸ್ಮರಿಸಿಕೊಳ್ಳುತ್ತಾಳೆ.

ತಂದೆ ಜೊತೆ ಜಯಮ್ಮ ತನ್ನ ೭ನೇ ವರ್ಷದಲ್ಲಿ ಹಿಮ್ಮೇಳ ಹಾಡಲಾರಂಭಿಸಿದರು. ತಂದೆಯ ಕಥಾ ನಿರೂಪಣೆಯ ವೈಖರಿಯನ್ನು ಹಾಡುವ ಮಟ್ಟುಗಳನ್ನು ಯಥಾವತ್ತಾಗಿ ಕಲಿತು ಇಂದು ನುರಿತ ಪ್ರೌಢ ಜನಪದ ಗಾಯಕಿಯಾಗಿದ್ದಾರೆ. ತಂದೆ ವೆಂಕಟಸ್ವಾಮಿದಾಸರು ಮೂಲತಃ ಕೋಲಾರ ಜಿಲ್ಲೆ ಚಿಕ್ಕಬೆಟ್ಟಹಳ್ಳಿಯಲ್ಲಿ ವಾಸವಾಗಿದ್ದು ಚಿಕ್ಕವಯಸ್ಸಿನಲ್ಲೆ ಬುರ್ರಕಥೆ ಹಾಡುತ್ತಾ ಮಂಡ್ಯ ಜಿಲ್ಲೆಗೆ ವಲಸೆ ಬಂದವರು. ಜಯಮ್ಮ ಸೋಲಿಗ ಜನಾಂಗಕ್ಕೆ ಸೇರಿದವರು. ಸೋಲಿಗರಲ್ಲಿ ಐದು ಉಪಜಾತಿಗಳುಂಟು. ಊರು ಸೋಲಿಗ, ಮಳೆ ಸೋಲಿಗ, ಕಾಡು ಸೋಲಿಗ, ಮುಂದೆ ಸೋಲಿಗ ಹಾಗೂ ಪಂಡಿತ ಸೋಲಿಗ. ಜಯಮ್ಮ ಮುಂದೆ ಸೋಲಿಗ ಉಪಜಾತಿಗೆ ಸೇರಿದವರು. ಇವರ ಮಾತೃಭಾಷೆ ತೆಲುಗು.

ನಮ್ಮ ಜನಪದದಲ್ಲಿ ಕಂಡುಬರುವ ನಾಲ್ಕು ತಂತಿಯ ಜನಪದ ತಂಬೂರಿಗೆ ತೆಲುಗಿನಲ್ಲಿ 'ಬುರ್ರ' ಎಂದು ಕರೆಯುತ್ತಾರೆ. ಗುಮತಿ ಎಂಬ ಚರ್ಮ ವಾದ್ಯಕ್ಕೆ 'ಗುಮಟೆ' ಎಂದು ಕನ್ನಡದಲ್ಲಿ ಕರೆಯುತ್ತಾರೆ. ಈ ಬುರ್ರ ಗುಮಟೆ ಹಾಗೂ ಚಿಟಕಿ ತಾಳ ಇವು ಜಯಮ್ಮನ ಹಾಡುಗಾರಿಕೆಯ ಹಿನ್ನೆಲೆ ವಾದ್ಯಗಳಾಗಿವೆ. ಜಯಮ್ಮನ ಇಬ್ಬರು ಮಕ್ಕಳಾದ ಲಕ್ಷ್ಮಿ ಹಾಗೂ ತುಳಸಿ ಇಬ್ಬರೂ ಹಿಮ್ಮೇಳದಲ್ಲಿ ಸೊಲ್ಲು ಹಾಡುತ್ತಾರೆ. ಜೊತೆಗೆ ತಂದೆ ಕೂಡ ಗುಮಟೆ ನುಡಿಸುತ್ತಾರೆ. ಜಯಮ್ಮನ ಗಂಡ ಮಾತ್ರ ಈ ಕಲೆಯನ್ನು ಕಲಿತವನಲ್ಲ ಜಯಮ್ಮನನ್ನೇ ಆಶ್ರಯಿಸಿಕೊಂಡಿದ್ದಾನೆ.

ಜಯಮ್ಮ ತುಂಬಾ ಸೊಗಸಾಗಿ ಪ್ರಸ್ತುತಪಡಿಸುವ ಬುರ್ರ ಕಥೆಗಳೆಂದರೆ ಕಾಂಬೋದಿರಾಜನ ಕಥೆ, ಬಾಲನಾಗಮ್ಮನ ಕಥೆ, ನಲ್ಲತಂಗಿ ಕಥೆ, ಧನಲಕ್ಷ್ಮಿ ದೇಸಿಂಗನಕಥೆ ಹಾಗೂ ಹೇಮರೆಡ್ಡಿ ಮಲ್ಲಮ್ಮನ ಕಥೆ. ರಾತ್ರಿ ಒಂಬತ್ತು ಗಂಟೆಗೆ ಕಥೆ ಪ್ರಾರಂಭವಾದರೆ ಬೆಳಿಗ್ಗೆ ಮೂರು ಗಂಟೆಗೆ ಕಥೆ ಮಂಗಳದ ಜೊತೆ ಮುಕ್ತಾಯವಾಗುತ್ತದೆ.

ಸದ್ಯಕ್ಕೆ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಹುಚ್ಚೇಗೌಡನ ದೊಡ್ಡಿಯಲ್ಲಿ ವಾಸವಾಗಿರುವ ಗಾಯಕಿ ಜಯಮ್ಮನಿಗೆ ತನ್ನದೆಂಬ ಒಂದು ಮನೆ ಇಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಬುರ್ರಕಥೆಗೆ ತುಂಬಾ ಬೇಡಿಕೆ ಇತ್ತು. ಇತ್ತೀಚಿನ ದಿನಗಳಲ್ಲಿ ಸಿನಿಮಾ, ವೀಡಿಯೋ ಕ್ಯಾಸೆಟ್ಟು, ಟಿವಿ. ಕಾರ್ಯಕ್ರಮಗಳಿಂದಾಗಿ ಇವರ ಕಾರ್ಯಕ್ರಮಕ್ಕೆ ಹೊಡೆತ ಬಿದ್ದಿದೆ. ಈಗ ಅಲೆಮಾರಿ ಜೀವನ, ಊರೂರು ಸುತ್ತಿ ಮನೆ ಮನೆ ಮುಂದೆ ಹಾಡಿ ದೈನಂದಿನ ಹೊಟ್ಟೆಪಾಡು ನೋಡಿಕೊಳ್ಳುತ್ತಾರೆ. ಆಗಿನ ಕಾಲದಲ್ಲಿ ಒಂದು ಕಥೆ ಮಾಡಲು ಒಂದು ಸಾವಿರದಿಂದ ಎರಡು ಸಾವಿರದವರೆಗೆ ಸಂಭಾವನೆ ಪಡೆಯುತ್ತಿದ್ದರು. ಇತ್ತೀಚೆಗೆ ಪರಿಚಯ ಇರುವ ರೈತರು ಜಯಮ್ಮನನ್ನು ಆಹ್ವಾನಿಸಿ ಹಾಡಿಸಿ ಕೈಲಾದಷ್ಟು ದವಸಧಾನ್ಯಗಳನ್ನು ನೀಡುತ್ತಾರೆ. ಆದರೆ ಸಂಪೂರ್ಣ ಕಥೆ ಮಾಡಲು ಆಹ್ವಾನ ಕಡಿಮೆಯಾಗಿದೆ. ಭಿಕ್ಷೆ ಪ್ರಮುಖ ಕಾರ್ಯವಾಗಿದೆ. ತನ್ನ ಗಾಯನದ ಮೂಲಕ ತನ್ನದೇ ಆದಂತಹ ವಿಶಿಷ್ಟ ರೀತಿಯಲ್ಲಿ ಬದುಕನ್ನು ರೂಪಿಸಿಕೊಂಡಿರುವ ಜಯಮ್ಮ ತನ್ನ ಮಕ್ಕಳ ಜೀವ ಉಳಿಸಿಕೊಳ್ಳಲು ಹೆಣಗಾಡಿ ಮಾಡಿದ ಸಾಲ ಬಡ್ಡಿ ಚಕ್ರಬಡ್ಡಿಯಾಗಿ ಈಗ ದೊಡ್ಡ ಮೊತ್ತವಾಗಿದೆ. ಇದು ಜಯಮ್ಮನ ಮೃದು ಮನಸ್ಸಿನ ಮೇಲೆ ತೀವ್ರ ಅಘಾತ ಉಂಟುಮಾಡಿದೆ. ಬದುಕಿಗಿಂತ ಸಾಲವೇ ಮಹತ್ವದ ಚಿಂತೆಯಾಗಿದೆ. ಅದನ್ನು ತೀರಿಸುವ ಪರಿ ಹೇಗೆಂಬುದೇ ದಿನನಿತ್ಯದ ಕೊರಗಾಗಿದೆ.

ಎಲೆಮರೆಯ ಕಾಯಂತೆ ನನ್ನ ಅಮೂಲ್ಯ ಕಂಠಶ್ರೀಯಿಂದ ಗ್ರಾಮೀಣರಿಗೆ ನೀತಿಬೋಧೆ ಮಾಡುವ ಅಪರೂಪದ ಈ ಮಹಿಳಾ ಕಲಾವಿದೆಗೆ ಈ ಸುಡುಗಾಡು ನೆಲದಲ್ಲಿ ಆಶ್ರಯ ಗೌರವ ಬೇಕಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಜಯಮ್ಮನನ್ನು ಗುರುತಿಸಿ ಗೌರವಿಸುವ ಕೆಲಸ ಮಾಡಬೇಕು.

ಬಾನಂದೂರು ಕೆಂಪಯ್ಯ

ಪ್ರಜಾವಾಣಿ, ಭಾನುವಾರ ೧೫–೧೯೯೫

ಬುರ್ರಕಥಾ–ಅಪರೂಪದ ಜನಪದ ಪ್ರಕಾರ

ಬುರ್ರಕಥಾ ಮೂಲತಃ ತೆಲುಗಿನಲ್ಲಿ ಪ್ರಚಲಿತವಿರುವ ಒಂದು ಜನಪದ ಕಲಾಪ್ರಕಾರ. ಆದರೆ ಜನಪದದ ವೈಶಿಷ್ಟ್ಯ ಎಂಬಂತೆ ಈ ಕಲೆ ಹೇಗೋ ಕನ್ನಡದಲ್ಲೂ ಆಕಾರ ಪಡೆದು ಇತ್ತೀಚೆಗೆ ಜನಪ್ರಿಯವಾಗುತ್ತಿದೆ.

ಮಳವಳ್ಳಿಯ (ತಳಗವಾದಿ) ಜಯಮ್ಮ ಕನ್ನಡದಲ್ಲಿ ಈ ಬುರ್ರಕಥೆಯನ್ನು ಮಾಡುವ ಕಲಾವಿದೆ. ಅವರೊಂದಿಗೆ ಅವರ ಇಡೀ ಕುಟುಂಬವೇ ಹಿಮ್ಮೇಳದಲ್ಲಿ ಭಾಗವಹಿಸುತ್ತದೆ. ಸುಮಾರಾಗಿ ಹರಿಕಥೆಯನ್ನು ಹೋಲುವ ಈ ಕಲೆಯಲ್ಲಿ ಜಯಮ್ಮ ಪದ್ಯ ಮತ್ತು ಪದ್ಯದ ಭಾವಾನುವಾದವನ್ನು ನಾಟಕೀಯ ಶೈಲಿಯಲ್ಲಿ ಮಾಡುತ್ತಾರೆ. ಇತ್ತೀಚಿಗೆ ಮೈಸೂರಿನ ಸಮೀಪದ ದೇವಲಾಪುರವೆಂಬ ಊರಿನಲ್ಲಿ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕ ಮತ್ತು ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯು ಹಮ್ಮಿಕೊಂಡ ಅರ್ಥಪೂರ್ಣ ಕಾರ್ಯಕ್ರಮದಲ್ಲಿ 'ಬುರ್ರಕಥೆ' ಯನ್ನು ಜಯಮ್ಮ ಮತ್ತು ಸಂಗಡಿಗರು ನಡೆಸಿಕೊಟ್ಟರು. ನಿರೂಪಣೆಯಲ್ಲಿ ಜಾನಪದದ ಧಾಟಿ, ಧ್ವನಿಗಳನ್ನು ಜತನದಿಂದ ಕಾಪಾಡಿಕೊಳ್ಳಲಾಗಿದೆ. ಆದರೆ ಜಯಮ್ಮ ಶಬ್ದಗಳ ಉಚ್ಚಾರಕ್ಕೆ ಇನ್ನೂ ಹೆಚ್ಚಿನ ಸ್ಪಷ್ಟ ರೂಪವನ್ನು ನೀಡಿದರೆ ಪರಿಣಾಮ ಮತ್ತೂ ಗಮನಾರ್ಹವಾಗುತ್ತದೆ.

ಕಲಾರಂಗ

ಈ ಕಲೆಯಲ್ಲಿ ಬಳಸುವ 'ಬುರ್ರಾ' ಎಂಬ ಹಿಮ್ಮೇಳದ ಉಪಕರಣದಿಂದಾಗಿಯೇ ಇದಕ್ಕೆ ಈ ಹೆಸರು ಬಂದಿರಬೇಕೆಂದು ಹೇಳುವ ಪ್ರಸಿದ್ಧ ಜಾನಪದ ವಿದ್ವಾಂಸ ಶ್ರೀ ಜೀ.ಶಂ. ಪರಮಶಿವಯ್ಯ ಅವರು ಮಧ್ಯಪ್ರದೇಶದ 'ಪಾಂಡ್ವಾನಿ' ಕಲೆಯನ್ನು ನಡೆಸುವ ತೇಜನ್ ಬಾಯಿಯಂತೆ ಜಯಮ್ಮ ಕೂಡಾ ಅದ್ಭುತ ಕಲಾವಿದೆಯಾಗಬಲ್ಲ ಭರವಸೆ ಹುಟ್ಟಿಸುತ್ತಾರೆ' ಎಂದು ವಿಶ್ಲೇಷಿಸುತ್ತಾರೆ.

ಜಾನಪದ ಕಲೆಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಯತ್ನವಾಗಿ ನಡೆದ ಈ ವಿಶೇಷ ಕಾರ್ಯಕ್ರಮದಲ್ಲಿ ಬೆಳ್ಳೂರಿನ ಶ್ರೀ ಭುವನೇಶ್ವರಿ ಯಕ್ಷಗಾನ ಸೂತ್ರದ ಬೊಂಬೆಯಾಟದ ಮೇಳದವರಿಂದ 'ಪಂಚವಟಿ' ಎಂಬ ಕಥಾ ಪ್ರಸಂಗವನ್ನು ಉಡುಪಿಯ 'ನೇಪಥ್ಯ' ತಂಡದವರಿಂದ 'ಭಸ್ಮಾಸುರ ಮೋಹಿನಿ' ಎಂಬ ಬಡಗುತಟ್ಟಿನ ಕಥಾ ಪ್ರಸಂಗವನ್ನೂ ಆಡಿಸಲಾಯಿತು.

ಈ ಎಲ್ಲ ಕಾರ್ಯಕ್ರಮಗಳ ಫಲಶೃತಿಯನ್ನು ಚರ್ಚಿಸಲು ಮರುದಿನ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದವರು ವಿಮರ್ಶೆಯನ್ನು ಏರ್ಪಡಿಸಿದ್ದು ಕಲೆಯ ಸಮಗ್ರತೆ ಹಾಗೂ ಪರಿಣಾಮಗಳನ್ನು ಅರಿತುಕೊಳ್ಳುವ ದಿಶೆಯಲ್ಲಿ ತೀರಾ ಮಹತ್ವದ್ದಾಗಿತ್ತು.

ರಾಜು ಅಡಕಳ್ಳಿ

ಪ್ರಜಾವಾಣಿ ಭಾನುವಾರ ೨೮ನೇ ಜೂನ್ ೧೯೯೨

ಕಥನ ಕೌಶಲ ಮೆರೆದ ಬುರ್ರಕಥಾ ಕಲಾವಿದೆ ಶ್ರೀಮತಿ ಜಯಮ್ಮ

ಹಾಡು, ಮಾತುಗಳ ಅನೇಕ ನೀತಿಬೋಧೆಯ ಲೌಕಿಕ-ಅಲೌಕಿಕ ಅಂಶಗಳುಳ್ಳ ಕಥೆಗಳನ್ನು ತಂತಿಯ ತಂಬೂರಿ ಮೀಟಿ ಗಗ್ಗರಿ ಚಿಟಿಕೆ ಬಾರಿಸುತ್ತ, ಆಂಗಿಕ ಅಭಿನಯ ಹಾಗೂ ಸ್ವರದ ಏರಿಳಿತ ಮತ್ತು ಭಾವೋದ್ದೀಪನ ಮಾಡುವ ಆಂಧ್ರ ಪ್ರದೇಶದ ಕಥನಕಲೆಯೇ ಈ ಬುರ್ರಕಥೆ.

ಹರಿಕಥೆಗೆ ಸಂವಾದಿಯಾದ ಕಥನಕಲೆ ಇದು. ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದ ಬುರ್ರಕಥೆಯನ್ನು ಕನ್ನಡಕ್ಕೆ ಅನುವಾದಿಸಿ ಹಾಡಲು ತೊಡಗಿ ಮೈಸೂರು ರಾಜರಿಂದಲೇ ಬಿರುದನ್ನು ಪಡೆದಂತಹವರು ತೊಳಸಿ ರಾಮದಾಸರು. ಇವರ ಮಗ ವೆಂಕಟಸ್ವಾಮಿ ದಾಸರು. ಮಳವಳ್ಳಿಯ ಮದ್ದೂರು ತಾಲೂಕಿನ ಕೊಮ್ಮೇನಹಳ್ಳಿಯಲ್ಲಿ ವಾಸವಾಗಿರುವ ಜಯಮ್ಮ ತನ್ನ ಏಳನೆಯ ವಯಸ್ಸಿನಿಂದಲೇ ತಂದೆ ವೆಂಕಟಸ್ವಾಮಿದಾಸರ ಜೊತೆ ಕಾರ್ಯಕ್ರಮದಲ್ಲಿ ಹಾಡಲು ತೊಡಗಿ ಕಾರ್ಯಕ್ರಮದ ಉತ್ಸಾಹಪೂರಿತ ನಿರೂಪಣೆ, ಅರ್ಥಪೂರ್ಣ ಅಭಿನಯ, ಸುಶ್ರಾವ್ಯ, ವೈವಿಧ್ಯಗಳುಳ್ಳ ಜನಪದ ಹಾಡುಗಳ ರಸವತ್ತಾಗಿರುವ ಕಥನಕಲೆಯನ್ನು ವಂಶ ಪರಂಪರೆಯಾಗಿ ಪಡೆದಿದ್ದಾರೆ. ೭ನೆಯ ವಯಸ್ಸಿನಿಂದ ತೊಡಗಿಸಿಕೊಂಡು ಇಂದಿನ ೭೦ನೆಯ ವಯಸ್ಸಿನವರೆಗೆ ಜಯಮ್ಮನ ನಿಜ ಜೀವನದಲ್ಲೂ ಅನೇಕ ಕಲಾಜೀವನದಲ್ಲೂ ಅನೇಕ ಅನುಭವಗಳು ಆಗಿವೆ. ತನ್ನ ಕಲಾಜೀವನದಲ್ಲಿ ಕಲೆಯ ಬಗ್ಗೆ ಆನಾಸ್ಥೆ ವಹಿಸಿದ್ದ ಗಂಡನೊಡನೆ ಸಂಸಾರ ನಡೆಸಿ ಏಳು ಮಕ್ಕಳನ್ನು ಪಡೆದು ಅವರನ್ನು ಬೆಳೆಸಿ ಜೀವನಪಥಕ್ಕೆ ತಂದಾಕೆ ಶ್ರೀಮತಿ ಜಯಮ್ಮ. ತನ್ನ ತಮ್ಮ ಬೇನೆಯಿಂದ, ಇಬ್ಬರು ಹೆಣ್ಣುಮಕ್ಕಳು ಹೆರಿಗೆ ನೋವಿನಿಂದ ಬೆನ್ನು ಬೆನ್ನಿಗೆ ತೀರಿಕೊಂಡರು. ಅವರವರ ಎಳೆಯ ಮಕ್ಕಳನ್ನು ಸಾಕುವ ಜವಾಬುದಾರಿಯಿಂದ ಜರ್ಜರಿತಳಾದರೂ ಆಕೆಯ ಕಲೋತ್ಸಾಹ ಇನ್ನೂ ಕಡಿಮೆಯಾಗಿಲ್ಲ.

ಕಲೆಗಾಗಿಯೇ ಜಯಮ್ಮನವರ ಜೀವನ.ಜನರಿದ್ದಲ್ಲಿಗೇ ಹೋಗಿ ಬುರ್ರಕಥೆ ಹೇಳಿ ಅವರು ಕೊಟ್ಟ ಸಂಭಾವನೆಯಿಂದಲೇ ಜೀವನ ನಡೆಸುತ್ತಾ ಬಂದಿದ್ದಾರೆ. ಆಧುನಿಕ ಯುಗದ ಸಿನೆಮಾ, ಚಲನಚಿತ್ರಗಳ ಪ್ರಭಾವದಿಂದ ಜನಪದ ಕಲೆಗಳ ಮೇಲೆ ಜನರ ಅವಜ್ಞೆ ಪ್ರಾರಂಭವಾಗಿದೆ. ಬುರ್ರಕಥೆಗೆ ಮೊದಲಿನ ಪ್ರಾಯೋಜಕತ್ವ ಇಲ್ಲ. ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ಸಾರ್ವಜನಿಕ ಪ್ರದರ್ಶನಕ್ಕೆ ಆಮಂತ್ರಣ ಬಂದರೆ ದೊಡ್ಡದು. ಹಾಗಾಗಿ ಬಡತನದ ಬವಣೆಯೇ ತಮ್ಮ ಜೀವನದ ಸಿದ್ಧಿಯಾಗಿ ಉಳಿದಿದೆ. ತನಗಿನ್ನೂ ತನ್ನದೇ ಆದ ಸೂರು ಆಗದೆ ಇರುವುದು ಜಯಮ್ಮನ ಕೊರಗು. ಸರಕಾರದಿಂದ ಮಾಸಾಶನ ಬಂದರೂ ತುತ್ತಿನ ಚೀಲ ತುಂಬಿಸುವ ಬಾಬತ್ತಿನದಲ್ಲ. ೭೦ರ ಹರೆಯದಲ್ಲೂ ಇನ್ನೂ ಭವಿಷ್ಯದ ಅನಿಶ್ಚಿತತೆಯಲ್ಲಿ ತೊಳಲಾಡುವ ಜಯಮ್ಮನವರ ಸಂಭಾಷಣೆಯಲ್ಲಿ ಪಲ್ಲವಿಯಾಗಿ ಈ ಮಾತುಗಳು ಬರುತ್ತವೆ.

ಅಪ್ಪಟ ಜಾನಪದದ ಲಕ್ಷಣಗಳು ಜಯಮ್ಮನವರ ಬುರ್ರಕಥಾ ಪ್ರದರ್ಶನದಲ್ಲಿ ನಿಚ್ಚಳವಾಗಿ ಕಾಣುತ್ತವೆ. ನುಡಿಸುವ ತಂಬೂರಿ ಅವರೇ ಹೇಳುವಂತೆ ೧೦೦ ವರ್ಷಗಳಷ್ಟು ಹಳೆಯದು. ಜೊತೆಗೆ ದಾಸರು ನುಡಿಸುವಂತಹ ಚಿಟಿಕೆ ಎಡಗೈಯಲ್ಲಿ. ಚಿಟಿಕೆ ಬಾರಿಸುವಾಗ ಎಡಗೈಯನ್ನು ಮೇಲೆತ್ತಿ ಆವೇಶಭರಿತವಾಗಿ ಹಾಡುತ್ತಾರೆ. ಬಲಗೈ, ಬಲಕಾಲುಗಳು ಭಾವಪ್ರದರ್ಶನದ ಸಾಧನಗಳು. ಆಗಾಗ ವರ್ತುಲಾಕಾರದಲ್ಲಿ ರಂಗಕ್ಕೆ ಬೆನ್ನು ತಿರುಗಿಸಿ ಸುತ್ತುವುದೂ ಭಾವಾಭಿವ್ಯಕ್ತಿಯ ರೀತಿ. ಕುಣಿತ ಬುರ್ರಕಥಾದಲ್ಲಿ ಇಲ್ಲ, ಹಿಮ್ಮೇಳದಲ್ಲಿ ನಿಂತ ಕಲಾವಿದರು ಇಬ್ಬರೋ ಮೂವರೋ ಗಮಟೆಯೆಂದು ಕರೆಯಲ್ಪಡುವ ಚರ್ಮವಾದ್ಯವೊಂದನ್ನು ಧಾರಿಸುತ್ತಾರೆ. ಹಿತ್ತಾಳೆಯ ಮಡಕೆಯಂತಹ ಸಾಧನದ ಅಗಲಬಾಯಿ ಚರ್ಮದಿಂದ ಬಿಗಿಯಲ್ಪಟ್ಟು ಅಗಲ ಕಿರಿದಾದ ಇನ್ನೊಂದು ಬಾಯಿ ತೆರೆದಿರುತ್ತದೆ. ಬಲಗೈಯ ಬೆರಳುಗಳಿಂದ ಬಿಗಿದ ಚರ್ಮದ ಮೇಲೆ ಕೈಯಾಡಿಸಿದಾಗ ವಿವಿಧ ಶಬ್ದಗಳು ಉತ್ಪನ್ನವಾಗುತ್ತವೆ. ಎಡಬದಿಯ ತೆರೆದ ಬಾಯನ್ನು ಎಡಗೈಯಿಂದ ಮುಚ್ಚಿ ತೆರೆದಾಗ ವಾದ್ಯದ ಧ್ವನಿಗಳಲ್ಲಿ ಏರಿಳಿತವುಂಟಾಗುತ್ತದೆ. ಮುಖ್ಯ ಕಲಾವಿದೆ ಹಾಡುವ ಸೊಲ್ಲುಗಳನ್ನು ಸಹ ಕಲಾವಿದೆಯರೂ ಹಿಂಬಾಲಿಸಿ ಹಾಡುತ್ತಾರೆ. ನಡುನಡುವೆ ಶಂಕರಾ ಎಂಬ ಪದವನ್ನೊಳಗೊಂಡ ಸೊಲ್ಲಿನ ಪಲ್ಲವಿ. ರಂಗವೇ ಈ ಕಲೆಯನ್ನು ಕಲಿಯುವ ಪಾಠ ಶಾಲೆ. ಜಯಮ್ಮನೊಂದಿಗೆ ಕಲೆಯ ಪ್ರದರ್ಶನ ನೀಡುವ ಹೆಂಗಳೆಯರು ಅವರ ಮಗಳಂದಿರೇ. ಮಗಳಂದಿರು ಮದುವೆಯಾಗಿ ಗಂಡನ ಮನೆಯಲ್ಲಿರುವವರಾದರೂ ಪ್ರದರ್ಶನಕ್ಕೆ ಬೇಕಾದರೆ ಹೇಳಿ ಕಳುಹಿಸುತ್ತಾರೆ.

ಜಯಮ್ಮನ ಬತ್ತಳಿಕೆಯಲ್ಲಿರುವ ಬುರ್ರಕಥೆಗಳಲ್ಲಿ ಕಾಂಭೋಜ ರಾಜನ ಕಥೆ, ಬಾಲನಾಗಮ್ಮನ ಕಥೆ, ನಲ್ಲತಂಗಿ ಕಥೆ, ಧನಲಕ್ಷ್ಮೀ ದೇಸಿಂಗನ ಕಥೆ, ಹೇಮರೆಡ್ಡಿ ಮಲ್ಲಮ್ಮನ ಕಥೆಗಳು ಬಹು ಮುಖ್ಯವಾದವು ಇವೆ. ಸಾಮಾನ್ಯವಾಗಿ ಆರೇಳು ಗಂಟೆಗಳ ಹರವುಳ್ಳ ಕಥೆಯನ್ನು ಸಂದರ್ಭಕ್ಕನುಗುಣವಾಗಿ ಹಿಗ್ಗಿಸಿ, ಕುಗ್ಗಿಸುವ ಕಲೆಗಾರಿಕೆಯೂ ಜಯಮ್ಮನಿಗೆ ಕರಗತ. ಹಾಡುವ ಹಾಡೂ, ಕಥೆಗಾರಿಕೆಯೂ ಸಮಯಸ್ಫೂರ್ತಿಯಿಂದ ಮಾರ್ಪಾಡಾಗಬಲ್ಲುವು. ಸಾಂದರ್ಭಿಕವಾದ ಮಾತುಗಳನ್ನು ಕಥನಕದಲ್ಲಿ ಪೋಣಿಸಬಲ್ಲಾಕೆ ಶ್ರೀಮತಿ ಜಯಮ್ಮ.


ಕರಾವಳಿ ಜಿಲ್ಲೆಯಲ್ಲಿ ಮೊತ್ತಮೊದಲಬಾರಿಗೆ ಶ್ರೀಮತಿ ಜಯಮ್ಮ ಈ ವರ್ಷ ನವೆಂಬರ್ ತಿಂಗಳಲ್ಲಿ ಕಾಣಿಸಿಕೊಂಡರು. ಡಿ. ೧೧ ರಂದು ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಪರ್ಯಾಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಮ್ಮುಖದಲ್ಲಿ ಒಂದರ್ಧ ಗಂಟೆಯ ಕಲಾ ಪ್ರದರ್ಶನ, ಮರುದಿನ ಉಡುಪಿ ಎಂ.ಜಿ.ಎಂ. ಕಾಲೇಜಿನ ನೂತನ ಕಟ್ಟಡದಲ್ಲಿ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದಿಂದ ದಾಖಲಾತಿಗಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗಂಟೆಗಳ ಕಾಲದ ಕಾಂಭೋಜರಾಜ ಕಥೆಯನ್ನು ಶ್ರೀಮತಿ ಜಯಮ್ಮ ನಿರೂಪಿಸಿದರು. ಶಾಪಗ್ರಸ್ತ ಕಾಂಭೋಜನ ಕಿರಿಯ ಮಡದಿ ಪುತ್ರವಿಹೀನಳು, ಅಸೂಯಾಪರರಾದ ಉಳಿದ ಆರು ಜನ ರಾಣಿಯರ ಮಕ್ಕಳನ್ನು ಸಾಕುವ ಹೊಣೆ ಹೊತ್ತು ಅವರ ಕುಟಿಲತನದಿಂದ ಮಕ್ಕಳ ಕೊಲೆಗಾರ್ತಿ ಎಂಬ ಕಳಂಕ ಹೊತ್ತು ರಾಜನಿಂದ ಶಿಕ್ಷಿತಳಾಗುತ್ತಾಳೆ. ಶಂಕರನಿಂದ ವರರೂಪವಾಗಿ ಬಂದ ಕುಮಾರನು ಮಡಿದ ಭ್ರಾತೃಗಳನ್ನು ಮರು ಪಡೆದು ರೋಗಗ್ರಸ್ತನಾಗಿ ಪವಡಿಸಿದ ಕಾಂಭೋಜರಾಜನಿಗೆ ಮರಳಿ ಮುಕ್ತಿ ನೀಡಿ ಕುಟುಂಬ ಪುನರ್ಮಿಲನವಾಗುವಂತೆ ಮಾಡುತ್ತಾನೆ. ಈ ರೀತಿ ಸುಖಾಂತವಾಗುವ ಕಥೆಯನ್ನು ಕಾಲಮಿತಿಯ ದೆಸೆಯಿಂದ ಕಥಾ ನಿರೂಪಕಿ ತುಸು ಕ್ಷಿಪ್ರಗತಿಯಲ್ಲೇ ನಿರೂಪಣೆ ಮಾಡಿದ್ದು ಕಂಡುಬಂತು. ಕಥೆಯನ್ನು ಹೆಚ್ಚು ವಿಸ್ತರಿಸುವ ಹಾಡುಗಳೆಲ್ಲವನ್ನೂ ಭಾವಪೂರ್ಣವಾಗಿ ಹಾಡಿ ಉತ್ತಮ ಪ್ರದರ್ಶನ ನೀಡಿದವರು ಶ್ರೀಮತಿ ಜಯಮ್ಮ. ಕಾರಣಾಂತರದಿಂದ ಪ್ರೇಕ್ಷಕರು ಬೆರಳೆಣಿಕೆಯಲ್ಲಿದ್ದರೂ ತಮ್ಮ ನಿತ್ಯದ ಉತ್ಸಾಹ, ಸ್ಫೂರ್ತಿಯುತ ಶೈಲಿಯಲ್ಲೇ ಮೂರು ಗಂಟೆಗಳ ಪ್ರದರ್ಶನ ನೀಡಿದರು ಶ್ರೀಮತಿ ಜಯಮ್ಮ. ಸಹಿ ಹಾಕಲಿಕಷ್ಟೇ ಬಲ್ಲ ಜಯಮ್ಮ ಶಾಲೆಗೆ ಹೋದವರಲ್ಲ. ತಮಗೆ ಬಂದ ಪತ್ರವನ್ನು ಮಗಳಂದಿರ ಕೈಯಿಂದಲೇ ಓದಿಸಿ ಅರ್ಥ ಪಡೆಯಬೇಕಾದ ಅನಿವಾರ್ಯತೆಯುಳ್ಳ ಇವರು ಕಲಿತದೆಲ್ಲವೂ ಜಾನಪದ ಮೌಖಿಕ ಪರಂಪರೆಯಲ್ಲಿ. ಅದೇ ಪರಂಪರೆಯಲ್ಲಿ ತಮ್ಮ ಮಗಳಂದಿರಿಗೂ ಕಲೆಯನ್ನು ಕರಗತ ಮಾಡಿಸುತ್ತಿದ್ದಾರೆ. ತನ್ನ ಕಾಲಾನಂತರದಲ್ಲಿ ಕನ್ನಡ ಬುರ್ರಕಥೆ ಉಳಿಯಬಹುದೆಂಬ ಆಶಾವಾದ ಅವರಿಗಿದ್ದರೂ ಈ ಕಲೆಯು ಕ್ರಮೇಣ ಜನರ ಮನದಿಂದ ಮಾಯಾಗಬಹುದೆಂಬ ಆ ಮೂಲಕ ತನ್ನ ತನ್ನವರ ಜೀವನಾಧಾರ ಕುಸಿಯಬಹುದೆಂಬ ನಿರಾಶಾವಾದದಿಂದಲೇ ಕುಸಿಯುತ್ತಿದ್ದಾರೆ ಶ್ರೀಮತಿ ಜಯಮ್ಮ.

ಡಾ. ಎನ್. ತಿರುಮಲೇಶ್ವರ ಭಟ್

ಉಡುಪಿಯ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿ

ಚಿತ್ರಕೃಪ

ಆರ್.ಆರ್.ಸಿ. ಉಡುಪಿ




ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ

ಜಯಮ್ಮ

ಕನ್ನಡ ಬುರ್ರಕಥಾ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ನೀಡಿದ ಪ್ರಶಸ್ತಿ



ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ

ನಂ. 1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-560 054


ಶ್ರೀಮತಿ/ಶ್ರೀ. ಜಯಮ್ಮ ಅವರಿಗೆ

ಬುರ್ರಕಥಾ ಪ್ರದರ್ಶನ ಸಲುವಾಗಿ ನೀಡಿದ ಮೆಚ್ಚುಗೆ / ಅರ್ಹತಾ ಪತ್ರ


ದಿನಾಂಕ :

ಅಧ್ಯಕ್ಷರು

ಕರ್ನಾಟಕ ಜಾನಪದ ಪರಿಷತ್ತು ನೀಡಿದ ಅರ್ಹತಾ ಪತ್ರ



ಕನ್ನಡ ಸಾಹಿತ್ಯ ಪರಿಷತ್ತು ನೀಡಿದ ಜನಪದ ಕಲಾವಿದ ಪ್ರಶಸ್ತಿ



ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಮಂಡ್ಯ. ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. ಕರ್ನಾಟಕ ಜಾನಪದ ಪರಿಷತ್ತು, ಜಿಲ್ಲಾ ಘಟಕ, ಮಂಡ್ಯ.

ಪ್ರಮಾಣ ಪತ್ರ

ಶ್ರೀಮತಿ/ಶ್ರೀ ---------- ರವರು

ದಿನಾಂಕ ೦೮-೦೮-2011ರಂದು ಮದ್ದೂರು ತಾಲ್ಲೂಕು ದೇಶಹಳ್ಳಿ ಗ್ರಾಮದಲ್ಲಿ ನಡೆದ

"ಜಾನಪದ ಸಂಭ್ರಮ"ದಲ್ಲಿ ಭಾಗವಹಿಸಿ ---------- ಕಲೆಯನ್ನು

ಪ್ರದರ್ಶಿಸಿದ್ದಾರೆಂದು ದೃಢೀಕರಿಸಲಾಗಿದೆ.

(ಡಿ.ಪಿ. ಸ್ವಾಮಿ) ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಮಂಡ್ಯ.

(ಡಾ. ಮಂಜುಳಾಹುಲ್ಲಹಳ್ಳಿ) ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಮಂಡ್ಯ.

(ಜಿ.ಎನ್. ಪರಡ್ಡಿ) ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

(ಗೊ.ರು. ಚನ್ನಬಸಪ್ಪ) ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಮಂಡ್ಯ, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಹಾಗೂ ಕರ್ನಾಟಕ ಜಾನಪದ ಪರಿಷತ್ತು, ಜಿಲ್ಲಾ ಘಟಕ, ಮಂಡ್ಯ ಇವರುಗಳು ನೀಡಿದ ಪ್ರಶಸ್ತಿ

ಜಿಲ್ಲಾ ರಾಷ್ಟ್ರೀಯ ಉತ್ಸವಗಳ ಸಮಿತಿ, ಮಂಡ್ಯ ಜಿಲ್ಲೆ.

ಪ್ರಶಸ್ತಿ ಪತ್ರ

ಶ್ರೀಮತಿ/ಶ್ರೀ [illegible] [redacted] [illegible] ರವರು

[illegible] ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ

ದಿನಾಂಕ [illegible] ರಂದು ನಡೆದ [illegible]

ಸಮಾರಂಭದಲ್ಲಿ ಗೌರವಿಸಿ ಈ ಪ್ರಶಸ್ತಿ ಪತ್ರ ನೀಡಲಾಗಿದೆ.

ಮಂಡ್ಯ
ದಿನಾಂಕ : [illegible]

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು
ಜಿಲ್ಲಾ ರಾಷ್ಟ್ರೀಯ ಉತ್ಸವ ಸಮಿತಿ, ಮಂಡ್ಯ.

ಜಿಲ್ಲಾ ರಾಷ್ಟ್ರೀಯ ಉತ್ಸವಗಳ ಸಮಿತಿ, ಮಂಡ್ಯ ಇವರು ನೀಡಿದ ಪ್ರಶಸ್ತಿ ಪತ್ರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಅರ್ಹತಾ ಪತ್ರ

ಶ್ರೀಮತಿ/ಶ್ರೀ [illegible] ರವರು

ದಿನಾಂಕ 29-5-96 ರಿಂದ

30-5-96 ರವರೆಗೆ ನಡೆದ

ದಲ್ಲಿ ಭಾಗವಹಿಸಿದ್ದಕ್ಕಾಗಿ ಈ ಅರ್ಹತಾ ಪತ್ರ ನೀಡಲಾಗಿದೆ.

ಸ್ಥಳ :


ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಸದಸ್ಯ - ಸಂಚಾಲಕರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಹಾಗೂ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರುಗಳು ನೀಡಿದ ಅರ್ಹತಾ ಪತ್ರ



ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು


ಅರ್ಹತಾ ಪತ್ರ

ಶ್ರೀಮತಿ/ಶ್ರೀ ______ ರವರು ______ ದಿನಾಂಕ ______ ರಿಂದ ______ ರವರೆಗೆ ನಡೆದ ______ ದಲ್ಲಿ ಭಾಗವಹಿಸಿದ್ದಕ್ಕಾಗಿ ಈ ಅರ್ಹತಾ ಪತ್ರ ನೀಡಲಾಗಿದೆ.

ಸ್ಥಳ :

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
ಸದಸ್ಯ - ಸಂಚಾಲಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ನೀಡಿದ ಅರ್ಹತಾ ಪತ್ರ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
ಹಾಗೂ
ಮಂಡ್ಯಜಿಲ್ಲಾ ಜನಪದ ಕಲಾ ಮೇಳ ಸ್ವಾಗತ ಸಮಿತಿ
ಶ್ರೀ ಆತ್ಮಲಿಂಗೇಶ್ವರ ಕ್ಷೇತ್ರ, ಹನುಮಂತನಗರ, ಮದ್ದೂರು ತಾಲ್ಲೂಕು


ದಿನಾಂಕ : 13-7-1997

ಪ್ರಶಸ್ತಿ ಪತ್ರ

ಶ್ರೀಮತಿ\ಶ್ರೀ .... ಅವರು ಜುಲೈ 12 ಮತ್ತು 13, 1997ರಂದು ಮಂಡ್ಯ ಜಿಲ್ಲಾ ಜನಪದ ಕಲಾಮೇಳದಲ್ಲಿ ಭಾಗವಹಿಸಿ ನೀಡಿದ .... ಕಲಾ ಪ್ರದರ್ಶನಕ್ಕಾಗಿ ಮೆಚ್ಚಿಕೊಟ್ಟ ಪ್ರಶಸ್ತಿ ಪತ್ರ.

ಅಧ್ಯಕ್ಷರು, ಸ್ವಾಗತ ಸಮಿತಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಹಾಗೂ
ಮಂಡ್ಯಜಿಲ್ಲಾ ಜನಪದ ಕಲಾಮೇಳ ಸ್ವಾಗತ ಸಮಿತಿ ನೀಡಿದ ಪ್ರಶಸ್ತಿ ಪತ್ರ



ಕರ್ನಾಟಕ ಜಾನಪದ ಟ್ರಸ್ಟ್

ಸ್ಥಾಪನೆ ೧೯೭೯

ನಂ. ೭, ಸುಬ್ರಮಣ್ಯಸ್ವಾಮಿ ದೇವಸ್ಥಾನದ ಬೀದಿ, ೩ನೆಯ ಬ್ಲಾಕ್, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-೫೬೦ ೦೨೦

ಶ್ರೀಮತಿ ಜಯಮ್ಮ, ಬುರ್ರಕಥಾ ಕಲಾವಿದೆ, ಮಂಡ್ಯ ಜಿಲ್ಲೆ ಅವರಿಗೆ

ಅಖಿಲ ಕರ್ನಾಟಕ ಆದಿವಾಸಿ ಮತ್ತು ಗ್ರಾಮೀಣ ಮಹಿಳೆಯರ ಜಾನಪದ ಮೇಳದಲ್ಲಿ ಭಾಗವಹಿಸಿದ್ದಕ್ಕಾಗಿ

ನೀಡಿದ ಪ್ರಶಸ್ತಿ ಪತ್ರ.


ಸ್ಥಳ ಬೆಂಗಳೂರು

ದಿನಾಂಕ ಮಾರ್ಚ್ 8 ರಿಂದ 10, 1992

ಎಚ್. ಎಲ್. ನಾಗೇಗೌಡ

ಅಧ್ಯಕ್ಷರು

ಕರ್ನಾಟಕ ಜಾನಪದ ಟ್ರಸ್ಟ್ ನೀಡಿದ ಪ್ರಮಾಣ ಪತ್ರ



ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಹಾಗೂ

ಜೆ ಎಸ್ ಎಸ್ ಮಹಾವಿದ್ಯಾಪೀಠ, ಮೈಸೂರು

ದೇಸಿ ಸಮ್ಮೇಳನ - ೨೦೦೯

ಜನಪದ ಕಾವ್ಯಗಳು

ದಿನಾಂಕ : ೧೮-೧೯, ಮತ್ತು ೨೦ ಮಾರ್ಚ್ ೨೦೦೯

ಪ್ರಮಾಣ ಪತ್ರ

ಶ್ರೀ / ಶ್ರೀಮತಿ / ಡಾ. ಬುರ್ರಕಥಾ ಜಯಮ್ಮ ಮತ್ತು ತಂಡದವರು ಅವರು


ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯ ನೇತೃತ್ವದಲ್ಲಿ ದಿನಾಂಕ : ೧೮-೧೯, ಮತ್ತು ೨೦ ಮಾರ್ಚ್ ೨೦೦೯ ರಂದು ಏರ್ಪಡಿಸಿದ ದೇಸಿ ಸಮ್ಮೇಳನದಲ್ಲಿ ಭಾಗವಹಿಸಿ ಬುರ್ರಕಥಾ ಮೇಳ ಎಂಬ ಪ್ರಬಂಧವನ್ನು ಮಂಡಿಸಿ ದೇಸಿ ಸಮ್ಮೇಳನವನ್ನು ಯಶಸ್ವಿಗೊಳಿಸಿದ್ದಾರೆ.

ಮುಖ್ಯಸ್ಥರು
ಜಾನಪದ ಅಧ್ಯಯನ ವಿಭಾಗ

ಕಾರ್ಯ ನಿರ್ವಾಹಕ
ಕಾರ್ಯದರ್ಶಿಗಳು

ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ ನೀಡಿದ ಪ್ರಮಾಣ ಪತ್ರ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - 2

ಜಲದುರ್ಗಾ ಯುವಕ ಸಂಘ (ರಿ.), ಹೇರಂಬಾಪುರ

ಕಟ್ಟೆಹಕ್ಕಲು ಅಂಚೆ :: ತೀರ್ಥಹಳ್ಳಿ ತಾ|| - 577 415

ಇವರ ಸಂಯುಕ್ತ ಆಶ್ರಯದಲ್ಲಿ

ಅಂತರ ಜಿಲ್ಲಾ ಜಾನಪದ ಕಲಾ ಮಹೋತ್ಸವ

ಪ್ರಶಸ್ತಿ ಪತ್ರ

ದಿನಾಂಕ 27-3-2001 ಮತ್ತು 28-3-2001 ರಂದು ಹೇರಂಬಾಪುರ ರಂಗಮಂದಿರದಲ್ಲಿ ನಡೆದ

ಅಂತರ ಜಿಲ್ಲಾ ಜಾನಪದ ಕಲಾ ಮಹೋತ್ಸವ ಕಾರ್ಯಕ್ರಮದಲ್ಲಿ


ಶ್ರೀ ....

ಇವರ ನೇತೃತ್ವದ .... ಜಾನಪದ ಕಲಾ ತಂಡ ಭಾಗವಹಿಸಿರುತ್ತದೆ.

FOR.

ಬಿ. ಜಿ. ನಾಗರಾಜ	ಎನ್. ಹುಚ್ಚಪ್ಪ ಮಾಸ್ತರ	ಪ್ರೊ|| ಕಾಳೇಗೌಡ ನಾಗವಾರ
ಅಧ್ಯಕ್ಷರು, ಜಲದುರ್ಗಾ ಯುವಕ ಸಂಘ (ರಿ.) ಹೇರಂಬಾಪುರ	ಸದಸ್ಯರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು	ಅಧ್ಯಕ್ಷರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ನೀಡಿದ ಪ್ರಶಸ್ತಿ ಪತ್ರ



ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ ೧೯೯೯

ಕರ್ನಾಟಕ ಜಾನಪದ
ಮತ್ತು
ಯಕ್ಷಗಾನ ಅಕಾಡೆಮಿ, ಬೆಂಗಳೂರು.
ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.
ಸ್ವಾಗತ ಸಮಿತಿ, ಮಂಡ್ಯ.

ಸಂಯುಕ್ತ ಆಶ್ರಯದಲ್ಲಿ ದಿನಾಂಕ ೨೨-೩-೧೯೯೯ ರಂದು ಮಂಡ್ಯದಲ್ಲಿ
ನಡೆದ ಜಿಲ್ಲಾ ಜನಪದ ಕಲಾವಿದರ ಸಮಾವೇಶದಲ್ಲಿ
ಶ್ರೀಮತಿ / ಶ್ರೀ .... ಇವರು ....ಬುರ್ರಕಥಾ.... ಕಲೆಯ
ಪ್ರದರ್ಶನ ನೀಡಿದ್ದಾರೆ.

(ಹೆಚ್.ಡಿ. ಚೌಡಯ್ಯ)	(ಪ್ರೊ. ಎಸ್.ಎನ್. ಹೆಗ್ಡೆ)	(ಪ್ರೊ. ಕಾಳೇಗೌಡ ನಾಗವಾರ)
ಅಧ್ಯಕ್ಷರು ಸ್ವಾಗತ ಸಮಿತಿ, ಮಂಡ್ಯ.	ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯ.	ಅಧ್ಯಕ್ಷರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

ಮಂಡ್ಯ ಜಿಲ್ಲಾ ಜನಪದ ಕಲಾವಿದರ ಸಮಾವೇಶ ೧೯೯೯ ನೀಡಿದ ಪ್ರಮಾಣ ಪತ್ರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಬೆಂಗಳೂರು

ಅರ್ಹತಾ ಪತ್ರ

ಶ್ರೀಮತಿ/ಶ್ರೀ ಬುರ್ರ ಕಥಾ ಜಯಮ್ಮ ಅವರು ಚೆಂಗೂರಿನಹಳ್ಳಿ

ದಿನಾಂಕ 22.06.2000 ರಂದು ನಡೆದ ಸಂಗೀತ ಜಾನಪದ

ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಬುರ್ರ ಕಥೆ ಕಲೆಯನ್ನು ಪ್ರದರ್ಶಿಸಿದ್ದಾರೆ.

ಕೆ. ಸುಧೀಂದ್ರ
ರಿಜಿಸ್ಟ್ರಾರ್

ಸಂಚಾಲಕರು

ಪ್ರೊ. ಕಾಳೇಗೌಡ ನಾಗವಾರ
ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ನೀಡಿದ ಅರ್ಹತಾ ಪತ್ರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಅರ್ಹತಾ ಪತ್ರ

ಶ್ರೀಮತಿ/ಶ್ರೀ [illegible] ರವರು

ದಿನಾಂಕ 29-5-96 ರಿಂದ

30-5-96 ರವರೆಗೆ ನಡೆದ

ದಲ್ಲಿ ಭಾಗವಹಿಸಿದ್ದಕ್ಕಾಗಿ ಈ ಅರ್ಹತಾ ಪತ್ರ ನೀಡಲಾಗಿದೆ.

ಸ್ಥಳ :


ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು


ಸದಸ್ಯ - ಸಂಚಾಲಕರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಹಾಗೂ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ನೀಡಿದ ಅರ್ಹತಾ ಪತ್ರ



ಹಿಮ್ಮೇಳದವರೊಂದಿಗೆ ಬುರ್ರಕಥಾ ಪ್ರದರ್ಶನ



ಜಯಮ್ಮ ಪಡೆದ ಪ್ರಶಸ್ತಿ, ಪುರಸ್ಕಾರಗಳು




ತಂಡದವರೊಂದಿಗೆ ಜಯಮ್ಮ ಪ್ರದರ್ಶನ ನೀಡುತ್ತಿರುವುದು



ಬುರ್ರಕಥಾ ಪ್ರದರ್ಶನ



ಜಯಮ್ಮ ಮತ್ತು ಆಕೆಯ ಮಗಳು ತಾವು ಪಡೆದ
ಪ್ರಶಸ್ತಿ ಪುರಸ್ಕಾರಗಳನ್ನು ಪ್ರದರ್ಶಿಸುತ್ತಿರುವುದು


ಮುಸ್ಸಂಜೆಗೆ ರಂಗು ತುಂಬಿದ ಜಾನಪದ

ಮೈಸೂರಿನ ರಂಗಾಯಣದಲ್ಲಿ ನೀಡಿದ ಬುರ್ರಕಥಾ
ಪದ್ರದಶನದ ಬಗ್ಗೆ ಪ್ರಜಾವಾಣಿಯಲ್ಲಿ ಪ್ರಕಟಗೊಂಡ ವರದಿ

ಪರಾಮರ್ಶನ ಗ್ರಂಥಗಳು

೧. ಬುರ್ರಕಥಾ ಈರಮ್ಮ ಅಲೆಮಾರಿಯ ಆತ್ಮಕಥನ– ಡಾ. ನಿಂಗಪ್ಪ ಮುದೇನೂರು, ವಿದ್ಯಾನಿಧಿ ಪ್ರಕಾಶನ, ಗದಗ–೨೦೦೫

೨. ಜಾನಪದ ಖಂಡಕಾವ್ಯಗಳು– ಜೀ.ಶಂ. ಪರಮಶಿವಯ್ಯ, ಸಾಗರ ಪ್ರಕಾಶನ, ಬೆಂಗಳೂರು– ೨೦೧೨

೩. ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು – ಜೀ.ಶಂ. ಪರಮಶಿವಯ್ಯ, ನಿರ್ದೇಶಕರು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೪. ಸೋಲಿಗರು– ಮೈನ. ನಾಗರಾಜ, ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು–೧೯೮೫



ಬುರ್ರಕಥಾ ಜಯಮ್ಮ

ಜಾಗತೀಕರಣ, ಆಧುನೀಕರಣದ ಪ್ರಭಾವದಿಂದಾಗಿ ದೇಸೀ ಕಲೆಗಳು ಅವಸಾನದ ಅಂಚಿಗೆ ಬಂದಿವೆ. ಈ ನಡುವೆಯೂ ಕೆಲವೊಂದು ಪ್ರದೇಶದಲ್ಲಿ ಕಲಾವಿದರು ತಮ್ಮ ಕಲೆಗಳನ್ನು ಜೀವಂತವಾಗಿಟ್ಟುಕೊಂಡು ಬರುತ್ತಿರುವುದು ಆಶಾದಾಯಕ ಬೆಳವಣಿಗೆ. ಕಲೆ ಮತ್ತು ಕಲಾವಿದರ ಬದುಕಿನ ಮಗ್ಗಲುಗಳನ್ನು ಅರ್ಥ ಮಾಡಿಕೊಳ್ಳುವ ಜರೂರು ಇರುವ ಈ ಸಂದರ್ಭದಲ್ಲಿ ಮಂಡ್ಯದ ಬುರ್ರಕಥಾ ಜಯಮ್ಮ ಅವರ ಬದುಕಿನ ಏಳು-ಬೀಳುಗಳು, ಬುರ್ರಕಥೆ ಕಲೆಯ ಸ್ವರೂಪ, ಸೋಲಿಗರ ಕುಲಮೂಲ ಕಥನಗಳನ್ನು ಸಂಕ್ಷಿಪ್ತವಾಗಿ, ಸಾಂದ್ರವಾಗಿ ಕಟ್ಟಿಕೊಡುವ ಪ್ರಯತ್ನ ಇಲ್ಲಿ ಯಶ ಕಂಡಿದೆ. ಮೌಖಿಕ ಕಥನ ಕಲೆಗಳು ವಾಚಿಕ ನೆಲೆಗೆ ಒದಗಿ ಕಲಾವಿದರ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುವ ಮೂಲಕ ಜನಪದ ಕಾವ್ಯಗಳ ಹಾಡುಗಾರಿಕೆಯ ತೌಲನಿಕ ಅಧ್ಯಯನದ ಸಾಧ್ಯತೆಗಳ ಕಡೆಗೆ ಬೆರಳು ಮಾಡುವ ಪ್ರಕೃತ ಕಿರು ಹೊತ್ತಿಗೆಯು ಓದಿಸಿಕೊಂಡು ಹೋಗುವ ಗುಣಪಡೆದುಕೊಂಡಿದೆ. ಭಾಷೆ ಸರಳವೂ ಸುಂದರವೂ ಆಗಿದ್ದು, ಈ ಪ್ರಮಾಣದ ಕೃತಿಯನ್ನು ರಚಿಸಿಕೊಟ್ಟ ಡಾ. ಕೆ. ಪ್ರೇಮಕುಮಾರ ಅವರಿಗೆ ಕೃತಜ್ಞತೆಗಳು ಸಲ್ಲಬೇಕು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

₹ ೪೦/-

ISBN 938314905-1
9 789383 149056
ISBN : 978-93-83149-05-6

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ